# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಸೆಪ್ಟಂಬರ್, ೨೦೧೪ ಸಂಪುಟ: ೪ ಸಂಚಿಕೆ: ೨

ಸಂಪಾದಕ : ಡಿ.ಎಸ್.ನಾಗಭೂಷಣ

**ಚಂದಾ** : ವಾರ್ಷಿಕ: ರೂ. ೧೫೦/-(ವ್ಯಕ್ತಿಗಳಿಗೆ) ರೂ.೨೫೦/-(ಸಂಸ್ಥೆ/ಗ್ರಂಥಾಲಯಗಳಿಗೆ) ಬಿಡಿ ಪ್ರತಿ: ರೂ. ೨೦/- ಪುಟ: ೨೪

**ವಿಳಾಸ:** ಎಚ್.ಐ.ಜಿ.-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

**ದೂ:** ೦೮೧೮೨-೨೪೮೫೭೪ **ಸಂಚಾರಿ:** ೯೪೪೯೨ ೪೨೨೮೪ ***ಈ ಮೇಲ್:*** dsnagabhushana@gmail.com

## ಸಂಪಾದಕರ ಟಿಪ್ಪಣಿಗಳು



**ಪ್ರಿ**ಯ ಓದುಗರೇ,

ಪತ್ರಿಕೆ ಮುದ್ರಣಕ್ಕೆ ಹೋಗುವ ಒಂದೆರಡು ದಿನಗಳ ಮುನ್ನ ಅನಂತಮೂರ್ತಿಯವರ ಸಾವಿನ ಸುದ್ದಿ ಬಂದಿದೆ. ಇವರ ಸಾವು ಕನ್ನಡಕ್ಕೆ ದೊಡ್ಡ ನಷ್ಟ ಎಂದು ಈ ಸಂದರ್ಭದಲ್ಲಿ ಹೇಳುವುದು ಕೇವಲ ಸುಲಭದ ಮಾತಾಗಿಬಿಡಬಹುದು. ಏಕೆಂದರೆ ಇವರ ಸಾವು ಒಂದರ್ಥದಲ್ಲಿ ಒಂದು ಯುಗದ ಸಾವು. ಲಂಕೇಶ್, ತೇಜಸ್ವಿ , ಚಿತ್ತಾಲ, ಶಾಂತಿನಾಥ ಮುಂತಾದ ಬಹು ದೊಡ್ಡ ಪತ್ರಿಭೆಗಳು ಸೇರಿ ಕಟ್ಟಿದ ಹೊಸ ಯುಗವೊಂದರ ಕೊನೆಯ ಪ್ರತಿನಿಧಿಯಾಗಿ ಅವರು ನಮ್ಮನ್ನು ಅಗಲಿ ಹೋಗಿದ್ದಾರೆ. ಅನಂತಮೂರ್ತಿ ತಮ್ಮ ಮೊದಲ ಕಾದಂಬರಿ 'ಸಂಸ್ಕಾರ'ದ ಮೂಲಕ ಕನ್ನಡಕ್ಕೆ ಹೊಸ ಸಂವೇದನೆ ಮತ್ತು ಆ ಮೂಲಕ ಬದುಕನ್ನು ನೋಡುವ ಒಂದು ಹೊಚ್ಚ ಹೊಸ ನೋಟಕ್ರಮವೊಂದನ್ನು ನೀಡಿದವರು. ನಂತರ ಅದರ ಸಾಧುತ್ವ ಚರ್ಚೆಗೀಡಾಯಿತು ಮತ್ತು ಅವರ ಪಾರ್ಥಿವ ಶರೀರದ ಸಂಸ್ಕಾರದ ರೀತಿ ನೀತಿಗಳನ್ನೇ ನೋಡಿ ಹೇಳುವುದಾದರೆ, ಸ್ವತಃ ಅವರಿಂದಲೇ ವಿಪರ್ಯಾಸಕರ ಪುನರ್ವಿಮರ್ಶೆಗೆ ಒಳಗಾಯಿತೆಂದು ಹೇಳಬಹುದಾದರೂ. ಅದೇನೇ ಇದ್ದರೂ, ಇದು ಇತ್ತೀಚೆಗೆ ತಾನೇ ನಮ್ಮ ವಿಶೇಷಾಂಕಕ್ಕಾಗಿ ಅವರನ್ನು- ಒಳಹೊಕ್ಕು- ಮಾತನಾಡಿಸಿ ಬಂದಿದ್ದ ನನಗೆ ವೈಯುಕ್ತಿಕವಾಗಿ ವಿಚಿತ್ರ ಸಂಕಟವನ್ನುಂಟು ಮಾಡಿರುವ ಸಾವು.

ಯು.ಆರ್. ಅನಂತಮೂರ್ತಿ ಆಧುನಿಕ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಲೋಕ ಕಂಡ ಒಂದು ಉಜ್ವಲ ಬೌದ್ಧಿಕ ವ್ಯಕ್ತಿತ್ವ. ಈ ಬೌದ್ಧೀಕತೆ ಎಷ್ಟೇ ವಿವಾದಾಸ್ಪದವಾದುದಾದರೂ, ಅದು ಕನ್ನಡಕ್ಕೆ ಒಳ್ಳೆಯದನ್ನೇ ಮಾಡಿದೆ, ಕನ್ನಡ ಮನಸ್ಸು ಜಡಗೊಳ್ಳದೆ ಸದಾ ಕ್ರಿಯಾಶೀಲ ಮತ್ತು ಸೃಜನಶೀಲವಾಗಿರುವಂತೆ ಮಾಡುವ ಮೂಲಕ. ಅವರ ದೌರ್ಬಲ್ಯಗಳನ್ನು ಹೇಳುವ ಸಂದರ್ಭ ಇದಲ್ಲ. ಹಾಗಾಗಿ ಒಂದೇ ಮಾತಲ್ಲಿ ಹೇಳುವುದಾದರೆ, ಕನಿಷ್ಟ ಅವರ ನಾಲ್ಕು ಕತೆಗಳು, ಮೂರು ಚಿಂತನೆಗಳು, ಎರಡು ಕವಿತೆಗಳು ಮತ್ತು ಒಂದು ಕಾದಂಬರಿ ಅವರನ್ನು ಕನ್ನಡ ಮನಸ್ಸಿನಲ್ಲಿ ಬಹುಕಾಲ ಉಳಿಯುವಂತೆ ಮಾಡಿದೆ. ಇದು ಬಹುಶಃ ಅವರ ಸಮಕಾಲೀನರಲ್ಲಿ ಬಹಳ ಜನಕ್ಕೆ ದೊರಕದ ಸೌಭಾಗ್ಯ. ಮಿಕ್ಕಂತೆ, ಅವರೊಡನೆಯ ಸಂದರ್ಶನದಲ್ಲಿಯೇ ಅವರ ಬಗ್ಗೆ ನಾನು ಹೇಳಬಹುದಾದದ್ದನ್ನೆಲ್ಲ ಸೂಚ್ಯವಾಗಿ ಹೇಳಿರುವುದರಿಂದ ಮತ್ತು ಮುಂದಿನ ಪುಟಗಳಲ್ಲಿ ಗೆಳೆಯ ಜಿ. ರಾಜಶೇಖರ್ ಒಂದು ಶ್ರದ್ಧಾಂಜಲಿ ಟಿಪ್ಪಣಿ ಬರೆದಿರುವುದರಿಂದ ಅವರ ಬಗ್ಗೆ ಇಲ್ಲಿ ಇನ್ನು ಹೆಚ್ಚು ಬರೆಯುವ ಅಗತ್ಯವಿಲ್ಲವೆಂದು ಭಾವಿಸಿರುವೆ.

* * *

ಮೋದಿ ನೇತೃತ್ವದ ಕೇಂದ್ರ ಸರ್ಕಾರ ಬೆಕ್ಕಿನಂತೆ ಸದ್ದಿಲ್ಲದ ಹೆಜ್ಜೆಗಳನ್ನು ಹಾಕುತ್ತಾ ನಡೆದಿದೆ. ಇದೇ ಹಲವರಲ್ಲಿ ತೀವ್ರ ಆತಂಕವನ್ನು ಉಂಟು ಮಾಡಿದೆ. ಸ್ವತಃ ಮೋದಿಯವರು ಯು.ಪಿ.ಎ. ಸರ್ಕಾರ ಆರಂಭಿಸಿ ಮುಗಿಸಿದ 'ಬೃಹತ್ ರೈಲ್ವೇ ಯೋಜನೆ, ಇಸ್ರೋ ಉಪಗ್ರಹ ಉಡಾವಣೆ, ವಿದ್ಯುತ್ ಯೋಜನೆ, ಅತ್ಯಾಧುನಿಕ ಸಮರ ನೌಕೆ ಇತ್ಯಾದಿಗಳನ್ನೆಲ್ಲ ದೇಶಕ್ಕೆ ಅರ್ಪಿಸುತ್ತಾ, ಈವರೆಗೆ ಆದದ್ದೆಲ್ಲ ದೇಶ ಹಾಳು ಮಾಡುವ ಕೆಲಸೆಂದೂ. ಮುಂದೆ 'ಅಚ್ಛೇ' ದಿನಗಳು ಬರಲಿವೆ ಎಂದು ಘೋಷಿಸುತ್ತಾ ತಿರುಗಾಡುತ್ತಿದ್ದಾರೆ. ಜನ ಮಾತ್ರ ತಮ್ಮ ನಿತ್ಯ ಬದುಕಿನಲ್ಲಿ ಆ 'ಅಚ್ಛೇ' ದಿನಗಳ ಯಾವ ಸೂಚನೆಗಳನ್ನು ಕಾಣಲಾಗದೆ ಅದರ ನಿಜವಾದ ಅರ್ಥಕ್ಕಾಗಿ ಸಿಕ್ಕ ಸಿಕ್ಕ ನಿಘಂಟುಗಳ ಹಾಳೆಗಳನ್ನು ತಿರುವಿಹಾಕುವಂತಾಗಿದೆ!

ಮೋದಿ ಸರ್ಕಾರ ಸದ್ದಿಲ್ಲದ ಬೆಕ್ಕಿನ ಹೆಜ್ಜೆಗಳನ್ನು ಹಾಕುತ್ತಿದೆ ಎಂದೆ. ಅದು ಮತ್ತೇನೂ ಅಲ್ಲ, ಇಂತಹ ಲೌಕಿಕ ಘೋಷಣೆಗಳ ಹಿಂದೆ ಸದ್ದಿಲ್ಲದೆ ನಡೆಯುತ್ತಿರುವ ಸರ್ಕಾರದ ಮೇಲೆ ನಿಯಂತ್ರಣ ಸಾಧಿಸಲು ಆರ್.ಎಸ್.ಎಸ್. ನಡೆಸುತ್ತಿರುವ ಪ್ರಯತ್ನ. ಬಿಜೆಪಿ ವಿರೋಧ ಪಕ್ಷದ ಸ್ಥಾನದಲ್ಲಿದ್ದಾಗಲೆಲ್ಲ ತನ್ನನ್ನು ಸಾಂಸ್ಕೃತಿಕ ಸಂಘಟನೆಯೆಂದು ಕರೆದುಕೊಳ್ಳುತ್ತಾ, ತನಗೂ ರಾಜಕಾರಣಕ್ಕೂ ಸಂಬಂಧವಿಲ್ಲವೆಂದೂ ಹೇಳುತ್ತಾ ಬಿಜೆಪಿ ಅಧಿಕಾರಕ್ಕೆ ಬಂದೊಡನೆ ತನ್ನ ರಾಜಕೀಯ ಕಾರ್ಯಚರಣೆ ಅರಂಭಿಸುವ ಆರೆಸ್ಸೆಸ್ ಈ ಬಾರಿ ಬಿಜೆಪಿ ಪೂರ್ಣ ಅಧಿಕಾರ ಪಡೆದಿರುವ ಸಂದರ್ಭದಲ್ಲಿ ತನ್ನ ರಾಜಕೀಯ ಆಟವನ್ನು ಪೂರ್ಣ ಪ್ರಮಾಣದಲ್ಲಿ ಆರಂಭಿಸಿದಂತಿದೆ. ರಾಮ್ ಮಾಧವ್ ಎಂಬ ಉನ್ನತ ಚಾಣಾಕ್ಷ(ಅಂದರೆ ಬೆಣ್ಣೆಯಲ್ಲಿ ಕೂದಲು ತೆಗೆಯುವಂತಹ ನಾಜೂಕು ಮಾತುಗಾರಿಕೆಯ) ಆರೆಸ್ಸೆಸ್ ಪದಾಧಿಕಾರಿಯನ್ನು ಬಿಜೆಪಿಯ ಪ್ರಧಾನ ಕಾರ್ಯದರ್ಶಿಯನ್ನಾಗಿ ಮಾಡಿ ಕಳಿಸಿದೆ. ಇನ್ನು ಅನುಮಾನಾಸ್ಪದ ವ್ಯಕ್ತಿ ಎನಿಸಿರುವ ಅಮಿತ್ ಶಾ ನೇತೃತ್ವದಲ್ಲಿ ನಡೆದಿರುವ ಪಕ್ಷದ ಪುನಾರಚನೆಯಲ್ಲಿ ಆರೆಸ್ಸೆಸಸ್ ನೇರ ಕೈವಾಡ ಕಾಣುವಂತಿದೆ. ಭಾರತದ ಚರಿತ್ರೆಯಲ್ಲಿನ ಅನೇಕ ಅನಾಹುತಗಳ ಹಿಂದೆ ಇದೆ ಎಂದು ಹೇಳಲಾಗುವ ಹಿಂದೂ ಪುರೋಹಿತಶಾಹಿಯ ಪ್ರತೀಕದಂತಿರುವ ಆರೆಸ್ಸೆಸ್, ತನ್ನನ್ನು ಹಿನ್ನೆಲೆಗೆ ಸರಿಸಿದ ಕಳೆದೊಂದು ಶತಮಾನದ ರಾಜಕಾರಣದ ಮೇಲೆ ಸೇಡು ತೀರಿಸಿಕೊಳ್ಳಹೊರಟಿರುವ ಎಲ್ಲ ಸೂಚನೆಗಳೂ ಈಗ ಕಾಣತೊಡಗಿವೆ. ಇಂತಹ ಅತಿ ದೊಡ್ಡ ಸೂಚನೆಯೆಂದರೆ ಅದು ಭಾರತದ ಚರಿತ್ರೆಯನ್ನು ಪುನಾರಚನೆ ಮಾಡಲು ಹೊರಟಿರುವ ಮಹಾ ಕಾರ್ಯಕ್ರಮ.

ಇಂತಹ ಪ್ರಯತ್ನವೊಂದು ಹಿಂದಿನ ಎನ್.ಡಿ.ಎ. ಸರ್ಕಾರದ ಕಾಲದಲ್ಲೇ ಶಾಲಾ ಕಾಲೇಜುಗಳ ಪಠ್ಯ ಮತ್ತು ಪಠ್ಯಕ್ರಮಗಳಲ್ಲಿ ಮತೀಯ ನೆಲೆಯ ಬದಲಾವಣೆಗಳನ್ನು ಮಾಡುವ ಪ್ರಯತ್ನಗಳು ಆರಂಭವಾದರೂ, ಅದು ಸಮ್ಮಿಶ್ರ ಸರ್ಕಾರವಾಗಿದ್ದುದರಿಂದ ಅದು ಪೂರ್ಣಗೊಳ್ಳಲಿಲ್ಲ. ಅದೀಗ ಒಂದು ಮಹಾ ಕಾರ್ಯಕ್ರಮದ ರೂಪದಲ್ಲಿ, ಅಂದರೆ ಕಳೆದೊಂದು

ಶತಮಾನದಲ್ಲಿ ಪುರೋಹಿತಶಾಹಿಯ ಪ್ರಭಾವದಿಂದ ಕಳಚಿಕೊಂಡು ನಾವು ಕಟ್ಟಿಕೊಂಡ ಚರಿತ್ರೆಯ ವಾಸ್ತುವನ್ನೇ ಕೆಡಹುವ ಕಾರ್ಯಕ್ರಮವಿದು. ಇದು ಜನತೆ ನಡೆಸಿದ ರಾಷ್ಟ್ರೀಯ ಆಂದೋಲನ ಕಟ್ಟಿಕೊಂಡ ಆದರ್ಶ–ಆಶಯಗಳನ್ನೇ ಅನುಮಾನಾಸ್ಪದಗೊಳಿಸಿ ನಾಶ ಮಾಡುವ ರಾಜಕೀಯ ಪಿತೂರಿಯೇ ಆಗಿದೆ. ಗಾಂಧಿ–ಗೋಖಲೆ–ವಿವೇಕನಂದ–ಟ್ಯಾಗೋರ್–ಅಂಬೇಡ್ಕರ್–ಲೋಹಿಯಾ–ಜೆಪಿ–ಕುವೆಂಪು ಪೋಷಿಸಿದ ಮೌಲ್ಯಗಳನ್ನು ಆಧರಿಸಿದ ಆಲೋಚನಾ ಲಹರಿಯನ್ನು ಕತ್ತರಿಸಿ ಹಾಕುವ ಕಾರ್ಯಕ್ರಮವಿದು. ಇದು ಈಗಾಗಲೇ ಗುಜರಾತ್‌ನ ಪಠ್ಯ ಮತ್ತು ಪಠ್ಯಕ್ರಮದಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತರುವ ಪ್ರಯತ್ನ ನಡೆದಿದೆ.ಇದನ್ನು ಬಿಜೆಪಿಯ ಈಗಿನ ಮಿತ್ರ ಪಕ್ಷಗಳಾದ ಶಿವಸೇನೆ, ಅಕಾಲಿದಳ, ತೆಲುಗುದೇಶಂ ಅಥವಾ ಎಲ್.ಜೆ.ಪಿ. ಮುಂತಾದವಕ್ಕೆ ಗಂಭೀರವಾಗಿ ಪರಿಗಣಿಸುವ ಒಲವಾಗಲೀ, ಪ್ರಬುದ್ಧತೆಯಾಗಲಿ, ತಾಕತ್ತಾಗಲೀ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ರಾಜಕೀಯ ಅನುಕೂಲ ಪರಿಸ್ಥಿತಿಯಾಗಲೀ ಇಲ್ಲ ಎಂಬುದೂ ಇಲ್ಲಿ ಮುಖ್ಯ.

ನಿಜ, ಎಡಪಂಥೀಯರೆನಿಸಿಕೊಂಡವರೂ ಪ್ರಗತಿಪರತೆ, ಜನಪರತೆಯ ಹೆಸರಿನಲ್ಲಿ ಕಳೆದೊಂದು ಶತಮಾನದಲ್ಲಿ ತಮ್ಮ ಆಟ ಆಡಿದ್ದಾರೆ. ಅನೇಕ ಅನಾಹುತಗಳನ್ನೂ ಮಾಡಿದ್ದಾರೆ. ಹಾಗೇ ನೋಡಿದರೆ ಈ ಅನಾಹುತಗಳ ಸಂಚಯಿತ ರೂಪವಾಗಿಯೇ ಇಂದು ನಾವು ಮೋದಿ ಸರ್ಕಾರವನ್ನು, ಆರೆಸ್ಸೆಸ್‌ನ ರಾಜಕಾರಣದ ಮೇಲಾಟವನ್ನು ಕಾಣಬೇಕಾಗಿರುವುದು. ಇದರಲ್ಲಿ ಅತಿ ದೊಡ್ಡ ಪಾತ್ರ ವಹಿಸಿರುವುದು ಕಾಂಗ್ರೆಸ್ಸಿನ ಆತ್ಮದ್ರೋಹಿ ರಾಜಕಾರಣವೇ. ಆ ಪಾಪದ ಫಲವಾಗಿಯೇ ಅದು ಈಗ ವಿರೋಧ ಪಕ್ಷದ ಅಧಿಕೃತ ಸ್ಥಾನಮಾನಕ್ಕೂ ಕಂಡಕಂಡವರನ್ನು ಕಾಡಿಬೇಡುವ ದುಃಸ್ಥಿತಿಗೆ ಈಡಾಗಿದೆ. ಅದೇನೇ ಇರಲಿ, ಎಡಪಂಥೀಯರು ಎಂದೂ ಹಿಂದೂ ಪುರೋಹಿತಶಾಹಿಯೊಂದಿಗೆ ರಾಜಿ ಮಾಡಿಕೊಂಡಿಲ್ಲ. ಅವರ ಲೋಪವೇನಿದ್ದರೂ, ಹಿಂದೂ ಪುರೋಹಿತಶಾಹಿಯನ್ನೆದುರಿಸುವ ಆವೇಶದಲ್ಲಿ ಇತರೆ ಪುರೋಹಿತಶಾಹಿಗಳ(ಆಧುನಿಕತೆಯ ರೂಪದ ಕ್ರಿಶ್ಚಿಯನ್ ಪುರೋಹಿತಶಾಹಿಯೂ ಸೇರಿದಂತೆ) ಅಪಾಯಗಳನ್ನು ಗಮನಿಸಲಿಲ್ಲ ಎಂಬುದು.

ಈ ಎಲ್ಲ ಆತ್ಮದ್ರೋಹ ಮತ್ತು ಎಚ್ಚರದಪ್ಪಿದ ರಾಜಕಾರಣದ ಪ್ರಾಯಶ್ಚಿತ್ತವಾಗಿಯಾದರೂ ಈ ಎಲ್ಲರೂ, ಎಡ–ಬಲಗಳೆಂಬ ತಾತ್ವಿಕ ಅಹಂಕಾರ ರೂಪಗಳನ್ನು ತೊರೆದು, ಮೋದಿ ಸರ್ಕಾರದ ಹಿಂದೂ ಪುರೋಹಿತಶಾಹಿ ರಾಜಕಾರಣವನ್ನು ಎದುರಿಸಲು ಒಗ್ಗಟ್ಟಾಗಬೇಕಿದೆ. ಏಕೆಂದರೆ ಇದು ಮೋದಿಯವರ ಅಭಿವೃದ್ಧಿ ಮಾದರಿ ಪ್ರತಿನಿಧಿಸುವ ರಾಜಕಾರಣಕ್ಕಿಂತ ಮೂಲಭೂತವಾಗಿ ಹೆಚ್ಚು ಅಪಾಯಕಾರಿಯಾದ ರಾಜಕಾರಣ. ಇದನ್ನು ಎದುರಿಸಲು ನಾವು ಮೋದಿಯವರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವ ಹಂತವೂ ಬರಬಹುದೆಂಬ ಕಾರಣದಿಂದಲೇ ನಾನು ಎಡ–ಬಲಗಳ ತಾತ್ವಿಕ ಅಹಂಕಾರ ಬೇಡವೆಂದದ್ದು. ಈ ಸೂಕ್ಷ್ಮವನ್ನು ಎಡಪಂಥೀಯರು ಈಗಲೂ ಅರ್ಥ ಮಾಡಿಕೊಳ್ಳದಿದ್ದರೆ, ಅವರ ರಾಜಕಾರಣದ ಶಕ್ತಿಯೆಲ್ಲ ಬೀದಿಗಳಲ್ಲಿ ಮೋದಿ ವಿರುದ್ಧ ಅಸಂಬದ್ಧವಾಗಿ ಅರಚುವುದರಲ್ಲೇ ಮುಗಿದುಹೋಗಬಹುದು. ಅಂದರೆ ಮತ್ತೆ ಅದೇ ರಾಜಕೀಯ ಸೈಕಲ್ ಹೊಡೆಯುವ ಕಾರ್ಯಕ್ರಮ. ಹಾಗಾಗಿ ಈಗಲಾದರೂ ಎಡಪಂಥೀಯರೆನಿಸಿಕೊಂಡವರು ತಮ್ಮ ರಾಜಕಾರಣಕ್ಕೆ ಆಳದ ತೀವ್ರತೆಯನ್ನೂ, ಪರಿಣಾಮಶೀಲತೆಯನ್ನೂ ಒದಗಿಸುವ ಸ್ವಲ್ಪ ದೂರದೃಷ್ಟಿಯ, ವ್ಯವಧಾನದ ಮತ್ತು ಸಂಯಮಶೀಲವಾದ ರಾಜಕಾರಣವನ್ನು ಆರಂಭಿಸಬೇಕಿದೆ. ಅದರ ಮುಖ್ಯ ದೃಷ್ಟಿ ಕೇಂದ್ರ ನಮ್ಮ ರಾಷ್ಟ್ರೀಯ ಆಂದೋಲನ ಎರಕ ಮಾಡಿಕೊಟ್ಟ ಮೌಲ್ಯಗಳನ್ನು ಸಂರಕ್ಷಿಸಿಕೊಳ್ಳುವುದೇ ಆಗಿದೆ.

ಇನ್ನು ನಮ್ಮ ಮುಖ್ಯ ಮಂತ್ರಿ ಹೊಸ ಬುದ್ಧಿ ಪಡೆದುಕೊಂಡಂತೆ ಇತ್ತೀಚೆಗೆ ಎರಡು ಒಳ್ಳೆಯ ನಿರ್ಧಾರಗಳನ್ನು ತೆಗೆದುಕೊಂಡಿದ್ದಾರೆ. ಒಂದು, ಕೆ.ಪಿ.ಎಸ್.ಸಿ.ಯ ೨೦೧೧ರ ಕೆ.ಎ.ಎಸ್. ಅಧಿಕಾರಿಗಳ ಆಯ್ಕೆ ಪಟ್ಟಿಯನ್ನು ರದ್ದುಗೊಳಿಸಿರುವುದು. ಇನ್ನೊಂದು ಪ್ರಧಾನಿ ಮೋದಿಯವ ಸರ್ಕಾರಿ ಸಮಾರಂಭಗಳಿಗೆ ಕಾಂಗ್ರೆಸ್ ಮುಖ್ಯಮಂತ್ರಿಗಳು ಹೋಗಬಾರದೆಂಬ ಪಕ್ಷದ ಸೂಚನೆಯನ್ನು ಒಪ್ಪಲಾರೆ ಎಂದಿರುವುದು. ಬಹುಶಃ ಇದನ್ನು ಮಾನ್ಯ ಮಾಡಿಯೇ ಮೊನ್ನೆಯ ಉಪಚುನಾವಣೆಗಳಲ್ಲಿ ಜನತೆ ಸಿದ್ಧರಾಮಯ್ಯನವರ ನಾಯಕತ್ವವನ್ನು ಬೆಂಬಲಿಸಿದಂತಿದೆ. ಸಿದ್ಧರಾಮಯ್ಯ ಮೇಲೆ ವಿವರಿಸಿದಂತಹ ತುರ್ತು ರಾಷ್ಟ್ರೀಯ ರಾಜಕಾರಣದ ದೃಷ್ಟಿಯಿಂದಲಾದರೂ ತಮ್ಮ ತುಕ್ಕುಹಿಡಿದ ಸಾಮಾಜಿಕ ನ್ಯಾಯವೇ ಪ್ರಗತಿಪರ ರಾಜಕಾರಣ ಎಂಬ ಭ್ರಮೆಯಿಂದ ಹೊರಬಂದು ನಿಜವಾದ ಜನತೆಯ ರಾಜಕಾರಣ ಮಾಡುವಂತಾಗಲಿ ಎಂದು ಈ ನಿರ್ಣಾಯಕ ಸಂದರ್ಭದಲ್ಲಿ ಹಾರೈಸುವೆ.

ಇನ್ನು ನಮ್ಮ ವಿಶೇಷಾಂಕಕ್ಕೆ ನಮ್ಮ ಓದುಗರಿಂದ ತುಂಬು ಹೃದಯದ ಸ್ವಾಗತ ದೊರಕಿದೆ. ನಮ್ಮ ಪರಿಶ್ರಮ ಸಾರ್ಥಕ ಎನ್ನಿಸಿದೆ. ಅವರೆಲ್ಲರ ಪ್ರತಿಕ್ರಿಯೆ–ಪತ್ರಗಳನ್ನು ಈ ಸಂಚಿಕೆಯನ್ನು ೨೪ ಪುಟಗಳಿಗೆ ವಿಸ್ತರಿಸಿದ್ದರೂ(ಇದು ಮುಂದೆ ನಿಯಮಿತ ಪುಟ ಸಂಖ್ಯೆಯಾಗೇನೂ ಇರುವುದಿಲ್ಲ ಎಂಬುದು ಬೇರೆ ವಿಷಯ) ಪ್ರಕಟಿಸಲು ಸಾಧ್ಯವಾಗುತ್ತಿಲ್ಲ. ಜೊತೆಗೆ, ವಿಶೇಷಾಂಕ ನಮ್ಮ ಓದುಗರಿಗೆ ತಲುಪಿ ಬಹಳ ದಿನಗಳೇನೂ ಆಗಿಲ್ಲವಾದ್ದರಿಂದ, ಇನ್ನೂ ಪತ್ರಗಳು ಬರುತ್ತಿದ್ದು ಅವನ್ನೆಲ್ಲ ಒಟ್ಟಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವ ಪ್ರಯತ್ನಮಾಡಲಾಗುವುದು. ಸದ್ಯಕ್ಕೆ ಬಂದಿರುವ ಕೆಲ ಪತ್ರಗಳನ್ನಷ್ಟೇ ಐದನೇ ಪುಟದಲ್ಲಿ ಪ್ರಕಟಿಸಲಾಗಿದೆ.

ಈ ಮಧ್ಯೆ ವಿಶೇಷಾಂಕದಲ್ಲಿ ಪ್ರಕಟವಾಗಿರುವ ಗಿರೀಶ್ ಕಾಸರವಳ್ಳಿಯವರೊಡನೆಯ ಪ್ರಶ್ನೋತ್ತರದಲ್ಲಿ ಡಬ್ಬಿಂಗ್ ಕುರಿತ ಅವರ ನಿಲುವಿನ ಬಗ್ಗೆ ನಾನು ಕೇಳಿದ್ದ ಉಪ ಪ್ರಶ್ನೆಗೆ ಅವರೀಗ ಉತ್ತರ ಬರೆದು ಕಳಿಸಿದ್ದಾರೆ. ನನ್ನ ಉಪ ಪ್ರಶ್ನೆಗೆ, ತಾವು ಅಡೂರು ಗೋಪಾಲಕೃಷ್ಣನ್ ಕುರಿತ ಸಾಕ್ಷ್ಯ ಚಿತ್ರದ ಚಿತ್ರೀಕರಣದಲ್ಲಿ ತೊಡಗಿದ್ದರಿಂದಾಗಿ ಮತ್ತು ತಮ್ಮ ಬರವಣಿಗೆಯ ವೇಗ ತುಂಬಾ ಕಡಿಮೆ ಇರುವುದರಿಂದಾಗಿ ತಕ್ಷಣ ಉತ್ತರ ಕೊಡಲಾಗಲಿಲ್ಲವೆಂದೂ ಹೇಳಿದ್ದಾರೆ. ಅವರ ಈ ಸೌಜನ್ಯಕ್ಕೆ ಪತ್ರಿಕೆ ಋಣಿಯಾಗಿದೆ. ಅವರು ತಮ್ಮ ಈ ಉತ್ತರದೊಂದಿಗೆ ಡಬ್ಬಿಂಗ್ ಕುರಿತಂತೆ ಚಿತ್ರೋದ್ಯಮದ ಸಹಮನಸ್ಕರೊಂದಿಗೆ ನೀಡಿದ್ದ ಪತ್ರಿಕಾ ಪ್ರಕಟಣೆಗಳನ್ನು ಕಳಿಸಿರುವರಾದರೂ, ಅದು ದೀರ್ಘವಾಗಿರುವುದರಿಂದ ಅವರ ಉತ್ತರವನ್ನು ಸಂಕ್ಷಿಪ್ತಗೊಳಿಸಿ ಇಲ್ಲಿ ನೀಡುತ್ತಿರುವೆ:

೧. ಕನ್ನಡ ಚಿತ್ರೋದ್ಯಮ ಹಿಂದಿನ ದಿನಗಳಿಗೆ ಹೋಲಿಸಿದರೆ, ಬಂಡವಾಳ ಹೂಡಿಕೆಯ ವಿಷಯದಲ್ಲಿ ಸಾಕಷ್ಟು ಬೆಳೆದಿದೆಯಾದರೂ, ಅದೇ ಅವಧಿಯಲ್ಲಿ ಅದು ಸ್ಪರ್ಧಿಸಬೇಕಾದ ತಮಿಳು–ತೆಲುಗು–ಹಿಂದಿ ಚಿತ್ರೋದ್ಯಮವೂ ಅದಕ್ಕಿಂತ ಹೆಚ್ಚು ಗಾತ್ರದಲ್ಲಿ ಬೆಳೆದಿದೆ. ಜೊತೆಗೆ ಈಗ ಪ್ರಚಾರಕ್ಕೆ ಪ್ರಾಮುಖ್ಯ ದೊರೆತಿರುವುದರಿಂದ ಕನ್ನಡ ಚಿತ್ರಗಳಿಗೆ ಪ್ರಚಾರ ಅವಕಾಶಗಳು–ಕನ್ನಡ ಮಾಧ್ಯಮಗಳ ಸೀಮಿತತೆಯಿಂದಾಗಿ–ಕಡಿಮೆ ಮತ್ತು ಅವುಗಳ ಪ್ರಚಾರ ಬಜೆಟ್ ಕೂಡ ಕಡಿಮೆ.

೨. ಇಂದಿನ ಟಿ.ವಿ. ಧಾರಾವಾಹಿಗಳನ್ನು ಗಮನಿಸಿದರೇ ಗೊತ್ತಾಗುತ್ತದೆ, ರಿಮೇಕ್ ಧಾರಾವಾಹಿಗಳು ಮೂಲ ಕನ್ನಡ ಕಥಾಧಾರಿತ ಧಾರವಾಹಿಗಳನ್ನು ನುಂಗಿ ಹಾಕುತ್ತಿವೆ ಎಂಬುದು.

ಕಾಸರವಳ್ಳಿಯವರ ಈ ಮಾತುಗಳಿಗೆ ನನ್ನದೇನೂ ಪ್ರತಿಕ್ರಿಯೆ ಇಲ್ಲ. ಒಂದು ಮಾತಿನ ಹೊರತಾಗಿ: ತೆಲುಗು ತಮಿಳು ಚಿತ್ರೋದ್ಯಮಗಳೂ ತನಗಿಂತ ದೊಡ್ಡದಾದ ಚಿತ್ರೋದ್ಯಮಗಳೊಂದಿಗೆ ಸ್ಪರ್ಧೆಯಲ್ಲಿದ್ದೂ ಡಬ್ಬಿಂಗ್‌ನ್ನು ವಿರೋಧಿಸದೇ ಬದುಕುತ್ತಿರುವಾಗ ಕನ್ನಡ ಚಿತ್ರೋದ್ಯಮವೇಕೆ ತನ್ನ ಆತಂಕಗಳಿಗೆ ಈ ವಿರೋಧದ ಹೊರತಾಗಿ ಬೇರೆ ಪರಿಹಾರ ಮಾರ್ಗಗಳನ್ನು ಹುಡುಕಿಕೊಳ್ಳುತ್ತಿಲ್ಲ?

ಇನ್ನು ಎರಡು ಮುಖ್ಯ ತಿದ್ದುಪಡಿಗಳು:

ವಿಶೇಷಾಂಕದಲ್ಲಿ ರಾಜೇಂದ್ರ ಚೆನ್ನಿಯವರ ಲೇಖನದಲ್ಲಿ ಮುಖ್ಯವಾಗಿ ಎರಡು ಕಡೆ ಅವರ ಇಂಗ್ಲಿಷ್ ಶಬ್ದಗಳು ಇಂಗ್ಲಿಷ್ ಅಕ್ಷರ್ರಗಳಿಗೆ ಪರಿವರ್ತಿತವಾಗದೇ ಉಳಿದು ಹೋಗಿವೆ. ಅಂದರೆ, ೫೨ನೇ ಪುಟದ ಮೊದಲ ಪ್ಯಾರಾದಲ್ಲಿನ ಕೊನೆಯ ಸಾಲನ್ನು ಹೀಗೆ ಓದಿಕೊಳ್ಳಬೇಕು:

ಆದರೆ ಈ ಮಹಾನಗರಗಳ ಪಂಚತಾರಾ ಹೋಟೆಲುಗಳಲ್ಲಿ North Eastern Delicacies ಗಳು ಲಭ್ಯವಿವೆ. ಅದಕ್ಕೆ ಹೇಳಿದ್ದು ಜಾಗತೀಕರಣವು ಮೆಚ್ಚುವ Multi-cuisine ಒಂದು ಶ್ರೀಮಂತವಾದ ರೂಪಕ–ನಮ್ಮ ಕಾಲದ ಭೀಕರ ಹಿಂಸೆಗಳಿಗೆ.

ಇನ್ನೊಂದು ತಿದ್ದುಪಡಿ ಎಂದರೆ ೬೫ನೇ ಪುಟದಲ್ಲಿ ಪ್ರಕಟವಾಗಿರುವ Your Cabs ಜಾಹೀರಾತಿನಲ್ಲಿ ಆ ಸಂಸ್ಥೆಯ ದೂರವಾಣಿ ಸಂಖ್ಯೆ ತಪ್ಪಾಗಿ ಬಿದ್ದಿದ್ದು ಅದು ಹೀಗಿರಬೇಕು: **080– 30 600 600**

–ಈ (ಮತ್ತು ಇನ್ನೂ ಗೊತ್ತಿಲ್ಲದ ಹಲವು!) ಪ್ರಮಾದಗಳಿಗಾಗಿ ಕ್ಷಮೆ ಇರಲಿ.

**–ಸಂಪಾದಕ**

# ಬೆಂಗಳೂರಿನಲ್ಲಿ 'ಹಿಂದ್ ಸ್ವರಾಜ್' ಕಾರ್ಯಾಗಾರ ಮತ್ತು 'ಹೊಸ ಮನುಷ್ಯ' ವಿಶೇಷಾಂಕ ಬಿಡುಗಡೆ



೧೯೪೨ರಲ್ಲಿ ಗಾಂಧೀಜಿ, ಬ್ರಿಟಿಷರಿಗೆ 'ಭಾರತ ಬಿಟ್ಟು ಹೊರಡಿ' ಎಂದು ಆಗ್ರಹಿಸಿದಾಗ, ಅದರ ಅರ್ಥ ಕೇವಲ ಅವರು ಭಾರತವನ್ನು ಭೌತಿಕವಾಗಿ ಬಿಟ್ಟು ಹೋಗಬೇಕು ಎಂದಾಗಿರದೆ, ಬ್ರಿಟಿಷತ್ವ ಅಥವಾ ಬ್ರಿಟಿಷ್ ವ್ಯವಸ್ಥೆ ಭಾರತವನ್ನು ಬಿಟ್ಟು ಹೋಗಬೇಕೆಂಬುದಾಗಿತ್ತು ಎಂದು ಸಮಾಜವಾದಿ ಚಿಂತಕ ಡಿ. ಎಸ್. ನಾಗಭೂಷಣ ಹೇಳಿದರು. ಅವರು ಆಗಸ್ಟ್ ೯ರಂದು ಬೆಂಗಳೂರಿನ ಗಾಂಧಿ ಭವನದಲ್ಲಿ ಗಾಂಧಿ ಸ್ಮಾರಕ ನಿಧಿ, ಶಿವಮೊಗ್ಗದ ಲೋಹಿಯಾ ಪ್ರತಿಷ್ಠಾನ, ಗಾಂಧಿ ಶಾಂತಿ ಪ್ರತಿಷ್ಠಾನ, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳು ಒಟ್ಟಾಗಿ ಆಯೋಜಿಸಿದ್ದ 'ಕ್ವಿಟ್ ಇಂಡಿಯಾ: ಒಂದು ನೆನಪು ಹಾಗೂ ಹಿಂದ್ ಸ್ವರಾಜ್: ಒಂದು ಪುನರಾವಲೋಕನ' ಕಾರ್ಯಕ್ರಮದಲ್ಲಿ ಹಿಂದ್ ಸ್ವರಾಜ್ ಕುರಿತ ಕಾರ್ಯಾಗಾರದ ಪ್ರವೇಶ ಭಾಷಣ ಮಾಡುತ್ತಿದ್ದರು.

'ಕ್ವಿಟ್ ಇಂಡಿಯಾ' ದಿನವನ್ನು ಈ ನೆಲೆಯಲ್ಲಿ ಅರ್ಥ ಮಾಡಿಕೊಳ್ಳದ ಹೊರತು ಅದರ ಆಚರಣೆಗೆ ಅರ್ಥವಿಲ್ಲ ಎಂದ ನಾಗಭೂಷಣ ಅವರು, ಗಾಂಧಿಯವರ ಈ ಭಾವನೆಯನ್ನು ಅವರ 'ಹಿಂದ್ ಸ್ವರಾಜ್'ನ್ನು ಓದಿ ಅರ್ಥ ಮಾಡಿಕೊಳ್ಳಬಹುದಾಗಿದೆ ಎಂದು ಹೇಳಿದರು. ಬ್ರಿಟಿಷರು ಭಾರತವನ್ನು ವಶಪಡಿಸಿಕೊಂಡದ್ದು ಪಶ್ಚಿಮದ ಆಧುನಿಕ ನಾಗರೀಕತೆಯ ಮೋಹಕ್ಕೆ ನಮ್ಮನ್ನು ಸಿಲುಕಿಸುವ ಮೂಲಕ ಎಂದು ಗಾಂಧಿ ಗ್ರಹಿಸಿದ್ದರು. ಹಾಗಾಗಿ, ಭಾರತದ ಬಿಡುಗಡೆ ಎಂದರೆ ಆಧುನಿಕ ನಾಗರೀಕತೆಯಿಂದ ಬಿಡುಗಡೆ ಎಂದು ಅರಿತು, ಅವರು ಅದರ ದುಷ್ಟ ಲಕ್ಷಣಗಳಾದ ದೇಹ ಸುಖ ಪ್ರಾಧಾನ್ಯತೆಯಿಂದ ಮತ್ತು ಅದನ್ನು ಪೋಷಿಸುವ ಅತಿಯಾದ ದಾಹ ಮತ್ತು ಧಾವಂತಗಳನ್ನು ನಿಯಂತ್ರಿಸಿಕೊಳ್ಳಬೇಕಾಗಿದೆ ಎಂದು ಹೇಳಿದರು. ಈ ಸ್ವಯಂ ನಿಯಂತ್ರವಣವನ್ನೇ ಗಾಂಧಿ ಸ್ವರಾಜ್ಯ ಎಂಬ ಕಲ್ಪನೆಯಾಗಿ ವಿಸ್ತರಿಸಿದರು ಎಂದು ನಾಗಭೂಷಣ ಹೇಳಿದರು.

ಇದಕ್ಕೂ ಮುನ್ನ ಸಮಾರಂಭವನ್ನು ಸಾಂಕೇತಿಕವಾಗಿ ಚರಕಾ ತಿರುಗಿಸುವ ಮೂಲಕ ಉದ್ಘಾಟಿಸಿದ ರಾಜ್ಯದ ಗ್ರಾಮೀಣಾಭಿವೃದ್ಧಿ ಸಚಿವ ಎಚ್.ಕೆ. ಪಾಟೀಲ ಅವರು, ಸ್ವಾತಂತ್ರ್ಯಾನಂತರ ದೇಶದ ಜನತೆಗೆ ಪೌಷ್ಠಿಕ ಆಹಾರವನ್ನಿರಲಿ, ಸ್ವಚ್ಛ ಕುಡಿಯುವ ನೀರು ಮತ್ತು ಶೌಚಾಲಯಗಳನ್ನು ಕೂಡ ಒದಗಿಸದೇ ನಾವು ಗಾಂಧಿಯ ಹೆಸರನ್ನು ಹೇಳಲು ನಾಚಿಕೆ ಪಡುವಂತಾಗಿದೆ ಎಂದರು. ಹಾಗಾಗಿ ೧೫೦ನೇ ಗಾಂಧಿ ಜಯಂತಿಯನ್ನು ಆಚರಿಸುವ ೨೦೧೯ರ ಹೊತ್ತಿಗೆ ರಾಜ್ಯವನ್ನು ಬಯಲು ಶೌಚಾಲಯ ಮುಕ್ತವನ್ನಾಗಿ ಮಾಡಿ, ಗ್ರಾಮೀಣ ಜನರಿಗೆ ಸ್ವಚ್ಛ ಕುಡಿಯುವ ನೀರು ಒದಗಿಸಲು ರಾಜ್ಯ ಸರ್ಕಾರ ಪಣ ತೊಟ್ಟಿರುವುದಾಗಿ ಹೇಳಿದರು.

ಇದೇ ಸಂದರ್ಭದಲ್ಲಿ ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ವುಡೇ ಪಿ. ಕೃಷ್ಣ, ವಿನೋಬಾರ 'ಮೃತ್ಯು' ಮತ್ತು ವೇಮಗಲ್ ಸೋಮಶೇಖರ್‌ರ 'ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ' ಎಂಬ ಕಿರುಪುಸ್ತಕಗಳನ್ನು ಬಿಡುಗಡೆ ಮಾಡಿದರು. ರಾಜ್ಯದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಎನ್ ವಿಶುಕುಮಾರ್ ಮುಖ್ಯ ಅತಿಥಿಯಾಗಿ ಮಾತನಾಡಿ, ಗಾಂಧಿ ಜಯಂತಿಯನ್ನು ರಾಜ್ಯ ಸರ್ಕಾರ ಆಚರಿಸಲು ರೂಪಿಸಿರುವ ಯೋಜನೆಯನ್ನು ವಿವರಿಸಿದರು.

ಅಧ್ಯಕ್ಷತೆ ವಹಿಸಿದ್ದ ಗಾಂಧಿ ಸ್ಮಾರಕ ನಿಧಿಯ ಹೊ. ಶ್ರೀನಿವಾಸಯ್ಯ ಅವರು, ದೇಶ ಕಟ್ಟುವ ಕಾರ್ಯದಲ್ಲಿ ಯುವಜನ ಮುಂದಾಗಬೇಕೆಂದು ಕರೆಕೊಟ್ಟರು. ಇದೇ ಸಂಸ್ಥೆಯ ಗೌರವ ಕಾರ್ಯದರ್ಶಿ ಪ್ರೊ. ಶಿವರಾಜ್ ಕಾರ್ಯಕ್ರಮ ನಿರೂಪಿಸಿದರು.

ಮಧ್ಯಾಹ್ನ ಹಿಂದ್ ಸ್ವರಾಜ್ ಕುರಿತ ಕಾರ್ಯಾಗಾರ ಮುಂದುವರೆದು ಮೊದಲ ಗೋಷ್ಠಿಯಲ್ಲಿ ಡಾ. ಎಚ್.ಎ. ಶಂಕರನಾರಾಯಣ ಅವರು 'ತಂತ್ರಜ್ಞಾನ ಎಷ್ಟು? ಹೇಗೆ?' ವಿಷಯ ಕುರಿತು ಮಾತನಾಡುತ್ತಾ, ಈಗ ತಂತ್ರಜ್ಞಾನದ ಏಕೀಕರಣವಾಗುತ್ತಾ ತಂತ್ರಜ್ಞಾನವೇ ತಯಾರಿಕೆಯೂ ಆಗಿದ್ದು ಇನ್ನು ಮುಂದೆ ಉದ್ಯೋಗಾವಕಾಶಗಳೇ ಇರುವುದಿಲ್ಲ ಎಂದರು. ಎರಡನೇ ಗೋಷ್ಠಿಯಲ್ಲಿ ಪ್ರೊ. ಎಚ್. ಗೋವಿಂದಯ್ಯ 'ಗ್ರಾಮ ಸ್ವರಾಜ್ಯ ಏಕೆ? ಹೇಗೆ?' ವಿಷಯವಾಗಿ ಮಾತನಾಡುತ್ತಾ, ಇಂದಿನ ಆಧುನಿಕ ಬದುಕಿನ ನಡುವೆಯೂ ನಮ್ಮ ಸಾಮಾನ್ಯ ಜನ ಸಮೂಹದಲ್ಲಿ ಸಾಮುದಾಯಿಕ ಬದುಕಿನ ಸೆಲೆಗಳು ಇದ್ದು, ಅದನ್ನು ಗ್ರಾಮಸ್ವರಾಜ್ಯದ ನಿರ್ಮಾಣಕ್ಕಾಗಿ ಬಳಸಿಕೊಳ್ಳಬೇಕಾಗಿದೆ ಎಂದರು.

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳ ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನದ ಡಿ.ಜಿ. ಪುಟ್ಟರಾಜು ಮತ್ತು ಬಿ.ಶಿವಕುಮಾರ್ ಗೋಷ್ಠಿಗಳನ್ನು ನಿರ್ವಹಿಸಿದರು.

ಅದೇ ಸಂಜೆ 'ಹೊಸ ಮನುಷ್ಯ' ಪತ್ರಿಕೆಯ ೨೦೧೪ರ ವಾರ್ಷಿಕ ವಿಶೇಷಾಂಕದ ಬಿಡುಗಡೆ ಸಮಾರಂಭವನ್ನು ಆಯೋಜಿಸಲಾಗಿದ್ದು, ಹಿರಿಯ ಕವಿ ಸಿದ್ಧಲಿಂಗಯ್ಯ ವಿಶೇಷಾಂಕವನ್ನು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಅವರು ಮಾತನಾಡುತ್ತಾ, ಈ ಕಾಲದಲ್ಲೂ ಸಮಾಜವಾದಕ್ಕೆ ಬದ್ಧವಾದ ಈ ಪತ್ರಿಕೆ ಅರ್ಥಪೂರ್ಣ ಮತ್ತು ಸ್ಫೂರ್ತಿಯುತ ನೆನಪುಗಳು ಮತ್ತು ಮೌಲಿಕ ಲೇಖನಗಳ ಮೂಲಕ ಸಮಾಜದಲ್ಲಿ ಸಮಾನತೆಯ ಕಾವು ಆರದಂತೆ ನೋಡಿಕೊಳ್ಳುತ್ತಿದೆ ಎನ್ನುತ್ತಾ ಪತ್ರಿಕೆಗೆ ಶುಭ ಕೋರಿದರು..

ಓದುಗರ ಪರವಾಗಿ ಮಾತನಾಡಿದ ಕೆ. ಸತ್ಯನಾರಾಯಣ, ಇಂತಹ ಒಂದು ಪತ್ರಿಕೆ ಈ ಸಂದರ್ಭದಲ್ಲಿ ಕನ್ನಡಕ್ಕೆ ಬೇಕಾಗಿತ್ತು;ಅದನ್ನು ನಾಗಭೂಷಣ್ ಮಾಡಿದ್ದು, ಇದು ವಿಮರ್ಶಾತ್ಮಕ ಓದುಗರನ್ನು ಹೊಂದಿರುವ ಅಪರೂಪದ ಪತ್ರಿಕೆಯಾಗಿದೆ ಎಂದರು.

ವಿಶೇಷಾಂಕವನ್ನು ಪರಿಚಯಿಸಿದ ಪ್ರೊ. ಬಿ.ಪಿ. ವೀರೇಂದ್ರ ಕುಮಾರ್, ವಿಶೇಷಾಂಕವು ಮುಖ್ಯವಾಗಿ, ರೆಡ್ ಇಂಡಿಯನ್ ನಾಯಕ ರಸಲ್ ಮೀನ್ಸ್‌ರ ಲೇಖನದ ಮೂಲಕ ಪಶ್ಚಿಮದ ಆಧುನಿಕ ನಾಗರೀಕತೆಯ ಬಗ್ಗೆ ಒಂದು ಹೊಸ ಮತ್ತು ಮಹತ್ವದ ಚರ್ಚೆಯನ್ನು ಎತ್ತಿದೆ ಎಂದರು.

ಇದಕ್ಕೂ ಮುನ್ನ ಎಲ್ಲರನ್ನೂ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದ ಪತ್ರಿಕೆಯ ಸಂಪಾದಕ ಡಿ.ಎಸ್. ನಾಗಭೂಷಣ ಅವರು, ಪತ್ರಿಕೆಯನ್ನು ಮೂರು ವರ್ಷಗಳ ಹಿಂದೆ ತಮ್ಮ ಬೌದ್ಧಿಕ ಅಗತ್ಯವಾಗಿ ಮತ್ತು ವೈಯುಕ್ತಿಕ ಸಾಹಸವಾಗಿ ಆರಂಭ ಮಾಡಲಾಯಿತಾದರೂ, ಸಮಾನ ಮನಸ್ಕರ ಬೆಂಬಲದಿಂದ ಅದು ಯಶಸ್ವಿಯಾಗಿ ನಡೆಯುವುವಂತಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಡಿದಾಳು ಶಾಮಣ್ಣನವರು ಹೊಸ ಮನುಷ್ಯದ ಮೂಲ ಸ್ಫೂರ್ತಿಯಾದ ಲೋಹಿಯಾರ ಮ್ಯಾನ್‌ಕೈಂಡ್ ಕೂಡ ಇಷ್ಟು ಸಂಪನ್ನವಾಗಿ, ಅಚ್ಚುಕಟ್ಟಾಗಿ ಮತ್ತು ನಿಯಮಿತವಾಗಿ ಬರುತ್ತಿರಲಿಲ್ಲವೇನೋ ಎಂದು ಮೆಚ್ಚುಗೆ ವ್ಯಕ್ತಪಡಿಸಿ ಪತ್ರಿಕೆಗೆ ಶುಭ ಹಾರೈಸಿದರು.ದರು.



ಅಪೂರ್ವ ಡಿ'ಸಿಲ್ವ ಕಾರ್ಯಕ್ರಮ ನಿರೂಣೆ ಮಾಡಿದರು. ಸವಿತಾ ನಾಗಭೂಷಣ ವಂದಿಸಿದರು.

(ಚಿತ್ರಗಳು ಮತ್ತು ವರದಿ: **ಸವಿತಾ ನಾಗಭೂಷಣ**)

## ನಮ್ಮ ಸಮಾಜವಾದಿಗಳು

# ಸಮಾಜವಾದದ ನಂದಾ ದೀಪ ಬಿ.ವಿ. ಮೂರ್ತಿ



ಸಮಾಜವಾದಿಗಳಿಗೀಗ ಹೋರಾಟದ ಕಾಲ ಮುಗಿದಿದೆ. ಅವರೀಗ ಸಮಾಜವಾದದ ದೀಪ ಆರಿಹೋಗದಂತೆ ಕಾಪಾಡಿ ಕೊಳ್ಳಬೇಕಾಗಿದೆ. ಅದಕ್ಕಾಗಿ ಮತ್ತೆ ಸಮಾಜವಾದಿ ವಿಚಾರಗಳನ್ನು ಬಿತ್ತಿ, ಬೆಳೆಯಬೇಕಾಗಿದೆ. ಅದರ ತತ್ವ ಸಿದ್ಧಾಂತಗಳನ್ನು ಚೆನ್ನಾಗಿ ಅರಿತು ದೃಢವಾಗಿ ನಂಬಿ ನಡೆಯುವ ನಿಸ್ವಾರ್ಥಿಗಳಾದ ನಾಲ್ಕಾರು ಜನ ಗುಂಪು ಕಟ್ಟಿಕೊಂಡು ಗ್ರಾಮ ಮಟ್ಟದಲ್ಲಿ ತಾಲ್ಲೂಕು ಮಟ್ಟದಲ್ಲಿ ಸಾಮಾನ್ಯ ಜನರಿಗೆ ಶಾಲಾ ಮಕ್ಕಳಿಗೆ ಬಿಡುವಿನ ಕಾಲದಲ್ಲಿ ಖಾಸಗಿಯಾಗಿ ತಿಳಿಸಿ ಹೇಳಬೇಕು. ಆ ಮೂಲಕ ಮತ್ತೆ ಆಂದೋಲನ ಕಟ್ಟಬೇಕು. ಸಮಾಜವಾದಕ್ಕೆ ಇನ್ನೂ ಭವಿಷ್ಯವಿದೆ. ಸಮಾಜವಾದಿಗಳು ಈಗ ಸುಮ್ಮನೆ ಕುಳಿತರೆ ದ್ರೋಹ ಬಗೆದಂತೆ ಎಂದೆಲ್ಲ ಹಂಬಲಿಸುವ ಹಲುಬುವ ಹಿರಿಯರೊಬ್ಬರು ತೀರ್ಥಹಳ್ಳಿಯಲ್ಲಿ ಈಗಲೂ ಕಾಣ ಸಿಗುತ್ತಾರೆ. ಅವರೇ ೮೫ರ ಇಳಿ ಹರಯದ (ಹುಟ್ಟಿದ್ದು ೧೯೨೯ರಲ್ಲಿ) ಬಿ.ವಿ.ಮೂರ್ತಿಯವರು.

ಮೇಗರವಳ್ಳಿ ಬಿ.ವಿ.ಮೂರ್ತಿಗಳ ಊರು. ಇವರ ಹಿರಿಯರ ಮನೆ ಹತ್ತಿರದ ಭೀಮನಕಟ್ಟೆಯಲ್ಲಿತ್ತು. ಅಲ್ಲಿನ ವೆಂಕಟಸುಬ್ಬ ಐತಾಳ್, ನಾಗವೇಣಮ್ಮ ಇವರ ಏಳು ಮಂದಿ ಮಕ್ಕಳಲ್ಲಿ ಮೂರ್ತಿಯವರೇ ಹಿರಿಯರು. ಸಂಸಾರ ಚಳುವಳಿಗಳಿಗೆ ಅಡ್ಡಿಯಾಗುತ್ತದೆಂಬುದೂ ಒಂದು ಕಾರಣವಾಗಿ ತಾವು ಮದುವೆಯನ್ನೇ ಮಾಡಿಕೊಳ್ಳದೇ ಅವಿವಾಹಿತೆಯಾದ ಸಹೋದರಿಯೊಂದಿಗೆ ವಾಸ ಮಾಡುತ್ತಿದ್ದಾರೆ. ಮೂರ್ತಿ ತಕ್ಕ ಮಟ್ಟಿಗೆ ಸ್ಥಿತಿವಂತರೇ ಆಗಿದ್ದವರು. ಅವರಿಗೆ ಒಂದು ನೂರು ಖಂಡುಗ ಭತ್ತ ಗೇಣಿ ಬರುವಷ್ಟು ತರಿ ಜಮೀನಿತ್ತು. ಎರಡು ಎಕರೆ ಭಾಗಾಯ್ತು ಇತ್ತು. ತಂದೆಯವರ ಕಾಲಾನಂತರ ಯಜಮಾನರಾದ ಇವರು ಎಂದೂ ಗೇಣಿ ವಸೂಲಿಗೆ ಹೋಗಲಿಲ್ಲ. ಭೂ ಸುಧಾರಣೆ ಕಾಯ್ದೆಯಂತೆ ತಕರಾರಿಲ್ಲದೆ ಎಲ್ಲ ಭೂಮಿ ಉಳುವವರಿಗೇ ಕೊಟ್ಟು ಬಿಟ್ಟರು. ಪ್ರತಿಯಾಗಿ ಬಂದ ಪರಿಹಾರದ ಹಣ ಪಡೆಯಲಿಲ್ಲ. ಹಾಗಾಗಿ ಈಗ ಅವರು ಎಲ್ಲರಂತೆ ಸಾಮಾನ್ಯರು, ಅತ್ಯಂತ ಸರಳರು.

ಮನೆಯಲ್ಲಿ ಅವರು ನಿಲ್ಲುವುದು ಕಡಿಮೆ. ಬಿಳಿಯ ಅಡ್ಡಪಂಚೆ, ಬಿಳಿಯ ಜುಬ್ಬಾ, ವಾಸ್‌ಕೋಟು ತೊಟ್ಟು, ಕನ್ನಡಕ ಧರಿಸಿ, ಚಪ್ಪಲಿ ಮೆಟ್ಟಿ ಕೈಲೊಂದು ಛತ್ರಿಯನ್ನೋ, ಪುಸ್ತಕವನ್ನೋ ಹಿಡಿದು ತೀರ್ಥಹಳ್ಳಿ, ಶಿವಮೊಗ್ಗ ಹೀಗೆ ಸಂಚರಿಸುತ್ತಿರುತ್ತಾರೆ. ಗಾಂಧಿ ಪ್ರಭಾವದಿಂದ ಖಾದಿಧಾರಿಯಾದ ಮೂರ್ತಿ ತಮ್ಮ ಬಟ್ಟೆಗಳನ್ನು ಈಗಲೂ ತಾವೇ ತೊಳೆದುಕೊಳ್ಳುತ್ತಾರೆ. ಗಾಂಧೀಜಿಯವರ ಇನ್ನೊಂದು ಮಂತ್ರ ಹರಿಜನೋದ್ಧಾರವನ್ನು ಬರಿದೆ ಪಠಿಸದೆ ಅನುಸರಿಸಿ ತೋರಿದರು. ಸಂಪ್ರದಾಯಸ್ಥ ಬ್ರಾಹ್ಮಣರ ಕುಟುಂಬದ ಅವರ ಮನೆಗೆ ಐವತ್ತರ ದಶಕದಲ್ಲೆ ಹರಿಜನರಿಗೆ ಪ್ರವೇಶವಿತ್ತೆಂಬುದನ್ನು ಇನ್ನೊಬ್ಬ ಹಿರಿಯ ಸಮಾಜವಾದಿ ಕಡಿದಾಳು ಶಾಮಣ್ಣ ತಮ್ಮ ಶಾಲಾ ದಿನಗಳ ನೆನಪಾಗಿ ಉಲ್ಲೇಖಿಸಿದ್ದಾರೆ. ('ಕಾಡ ತೊರೆಯ ಜಾಡು', ಪುಟ ೬೩) ಬಿ.ವಿ.ಮೂರ್ತಿ ಸೋಷಿಯಲಿಷ್ಟರಾದ್ದರಿಂದ ಅವರ ಮನೆಯಲ್ಲಿ ಜಾತಿಭೇದದ ವಾತಾವರಣ ಇರಲಿಲ್ಲವೆಂದು ಆಗ ಜನ ಮಾತನಾಡಿಕೊಳ್ಳುತ್ತಿದ್ದರಂತೆ. ತಂದೆ ಪುರೋಹಿತಶಾಹಿ ಮನೋಭಾವದವರಾಗಿದ್ದು, ಅವರಿಗೆ ಮಗನನ್ನು ಕಂಡರೆ ಆಗುತ್ತಿರಲಿಲ್ಲ. ಇವರು ಬ್ರಾಹ್ಮಣ್ಯದ ಲಾಂಛನಗಳಾದ ಯಜ್ಞ ಯಾಗಾದಿಗಳನ್ನು ತೀವ್ರವಾಗಿ ವಿರೋಧಿಸುತ್ತಿದ್ದರು. ಒಮ್ಮೆ ಶಿರನಾಳಿ ಸಾಹುಕಾರರ ಮನೆಯಲ್ಲಿ ಒಂದು ಯಜ್ಞ ನಡೆಯಿತು. ಜಿಲ್ಲಾಧಿಕಾರಿಗಳೇ ಮೊದಲಾದ ಅಧಿಕಾರಿಗಳು ಅದರ ಪರವಾಗಿದ್ದರು. ಆಗ ಮೂರ್ತಿಗಳು ಭೂದಾನ ಚಳುವಳಿಯ ನಾಯಕರಾಗಿದ್ದ ಎಣ್ಣೆಕೊಪ್ಪ ಮಲ್ಲಿಕಾರ್ಜುನಪ್ಪ ಗೌಡರ ಸಹಕಾರ ಪಡೆದು ಅದನ್ನು ಪ್ರತಿಭಟಿಸಿದರಂತೆ. ತಮ್ಮ ಸಾಧನೆಗಳಿಗಾಗಿ ಬ್ರಾಹ್ಮಣ ಸಂಘದವರು ಸನ್ಮಾನಿಸಲು ಬಂದಾಗ ಒಪ್ಪಿಕೊಳ್ಳಲಿಲ್ಲ. ೧೯೬೦ರ ತಾಲ್ಲೂಕು ಬೋರ್ಡ್ ಚುನಾವಣೆಯಲ್ಲಿ ಮೇಗರವಳ್ಳಿ ಕ್ಷೇತ್ರದಿಂದ ಸ್ಪರ್ಧಿಸಬೇಕೆಂದು ಒತ್ತಡವಿತ್ತು. ಆದರೆ ಬ್ರಾಹ್ಮಣ ಮತಗಳೇ ಅಲ್ಲಿ ನಿರ್ಣಾಯಕವಾಗಿದ್ದು ಜಾತಿ ಮತಗಳಿಂದ ಗೆಲ್ಲುವುದು ಸರಿಯಲ್ಲವೆಂದು ತಿರಸ್ಕರಿಸಿದರು. ಇದರಿಂದಾಗಿ ಇನ್ನೊಬ್ಬ ಬ್ರಾಹ್ಮಣರಾದ ಸಮಾಜವಾದಿ ಜಿ. ಸದಾಶಿವರಾಯರು ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗುವ ಅವಕಾಶದಿಂದ ವಂಚಿತರಾಗಬೇಕಾಯಿತು. ಗಾಂಧಿ ತತ್ವಗಳೊಂದಿಗೆ ಸಮಾಜವಾದಿ ತತ್ವಗಳನ್ನು ಸಮ್ಮಿಳಿತಗೊಳಿಸಿ ನಿಷ್ಠುರವಾಗಿ ಅನುಸರಿಸಿ ಮಾದರಿಯಾದವರು ಮೂರ್ತಿಗಳು.

ಮೂರ್ತಿಯವರು ಸ್ವಾತಂತ್ರ್ಯ ಹೋರಾಟಗಾರರು. ಇವರು ಹದಿಮೂರು ವರ್ಷದ ಬಾಲಕನಾಗಿದ್ದಾಗಲೇ ಚಳುವಳಿಗೆ ಧುಮುಕಿದರು. ಸೆರೆ ಸಿಕ್ಕಾಗ ಇವರನ್ನು ಎಂಟು ದಿನ ಜೈಲಲ್ಲಿಟ್ಟುಕೊಂಡು ಹುಡುಗರು ಎಂದು ಹೊರಗೆ ಬಿಟ್ಟರಂತೆ. ಚಳುವಳಿಯ ಹುಚ್ಚಿನಲ್ಲಿ ಓದು ಎಸ್.ಎಸ್.ಎಲ್.ಸಿ.ಗೇ ನಿಂತು ಹೋಯಿತು. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ (೧೯೪೨) ಗೆಳೆಯ ಎನ್.ಕಿಟ್ಟಪ್ಪಗೌಡರೊಂದಿಗೆ ವಿಧ್ವಂಸಕ ಕೃತ್ಯಗಳಲ್ಲಿ ಭಾಗಿಯಾಗಿ ಸೆರೆಸಿಕ್ಕು ಜೈಲುಶಿಕ್ಷೆ ಅನುಭವಿಸಿದರು. ಲೋಹಿಯಾರವರ ನೇತೃತ್ವದ ಕಾನೂನು ಭಂಗ ಚಳುವಳಿಯಲ್ಲಿ ಭಾಗಿಗಳಾಗಿದ್ದ ಮೇಗರವಳ್ಳಿಯ ಒಂದು ಗುಂಪು ಹೊಸನಗರದಲ್ಲಿ ಬಂಧನಕ್ಕೊಳಗಾಯಿತು. ಅದರ ಸದಸ್ಯರಾಗಿದ್ದ ಮೂರ್ತಿಗಳು ೨ ತಿಂಗಳು ಸೆರೆವಾಸದಲ್ಲಿದ್ದರು

೧೯೫೧ರ ಕಾಗೋಡು ಸತ್ಯಾಗ್ರಹದಲ್ಲಿ ಸಕ್ರಿಯರಾಗಿ ಭಾಗಿಯಾಗಿದ್ದ ಮೂರ್ತಿಯವರ ಅಲ್ಲಿನ ಕೆಲವು ಅನುಭವಗಳು ಆಗಿನ ಹೋರಾಟದ ಸ್ವರೂಪ ಮತ್ತು ಹೋರಾಟಗಾರರ ನಿಷ್ಠೆಗಳನ್ನು ಬಿಂಬಿಸುತ್ತವೆ. ಕಾಗೋಡಿನಲ್ಲಿ ಪೋಲೀಸರು ನಿತ್ಯ ರೈತರನ್ನು ಥಳಿಸುವುದು, ಚಳುವಳಿಗಾರರನ್ನು ಜೈಲಿಗೆ ಕಳಿಸುವುದು ನಡೆದೇ ಇತ್ತು. ಒಂದು ದಿನ ಎಲ್ಲಿಂದಲೋ ಹಿಂಸಾವಾದಿ ಕಮ್ಯೂನಿಸ್ಟರ ಗುಂಪೊಂದು ಪ್ರತ್ಯಕ್ಷವಾಗಿ ನೀವು ಹೀಗೆ ಸತ್ಯಾಗ್ರಹ ಮಾಡುತ್ತಿದ್ದರೆ ಯಾವ ಪ್ರಯೋಜನವೂ ಇಲ್ಲ. ನಾಲ್ಕು ಜನರ ತಲೆ ತೆಗೆದರೆ ತನ್ನಂತೆ ದಾರಿಗೆ ಬರುತ್ತಾರೆ. ಬನ್ನಿ ನಮ್ಮೊಂದಿಗೆ ಎಂದರಂತೆ. ಕೆಲವು ಯುವಕರು ಇದಕ್ಕೆ ಸಿದ್ಧರೂ ಆದರಂತೆ. ಆಗ ಅಲ್ಲಿದ್ದ ಗೋಪಾಲಗೌಡರು ನೀವು ನಾಲ್ಕು ಜನರ ತಲೆ ತೆಗೆದರೆ ಅವರು ಸಾವಿರಾರು ಜನರ ತಲೆ ಹಾರಿಸುತ್ತಾರೆ. ಇದು ಸರಿಯಲ್ಲ. ನಾವು ಅಹಿಂಸಾ ಮಾರ್ಗದಲ್ಲಿಯೇ ಹೋರಾಡಬೇಕು ಎಂದು ಸಮಜಾಯಿಷಿ ನೀಡಿದರಂತೆ. ಅಂದು ಗೌಡರು ಅಲ್ಲಿಲ್ಲದಿದ್ದರೆ ಅಲ್ಲಿ ರಕ್ತದ ಕೋಡಿ ಹರಿಯುತ್ತಿತ್ತು ಎಂದು ಮೂರ್ತಿ ನೆನಪಿಸಿಕೊಳ್ಳುತ್ತಾರೆ.

ಕರ್ನಾಟಕ ವಿದ್ಯುಚ್ಛಕ್ತಿ ಇಲಾಖೆಯ ಕಾರ್ಮಿಕರ ಚಳುವಳಿ, ಜಾರ್ಜ್ ಫರ್ನಾಂಡಿಸ್ ನೇತೃತ್ವದ ರೈಲ್ವೆ ನೌಕರರ ಹೋರಾಟ ಇವುಗಳಿಗೆ ಮೂರ್ತಿಗಳು ಪ್ರೋತ್ಸಾಹ ನೀಡಿದ್ದರು. ಹೀಗೆ ಸದಾ ಒಂದಿಲ್ಲೊಂದು ಆಂದೋಲನದೊಂದಿಗೆ ಅವರ ಸಂಬಂಧ ಇರುತ್ತಿತ್ತು. ಈ ಯಾವ ಹೋರಾಟಗಳಿಂದಲೂ ಅವರು ಸ್ವಂತಕ್ಕೆ ಪ್ರತಿಫಲ ಬಯಸಲಿಲ್ಲ. ಅಷ್ಟೇಕೆ, ಕಡಿದಾಳು ಮಂಜಪ್ಪನವರು ೫ ಎಕರೆ ಜಮೀನಿಗೆ ಅರ್ಜಿ ಹಾಕಿ ಎಂದಾಗ, ಬದರೀನಾರಾಯಣರು ಉದಾರತೆ ತೋರಿದಾಗ ಯಾವುದನ್ನೂ ಅವರು ಒಪ್ಪಲಿಲ್ಲ. ಸ್ವಾತಂತ್ರ್ಯ ಯೋಧರಿಗೆ ಕೊಡಮಾಡುವ ಪಿಂಚಣಿಯನ್ನೂ ನಿರಾಕರಿಸಿದ ನಿಸ್ಪೃಹ ದೇಶಭಕ್ತಿ ಅವರದ್ದು.

ಶಾಂತವೇರಿ ಗೋಪಾಲಗೌಡರ ಅತ್ಯಂತ ಆಪ್ತರಲ್ಲಿ ಮೂರ್ತಿಯವರೂ ಒಬ್ಬರು. ಚುನಾವಣೆಗಳಲ್ಲಿ ಅವರ ಪರ ಪ್ರಚಾರಕ್ಕೆ ಜೊತೆಯಲ್ಲಿ ಓಡಾಡಿದವರು. ಅಲ್ಲಲ್ಲಿ ಪ್ರಚಾರ ಸಭೆಗಳನ್ನು ವ್ಯವಸ್ಥೆಗೊಳಿಸುವುದು, ಪಕ್ಷದ ಸಭೆಗಳನ್ನು ಏರ್ಪಡಿಸುವುದು, ಅದಕ್ಕಾಗಿ ಹಣ ಸಂಗ್ರಹ, ಖರ್ಚಿನ ಲೆಕ್ಕಾಚಾರ ಒಪ್ಪಿಸುವುದು ಇವೆಲ್ಲವನ್ನೂ ಅವರು ನಿಭಾಯಿಸುತ್ತಿದ್ದರು. ಬೆಂಗಳೂರಿಗೆ ಆಗಾಗ ಹೋಗಿ ಗೌಡರ ಕೆಲಸಗಳಿಗೆ ಸಹಕಾರ ನೀಡುತ್ತಿದ್ದರು. ಗೌಡರು

ಸೋತಾಗ ನೊಂದರು, ಗೆದ್ದಾಗ ಸಂಭ್ರಮಿಸಿದರು. ಇಂಥ ಹಲವು ಸಂದರ್ಭಗಳು ಗೋಪಾಲಗೌಡರ ದಿನಚರಿಯಲ್ಲಿ ದಾಖಲಾಗಿವೆ. ಹೀಗೆ ಅವರೊಬ್ಬ ತತ್ವನಿಷ್ಠ ಆದರ್ಶ ಸಮಾಜವಾದಿ. ಸದ್ದಿಲ್ಲದೆ ಸಮಾಜವಾದವನ್ನೇ ಬದುಕುತ್ತಿರುವವರು. ಕಿರಿಯರನ್ನು ಕಂಡಾಗ ಭುಜಮುಟ್ಟಿ, ಬೆನ್ನು ತಟ್ಟಿ ಪ್ರೋತ್ಸಾಹಿಸುವ ವಿಶಾಲ ಮನಸ್ಸಿನ ವಾಮನಮೂರ್ತಿ.

ಮೂರ್ತಿಯವರು ಖ್ಯಾತರಾಗಿರುವುದು ಪತ್ರಕರ್ತರೆಂದು. ಓದನ್ನು ಅರ್ಧಕ್ಕೆ ಬಿಟ್ಟ ಮೂರ್ತಿ ಜೀವನೋಪಾಯಕ್ಕೆ ಆಯ್ದುಕೊಂಡ ದಾರಿ ಪತ್ರಿಕೆ ಹಂಚುವುದು. 'ತಾಯಿನಾಡು', 'ಜನಪ್ರಗತಿ', 'ಪ್ರಜಾವಾಣಿ' ಮುಂತಾದ ಪತ್ರಿಕೆಗಳ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ವಿತರಕರಾಗಿ ಮನೆ ಮನೆಗೆ ಅವುಗಳನ್ನು ತಲುಪಿಸಿ ಜನರಲ್ಲಿ ಓದುವ ಹವ್ಯಾಸ ಬೆಳೆಸಿ, ಸಾಮಾಜಿಕ ಜಾಗೃತಿಗೆ ಕಾರಣರಾದರು. ಜೊತೆಗೆ 'ಪ್ರಜಾವಾಣಿ'ಯ ವರದಿಗಾರರಾಗಿ 'ಮಲೆನಾಡು ವಾರ್ತಾ ಪತ್ರ' ಬರೆಯುತ್ತಿದ್ದರು.

ಪತ್ರಿಕೆಗಳ ಸಂಗ್ರಹಣೆ ಇವರ ಮುಖ್ಯ ಹವ್ಯಾಸ. ಜಗತ್ತಿನ ಹಲವು ದೇಶಗಳ ಹಲವು ಭಾಷೆಗಳ ವಿವಿಧ ವಿನ್ಯಾಸದ ಪತ್ರಿಕೆಗಳಲ್ಲದೇ ಕನ್ನಡದವೇ ಸುಮಾರು ೨೦೦ ಪತ್ರಿಕೆಗಳ ಪ್ರತಿಗಳನ್ನು ಸಂಗ್ರಹಿಸಿದ್ದಾರೆ. ಈ ಅಪೂರ್ವ ಸಂಗ್ರಹ ಪತ್ರಿಕೋದ್ಯಮದ ಚರಿತ್ರೆಯನ್ನಷ್ಟೇ ಹೇಳದೆ ಮಾನವ ಸಂಸ್ಕೃತಿಯ ವಿಕಾಸ, ರಾಜಕೀಯದ ಏಳುಬೀಳುಗಳನ್ನೆಲ್ಲ ಹುದುಗಿಸಿಟ್ಟುಕೊಂಡಿರುವ ಜ್ಞಾನನಿಧಿಯಾಗಿದೆ.

ಮಲೆನಾಡಿನ ವಾತಾವರಣದಲ್ಲಿ ಈ ಸಂಗ್ರಹವನ್ನು ಸಂರಕ್ಷಿಸುವುದು ಕಷ್ಟವಾದ್ದರಿಂದ ಈ ಜವಾಬ್ದಾರಿಯನ್ನು ಹೊರಲು ಸಿದ್ಧರಾಗಿ ಮುಂದೆ ಬಂದ ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರ ಸುಪರ್ದಿಗೆ ಪತ್ರಿಕೆ ಸಂಗ್ರಹವನ್ನು ಕೊಟ್ಟಿದ್ದಾರೆ. ಅನೇಕ ಸಮ್ಮೇಳನ, ಸಭೆ, ಜಾತ್ರೆ ಮುಂತಾದೆಡೆ ಸಾರ್ವಜನಿಕರಿಗೆ ಇದನ್ನು ಪ್ರದರ್ಶಿಸಿದ್ದಾರೆ. ಈ ಕ್ಷೇತ್ರದ ಇವರ ಸಾಧನೆ ಸೇವೆ ವಿಶಿಷ್ಟವಾದವು. ಇದನ್ನು ಗುರುತಿಸಿ ಗೌರವಿಸಿ ರಾಜ್ಯ ಪತ್ರಿಕಾ ಅಕಾಡೆಮಿ ಇವರಿಗೆ ಪ್ರಶಸ್ತಿ ನೀಡಿದೆ. ಇದರೊಂದಿಗೆ ಬಂದ ೧೦ ಸಾವಿರ ರೂಪಾಯಿಗಳನ್ನು ತಮ್ಮ ಸಂಗ್ರಹದ ಸುರಕ್ಷೆಯ ವ್ಯವಸ್ಥೆಗಾಗಿ ಧರ್ಮಸ್ಥಳಕ್ಕೆ ಕೊಟ್ಟಿದ್ದಾರೆ.

**–ಡಾ. ಜೆ.ಕೆ. ರಮೇಶ**

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ನಾನು ಬಹು ಕಾತುರದಿಂದ ಕಾಯುತ್ತಿದ್ದ ವಾರ್ಷಿಕ ವಿಶೇಷಾಂಕ ನೋಡಿದಾಕ್ಷಣ ಸಂತೋಷ, ಸಂಭ್ರಮ ಮತ್ತು ದಿಗ್ಭ್ರಮೆ ಮೂರೂ ಒಟ್ಟಿಗೇ ಆದವು. ಏಕೆಂದರೆ ಈ ಸಂಚಿಕೆ ನಿರೀಕ್ಷೆಗೂ ಮೀರಿ ಅತ್ಯಂತ ಅರ್ಥಪೂರ್ಣ ಮತ್ತು ಮೌಲಿಕ ಲೇಖನಗಳನ್ನು ಒಳಗೊಂಡಿದೆ.

ಸಂಪಾದಕೀಯದ ಮಾತುಗಳು ಪತ್ರಿಕೆಯ ಉದ್ದೇಶಗಳನ್ನು ಮತ್ತೆ ಸ್ಪಷ್ಟಪಡಿಸಿಕೊಳ್ಳುವಂತಿದೆ. ಸಂಚಿಕೆಯ ಪ್ರಧಾನ ಲೇಖನ ಮತ್ತು ಎಸ್. ಮಂಜುನಾಥರ ಲೇಖನಗಳು ಪ್ರತಿಯೊಬ್ಬರೂ ತಮ್ಮ ಆತ್ಮವನ್ನು ಮುಟ್ಟಿನೋಡಿಕೊಳ್ಳುವಂತೆ ಮಾಡುತ್ತವೆ. ಇನ್ನು ಡಾ. ಲೋಹಿಯಾ ಮತ್ತು ಅವರ ಬಗೆಗಿನ ಲೇಖನಗಳೆರಡೂ ಮನಸ್ಸನ್ನು ಹಿಗ್ಗಿಸುವಂತಿವೆ. ಅನಂತಮೂರ್ತಿಯವರು, ಈ ಸಂಚಿಕೆಯಲ್ಲಿನ ಸುದೀರ್ಘ ಸಂದರ್ಶನದ ಮೂಲಕ ನಮ್ಮಲ್ಲಿ ಜೀವಂತವಾಗಿರುವಾಗಲೇ ನಿಧನರಾಗಿದ್ದು ದುರದೃಷ್ಟಕರ. ಇನ್ನುಳಿದಂತೆ ಬಹುಪಾಲು ಎಲ್ಲ ಲೇಖನಗಳೂ ಒಂದಲ್ಲ ಒಂದು ರೀತಿಯಲ್ಲಿ ನಮ್ಮ ವ್ಯಕ್ತಿತ್ವಗಳನ್ನು ತಿದ್ದಿ ತೀಡುವ, ಸಂಪನ್ನಗೊಳಿಸುವ ಲೇಖನಗಳೇ ಆಗಿವೆ.

ಕೊನೆಯದಾಗಿ ಓದುಗರೊಬ್ಬರು ಸೂಚಿಸಿರುವಂತೆ ಪತ್ರಿಕೆ ಹೀಗೇ ಇರಲಿ. ಅಬ್ಬರ–ಆರ್ಭಟ–ಜಾಹೀರಾತುಗಳ ಸಂತೆಯಲ್ಲಿ ಕಳೆದುಹೋಗದಿರಲಿ

**–ಎನ್. ಆರ್. ಬಾಲಸುಬ್ರಮಣ್ಯ,** ಮುಳುಂದ್, ಮುಂಬೈ

ಮಾನವೀಯ ಕಾಳಜಿಗಳು ಹಾಗೂ ಪರಿಸರ ಪ್ರಜ್ಞೆಯ ನೆಲೆಯಿಂದ ಹೊರಹೊಮ್ಮಿರುವ ವಿಶೇಷ ಸಂಚಿಕೆ, ವಿದ್ವತ್‌ಪೂರ್ಣವಾಗಿ ಮತ್ತು ವಿಚಾರಪ್ರಚೋದಕವಾಗಿ, ವಿವಿಧ ಹಿನ್ನೆಲೆಗಳ ಸಂವೇದನಾಶೀಲ ಬರಹಗಾರರ ವೈವಿಧ್ಯಮಯ ಲೇಖನಗಳು ಸತ್ವಯುತವಾಗಿದ್ದು ಸಮಕಾಲೀನ ಧಾವಂತಗಳನ್ನು ಸಮರ್ಥವಾಗಿ ಎದುರಿಸುವ ಚಿಂತನಾ ಕ್ರಮವನ್ನು ಧಾರೆ ಎರೆದಿದೆ. ಹಿತ–ಮಿತ ಎಂಬ ಸಮಾಜವಾದದ ಮೂಲ ದ್ರವ್ಯದ ಆಧಾರದ ಮೇಲೆ ಪತ್ರಿಕೆ ಸಾಗುತ್ತಿರುವ ಬಗ್ಗೆ ನಿಮ್ಮ ಸಂಪಾದಕೀಯ ಕುತೂಹಲಕಾರಿ ಎನಿಸುತ್ತದೆ. ನಿಮ್ಮ ತಂಡದ ಪರಿಶ್ರಮದಿಂದಾಗಿ ಸಂಚಿಕೆ ಸುಂದರ, ಸಶಕ್ತ ಮತ್ತು ಘನವಾಗಿ ಮೂಡಿಬಂದಿದೆ.

**–ಬಿ.ಎಸ್. ದಿವಾಕರ,** ಬೆಂಗಳೂರು

ವಿಶೇಷ ಸಂಚಿಕೆ ಚೆನ್ನಾಗಿದೆ. ಬಹುಪಾಲು ಬರಹಗಳು ಆಸಕ್ತಿ ಹುಟ್ಟಿಸುವಂತಿವೆ. ಅನಂತಮೂರ್ತಿ ಅವರೊಂದಿಗೆ ನೀವು ನಡೆಸಿರುವ ಸಂದರ್ಶನದಲ್ಲಿ ಒಂದೆರಡು ಅಂಶಗಳ ಹೊರತಾಗಿ ಅವರು ಹೊಸದೇನನ್ನೂ ಹೇಳಿರದಿದ್ದರೂ, ಅದು ಮುಕ್ತವಾಗಿದೆ, ಆತ್ಮೀಯವಾಗಿಯೂ ಇದೆ ಆದರೂ ನೀವು ಒಲ್ಲದ ಒಂದೆರಡು ಪ್ರಶ್ನೆಗಳನ್ನು ಕೇಳಿ ಅವರನ್ನು ಬಳಲಿಸದಂತೆ ಕಂಡಿತು.

ಹೊಸ ಮನುಷ್ಯ ತನ್ನ ಲೇಖಕರಿಗೆ ಗೌರವ ಧನ ನೀಡುತ್ತಿರುವುದು ಸಂತೋಷದ ಮತ್ತು ಸೋಜಿಗದ ಸಂಗತಿ. ನಿಮ್ಮ ತಂಡಕ್ಕೆ ಅಭಿನಂದನೆಗಳು.

**–ಜಿ.ಪಿ. ಬಸವರಾಜು,** ಮೈಸೂರು

ಅನಂತಮೂರ್ತಿ ಸಂದರ್ಶನ ಅವರ ನಿಜವಾದ ವ್ಯಕ್ತಿತ್ವದ ಪರಿಚಯ ಮಾಡಿದೆ. ಅವರನ್ನು ಹೀಗೆ ಇಕ್ಕಟ್ಟಿಗೆ ಸಿಲುಕಿಸಿದ ಸಂದರ್ಶನ ಬೇರಾವುದೂ ಇಲ್ಲ. ಆದರೆ ಭಿನ್ನಾಭಿಪ್ರಾಯಗಳನ್ನು ಗೌರವಿಸುತ್ತಿದ್ದ ಇನ್ನೊಬ್ಬ ಕನ್ನಡ ಸಾಹಿತಿ ಇಲ್ಲ. ಸ್ನೇಹಶೀಲರು ಅವರು.

**–ಡಾ. ಮಹಾಬಲೇಶ್ವರ ರಾವ್,** ಉಡುಪಿ

ರಸಲ್ ಮೀನ್ಸ್ ಲೇಖನ ಅರ್ಥಪೂರ್ಣವೂ, ಸಂಪೂರ್ಣವೂ ಆಗಿದೆ. ಅನುವಾದವೂ ಚೆನ್ನಾಗಿದೆ.

**–ಎಸ್. ಮಂಜುನಾಥ್,** ಕೆ.ಆರ್.ನಗರ

ವಿಶೇಷಾಂಕ ಅದ್ಭುತವಾಗಿದೆ. ರೇಖಾಂಬ ಅವರು ಅನುವಾದಿಸಿರುವ ಪ್ರಧಾನ ಲೇಖನ ನಾವು ಉಳಿಯಲು ಯೂರೋಪ್ ಸಾಯಬೇಕು' ಪತ್ರಿಕೆಯ ಸಮಾಜವಾದಿ ಚಿಂತನೆಗಳಿಗೆ ಮುನ್ನುಡಿಯಂತಿದೆ. ಗಾಂಧಿಜಿಯವರ 'ಹಿಂದ್ ಸ್ವರಾಜ್'ಗೆ ಬರೆದ ಭಾಷ್ಯದಂತೆಯೂ ಇದು ಭಾಸವಾಗುತ್ತದೆ. ಪ್ರಸ್ತುತ ರಾಜಕೀಯ ಸಂದರ್ಭದಲ್ಲಿ ಅಭಿವೃದ್ಧಿ ಮಾದರಿಯನ್ನು ಕೇವಲ ಎಡ–ಬಲ ಚಿಂತನೆಗಳ ಮೂಲಕ ಮಾತ್ರ ನೋಡುತ್ತಿದ್ದ ನಮಗೆ ಅವುಗಳ ಮೂಲಕ್ಕೇ ಹೋಗಿ ಬದಲಾವಣೆಯ ಆರಂಭ ಎಲ್ಲಿಂದ ಎಂಬ ಚಿಂತನೆಯನ್ನು ರಸಲ್ ಮೀನ್ಸ್ ಅದ್ಭುತವಾಗಿ ಮಂಡಿಸಿದ್ದಾರೆ.

ಹೌದು, ಎಲ್ಲ ಸರಿ; ಆದರೆ ಇದಕ್ಕೆ ಪರಿಹಾರವೇನು? ತಂತ್ರಜ್ಞಾನದ ಮೂಲಕ ಆಧುನಿಕ ಜಗತ್ತು ಈ ಹಂತದವರೆಗೆ ಬೆಳೆದು ಬಂದ ಮೇಲೆ ಹಿಮ್ಮುಖ ಚಲನೆ ಸಾಧ್ಯವೇ? ಸರಳ ಜೀವನ ಶೈಲಿಯ ಗಾಂಧಿವಾದವೊಂದೆ ಮುಂದಿರುವ ಏಕೈಕ ಮಾರ್ಗವೆನಿಸುತ್ತದೆ.

**–ಎನ್. ಎಂ .ಕುಲಕರ್ಣಿ.** ಹೆಗ್ಗೋಡು

ವಿಶೇಷ ಸಂಚಿಕೆ ತುಂಬಾ ಮಾಹಿತಿಗಳಿಂದ ಕೂಡಿದ್ದು, ಅನಂತ ಮೂರ್ತಿಯರೊಂದಿಗಿನ ನಿಮ್ಮ ಸಂವಾದ ಚೆನ್ನಾಗಿದೆ.

**–ಗಿರೀಶ್ ಕಾಸರವಳ್ಳಿ,** ಬೆಂಗಳೂರು

ವಾರ್ಷಿಕ ವಿಶೇಷಾಂಕದ ಸುಂದರ, ಕಲಾತ್ಮಕ ಮುಖಪುಟದಿಂದ ಮಾರು ಹೋದೆ. ಅಂತೆಯೇ ಅತ್ಯಂತ ಜರೂರಾದ ಮುಖಪುಟದ ಲೇಖನವೂ ಅಮೂಲ್ಯವಾದದ್ದೆನಿಸಿತು. ಅದರಲ್ಲಿರುವ ಒಂದೆರಡು ಪುನರುಕ್ತಿಗಳನ್ನು ತೆಗೆಯಬಹುದಿತ್ತೇನೋ. ಪದ್ಯಗಳ ಪೈಕಿ, ಹಾಯ್ಕುಗಳು, 'ಕೃಷ್ಣ–ಮಹಮ್ಮದ್ ಮತ್ತು 'ರಾಮು ಸ್ಕೂಲ್' ಗಮನ ಸೆಳೆದವು. ಆದರೆ ಮುದ್ರಣ ಮತ್ತು ಲಿಪ್ಯಂತರ ದೋಷಗಳ ಕಡೆ ಗಮನ ಕೊಟ್ಟರೆ ಒಳ್ಳೆಯದು.

**–ದೇ. ನಾ. ಶ್ರೀನಿವಾಸಮೂರ್ತಿ,** ದೊಡ್ಡಬಳ್ಳಾಪುರ



**ಕರ್ನಾಟಕದಲ್ಲಿನ ಭೂಹೋರಾಟಗಳ ಪಿತಾಮಹ ಮತ್ತು ಕಾಗೋಡು ಸತ್ಯಾಗ್ರಹದ ರೂವಾರಿ ಎಂದೇ ಪ್ರಸಿದ್ಧರಾದ ಎಚ್. ಗಣಪತಿಯಪ್ಪ ಅವರಿಗೆ ಈಗ ತೊಂಬತ್ತು ವರ್ಷ. ಈ ಸಂದರ್ಭದಲ್ಲಿ ಅವರಿಗೆ 'ಹೊಸ ಮನುಷ್ಯ' ಪತ್ರಿಕೆ ಹಾರ್ದಿಕ ಶುಭಾಶಯಗಳನ್ನು ಕೋರುತ್ತದೆ.**

**ಈಗ ಗಣಪತಿಯಪ್ಪನವರು ತೀವ್ರ ಅಸ್ವಸ್ಥರಾಗಿ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಅವರು ಬೇಗ ಚೇತರಿಸಿಕೊಂಡು ನಮ್ಮೊಡನೆ ಇನ್ನಷ್ಟು ಕಾಲ ಬಾಳಲಿ ಎಂದೂ ಪತ್ರಿಕೆ ಹಾರೈಸುತ್ತದೆ.**–ಸಂ.

## ಪ್ರೊ. ಬಿ. ಕೃಷ್ಣಪ್ಪ ನೆನಪಿನ ಮಾಲೆ-೨೪

-ಇಂದಿರಾ ಬಿ. ಕೃಷ್ಣಪ್ಪ

# ಶಿವಮೊಗ್ಗದಲ್ಲಿನ ತಳಮಳಗಳು ಮತ್ತು ಕುವೆಂಪು ಕುರಿತ ಕೃಷ್ಣಪ್ಪನವರ ವಿಮರ್ಶೆ

ನಾಗರೀಕ ಸಮಾಜವೆಂದು ಹೇಳಿಕೊಳ್ಳುತ್ತಲೇ ಅದರ ನಡುವೆ ನಡೆಯುವ ಎಲ್ಲ ಅನ್ಯಾಯ, ದೌರ್ಜನ್ಯ, ಅತ್ಯಾಚಾರ, ಹಿಂಸೆಗಳ ವಿರುದ್ಧ ಕದಸಂಸ ಧ್ವನಿ ಎತ್ತುತ್ತಾ ಸಹಬಾಳ್ವೆಯ ಮಾನವೀಯ ಸಮಾಜ ಕಟ್ಟಲು ಸದಾ ಸನ್ನದ್ಧವಾಗಿರುತ್ತಿತ್ತು. ಮತೀಯವಾದಿಗಳು ಮತ್ತು ಜಾತೀವಾದಿಗಳು ನಡೆಸಿದ ಇನ್ನೊಂದು ನೈತಿಕ ಪೋಲೀಸ್‌ಗಿರಿ ಮತ್ತು ಪ್ರತಿಕ್ರಿಯಾತ್ಮಕವಾಗಿ ನಡೆಸಿದ ಅಹಿಂಸಾತ್ಮಕ ಹೋರಾಟಗಳನ್ನು ಇಲ್ಲಿ ಹೇಳುವುದು ಸಮಯೋಚಿತವೆನಿಸುತ್ತದೆ. ಆಗ ಶಿವಮೊಗ್ಗಾದ ನಾರಾಯಣ ಶಾಸ್ತ್ರಿಗಳು ಭೂಮಾಲೀಕರೂ, ಕೈಗಾರಿಕೋದ್ಯಮಿಯೂ ಮತ್ತು ಆರ್‌ಎಸ್‌ಎಸ್ ಪ್ರಮುಖರೂ ಆಗಿದ್ದರು. ಅವರು ಶಂಕರಮಠದಲ್ಲಿ ದೇಶದ ಶಾಂತಿ-ಸುರಕ್ಷತೆಗಾಗಿ-ಯಜ್ಞಯಾಗಾದಿ ಮಾಡಿಸುವ ಕೈಂಕರ್ಯವನ್ನು ಕೈಗೆತ್ತಿಕೊಂಡರು. ಇದರ ಸುಳಿವು ಹತ್ತಿದಾಕ್ಷಣ ವಿಚಾರವಾದಿ ವೇದಿಕೆ ಮತ್ತು ಸಮಾಜವಾದಿ ಯುವಜನಸಭಾದ ಗೆಳೆಯರು ಸೇರಿ ಹೋಮ ಹವನದ ವಿರುದ್ಧ ಪ್ರಜಾಸತ್ತಾತ್ಮಕವಾಗಿ ಪ್ರತಿಭಟನೆ ಮಾಡಲು ಕಾರ್ಯಕ್ರಮ ಹಾಕಿಕೊಂಡರು. ಬೆಳಿಗ್ಗೆ 11 ಗಂಟೆಗೆ ಕಾಮರ್ಸ್ ಕಾಲೇಜು ಮೈದಾನದಿಂದ ಹೊರಟ ಪ್ರತಿಭಟನೆ ಕರಪತ್ರಗಳನ್ನು ಹಂಚುತ್ತಾ "ಲಕ್ಷಾಂತರ ರೂಪಾಯಿಗಳ ದವಸಧಾನ್ಯಗಳನ್ನು ಹೋಮಕ್ಕೆ ಹಾಕುವುದು, ಭಕ್ಷ್ಯ-ಭೋಜನ-ಹಾಲುತುಪ್ಪಗಳನ್ನು ಬೆಂಕಿಗೆ ಸುರಿಯುವುದು, ಆಹಾರ ಪದಾರ್ಥಗಳನ್ನು ಪೋಲು ಮಾಡುವುದು, ಬಡವರ ಹೊಟ್ಟೆ ಮೇಲೆ ಹೊಡೆದಂತೆ ಎಂದೂ, ಅವೈಜ್ಞಾನಿಕತೆಯನ್ನು ಬಿತ್ತುವುದರ ವಿರುದ್ಧ ಧಿಕ್ಕಾರಗಳನ್ನು ಕೂಗುತ್ತಾ ಸಾಗಿತ್ತು. ಪ್ರತಿಭಟನೆಯಲ್ಲಿ ಪ್ರಮುಖವಾಗಿ ದಿವಾಕರ ಹೆಗ್ಡೆ, ಎಂ.ಬಿ. ನಟರಾಜ್, ಸತ್ಯನಾರಾಯಣರಾವ್ ಅಣತಿ, ಎಂ. ಚಂದ್ರಶೇಖರಯ್ಯ, ನಾಗೇಂದ್ರರಾವ್, ರಂಗೇಗೌಡ ಮತ್ತಿತರರು ಪಾಲ್ಗೊಂಡಿದ್ದರು. ಇದೇ ವೇಳೆಗೆ, ಪ್ರತಿಭಟನಾಕಾರರು ಯಜ್ಞಕುಂಡದಲ್ಲಿ ಮಾಂಸ ಮಡ್ಡಿಯನ್ನು ತಂದು ಸುರಿಯುತ್ತಾರೆಂದು ಸುಳ್ಳು ಪುಕಾರನ್ನು ಕಿಡಿಗೇಡಿಗಳು ಹಬ್ಬಿಸಿಬಿಟ್ಟರು. ಇದು ನಾರಾಯಣ ಶಾಸ್ತ್ರಿಗಳ, ಮಾನಾಪಮಾನದ ಮತ್ತು ಪ್ರತಿಷ್ಠೆಯ ಪ್ರಶ್ನೆಯಾಗಿತ್ತು. ಈ ಸಮಯದಲ್ಲಿ ಹಿಂದ್ ಮಜ್ದೂರ್ ಸಭಾದ ಯುವನಾಯಕರಾಗಿ, ಆಯನೂರು ಮಂಜುನಾಥ ಅವರಿದ್ದರು. ಅವರಿಗೆ ಈ ಸುದ್ದಿ ಮುಟ್ಟಿಯೂ ಆಯಿತು. ಅವರಿಂದ ಪ್ರೇರಿತರಾದ ಭಾರತ್ ಫೌಂಡ್ರಿಯ ಹಿಂದ್ ಮಜ್ದೂರ್ ಸಭಾದ ಕಾರ್ಮಿಕರು, ಚಾಕು ಚೈನುಗಳೊಂದಿಗೆ ಪ್ರತಿಭಟನಾಕಾರರ ಮೇಲೆ ಹಿಗ್ಗಾಮುಗ್ಗಾ ಹಲ್ಲೆ ಮಾಡಿದರು. ದಿವಾಕರಹೆಗ್ಡೆ, ಸತ್ಯನಾರಾಯಣರಾವ್ ಅಣತಿ ಮುಂತಾದವರುಗಳ ತೊಟ್ಟ ಬಟ್ಟೆಗಳು ಚಿಂದಿಯಾದವು. ಬಹಳ ಜನರಿಗೆ ಮೈಮೇಲೆ ಬಾಸುಂಡೆಗಳೆದ್ದವು. ಗಾಯ, ರಕ್ತಗಳಿಂದ ಕೆಲವರು ಆಸ್ಪತ್ರೆ ಸೇರಿದರು. ಇನ್ನೂ ಕೆಲವರು ತುರ್ತು ಚಿಕಿತ್ಸೆ ಪಡೆದು ಹೊರಬಂದರು. ಆ ವೇಳೆಗೆ ಹಾಜರಿದ್ದ ಪೋಲೀಸ್ ಪಡೆ, ಪ್ರತಿಭಟನಾಕಾರರನ್ನೇ ಗುರಿಮಾಡಿ, ಚದುರಿಸಿ ಓಡಿಸಿದರು. ವಿಷಯ ಕದಸಂಸದ ಕೃಷ್ಣಪ್ಪನವರಿಗೆ ಮುಟ್ಟಿತು. ಅವರು ಮಧ್ಯಾಹ್ನದ ವೇಳೆಗೆ ಶಿವಮೊಗ್ಗಕ್ಕೆ ಬಂದರು. ಶತ್ರುವಿನ ಶಕ್ತಿ ಅಂದಾಜಿಸದೆ ಹಾಗೂ ಪೂರ್ವ ಸಿದ್ಧತೆಯಿಲ್ಲದೆ ಪ್ರತಿಭಟನೆ ನಡೆಸಿದ ಬಗ್ಗೆ ಸಿಟ್ಟಾದರು ಮತ್ತು ಮುಂದಿನ ಕ್ರಮಕ್ಕೆ ಸಜ್ಜಾದರು. ಕೃಷ್ಣಪ್ಪ ಹಾಗೂ ಕದಸಂಸ, ಆ ಕಾಲಕ್ಕಾಗಲೇ ಕರ್ನಾಟಕದಲ್ಲಿ ಪ್ರಬಲಶಕ್ತಿಯಾಗಿ ಹೊರ ಹೊಮ್ಮಿದ್ದರು. ಅವರ ಒಂದು ಕರೆಗೆ ದಸಂಸ ಕಾರ್ಯಕರ್ತರು, ಶಿವಮೊಗ್ಗದಲ್ಲಿ ಜಮಾಯಿಸಿದರು. ವಿಷಯದ ತೀವ್ರತೆಯನ್ನರಿತ ಕಾರ್ಯಕರ್ತರು ದೌಡಾಯಿಸಿ ಗೋಪಿ ಸರ್ಕಲ್‌ನಲ್ಲಿ ಸೇರಿದರು. ಆ ಜನರ ಹುಮ್ಮಸ್ಸನ್ನು ದಿವಾಕರ ಹೆಗ್ಡೆ ಹಾಗೂ ಎಂ. ಚಂದ್ರಶೇಖರಯ್ಯನವರು ಈಗಲೂ ಜ್ಞಾಪಿಸಿಕೊಂಡು ಸ್ಫೂರ್ತಿಗೊಳ್ಳುವರು.

ಇವರೊಂದಿಗೆ ಹಮಾಲಿ ಸಂಘದವರು, ಕಮ್ಯುನಿಸ್ಟರು ಭಾಗಿಗಳಾದರು. ಬೃಹತ್ತಾದ ಮೆರವಣಿಗೆ ಶಿವಮೊಗ್ಗಾದ ಪ್ರಮುಖ ಬೀದಿಗಳಲ್ಲಿ ಸಾಗಿ, ಗೋಪಿ ಸರ್ಕಲ್‌ನಲ್ಲಿ ಜಮಾವಣೆಯಾಯಿತು. ಪ್ರತಿಭಟನೆಯಲ್ಲಿ ದಸಂಸದ ಎನ್. ಗಿರಿಯಪ್ಪ, ನರಸಿಂಹಯ್ಯ, ಟಿ. ರಾಜಣ್ಣ, ಶಿವಪುತ್ರಪ್ಪ, ಕಾರ್ತಿವಿರಾಜನ್,



ಸಾಹಿತ್ಯ ಗೋಷ್ಠಿಯೊಂದರಲ್ಲಿ ಕೃಷ್ಣಪ್ಪನವರ ಮಾತು

ವೀರಯ್ಯ, ಶಿವಲಿಂಗಪ್ಪ, ಎಚ್. ರಾಚಪ್ಪ, ಪರಮೇಶ್ವರಪ್ಪ ಹಾಗೂ ಹಾಸ್ಟೆಲ್ ವಿದ್ಯಾರ್ಥಿಗಳು ಪ್ರಮುಖರಾಗಿದ್ದರು. ಬಹಿರಂಗ ಸಭೆಯಲ್ಲಿ ಬಿ. ಕೃಷ್ಣಪ್ಪ, ಎನ್. ಗಿರಿಯಪ್ಪ, ಕಮ್ಯುನಿಸ್ಟ್ ಪಕ್ಷದ ಲಕ್ಷ್ಮೀನಾರಾಯಣ್, ಜಿ.ಎಸ್. ನಾಗರಾಜ್, ಇನ್ನೂ ಮುಂತಾದವರು ಮಾತನಾಡುತ್ತಾ, "ಪುರೋಹಿತಶಾಹಿಯ ಕಬಂಧ ಬಾಹುಗಳು, ಮೌಢ್ಯತೆಯನ್ನೇ ಬಂಡವಾಳವಾಗಿರಿಸಿರುವುದು, ಅವೈಜ್ಞಾನಿಕ ಮತ್ತು ಅವೈಚಾರಿಕ ಆಚರಣೆಗಳ ವೈಭವೀಕರಿಸಿ, ಜನರ ನೈಜ ಸಮಸ್ಯೆಗಳಿಂದ ವಿಮುಖಗೊಳಿಸುವಿಕೆ, ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ, ಕಾರ್ಮಿಕರ ದುರ್ಬಳಕೆ, ಇತ್ಯಾದಿ ವಿಷಯಗಳ ಬಗ್ಗೆ ಎಳೆಎಳೆಯಾಗಿ ವಿಚಾರಗಳನ್ನು ಮಂಡಿಸಿದರು ಮತ್ತು ಹಿಂದೂ ಮತೀಯವಾದಿಗಳ ಗೂಂಡಾಗಿರಿಯ ವಿರುದ್ಧ ಎಚ್ಚರಿಕೆ ನೀಡಿದರು. ಹಿಂದೆಂದೂ ಕಂಡರಿಯದ ಈ ಪ್ರತಿಭಟನೆ ಅರ್‌ಎಸ್‌ಎಸ್‌ನವರನ್ನು ಕಂಗೆಡಿಸಿತ್ತು. ಈ ಘಟನೆಗಳು ಮಾಧ್ಯಮಗಳಲ್ಲಿ ಬಹಳ ಪ್ರಚಾರ ಪಡೆಯಿತು.

ಇದೇ ವಿಷಯದಲ್ಲಿ ಕರ್ನಾಟಕ ವಿಚಾರ ವೇದಿಕೆಯವರು, ಮೈಸೂರಿನಲ್ಲಿ ಕಾರ್ಯಕ್ರಮ ಆಯೋಜಿಸಿದರು. ಅಲ್ಲಿ ಪ್ರೊ. ರಾಮಲಿಂಗಂ ನೇತೃತ್ವ ವಹಿಸಿದ್ದರು. ಇದರಿಂದ ವ್ಯಗ್ರರಾದ ಮತೀಯ ಶಕ್ತಿಗಳು, ವಿಚಾರ ವೇದಿಕೆಯವರನ್ನು ಬಗ್ಗು ಬಡಿಯಲು ಅವಕಾಶಕ್ಕಾಗಿ ಹೊಂಚುಹಾಕುತ್ತಿದ್ದರು. ಹಾಗೆ ಒದಗಿ ಬಂದ ಅವಕಾಶವೇ 'ಸೃಷ್ಟಿ' ವೇದಿಕೆಯ ಕಾರ್ಯಕ್ರಮ. ಸೃಷ್ಟಿ ವೇದಿಕೆಯ ಸಿ.ಎಸ್. ನಂಜುಂಡಯ್ಯ, ಜಿ.ಪಿ. ಬಸವರಾಜು, ಎಂ.ಬಿ. ನಟರಾಜ್ ಮತ್ತಿತರರು, ಪೋಲಂಕಿ ರಾಮಮೂರ್ತಿಯವರ "ಸೀತಾಯಣ" ಕೃತಿಯ ಮೇಲೆ ವಿಚಾರ ಗೋಷ್ಠಿ ಏರ್ಪಡಿಸಿದ್ದರು. ವಿಚಾರ ಗೋಷ್ಠಿಯಲ್ಲಿ ಪೋಲಂಕಿಯವರು ತಮ್ಮ ವಿಚಾರಗಳನ್ನು ಮಂಡಿಸಿದ ನಂತರ ಕೆಲವರು ಕುತರ್ಕಗಳ ಪ್ರಶ್ನೆಗಳನ್ನು ಕೇಳುತ್ತಾ, ಗೊಂದಲವೆಬ್ಬಿಸಿದರು. ಅಶ್ಲೀಲಪದಗಳಿಂದ ಪೋಲಂಕಿಯವರನ್ನು ನಿಂದಿಸುತ್ತಾ, ವೇದಿಕೆಯ ಕಡೆಗೆ ನುಗ್ಗಿದರು, ಹಲ್ಲೆ ನಡೆಸಿದರು. ದೀಪಗಳು ಆರಿಸಲ್ಪಟ್ಟವು. ವೇದಿಕೆಯಲ್ಲಿದ್ದ ಸಭಾ ಪರಿಕರಗಳು ಧ್ವಂಸವಾದವು. ಸಭಿಕರ ಮೇಲೂ ಹಲ್ಲೆ ನಡೆಯಿತು. ಭೀತರಾಗಿ ಜನ ಹೊರಗಡೆ ಧಾವಿಸಿದರು. ಅಣತಿಯವರನ್ನು ಆಟೋದಲ್ಲಿ ಕರೆತಂದು ಕುಳ್ಳಿರಿಸಲಾಯಿತು. ಆದರೂ ಒಬ್ಬ ಆಟೋದೊಳಗೆ ನುಗ್ಗಿ ಅವರ ಮೇಲೆ ಹಾಗೂ ಅವರ ಪತ್ನಿ ಪ್ರಭಾರವರ ಮೇಲೂ ಹಲ್ಲೆ ನಡೆಸಿದರು.

ಈ ಹಲ್ಲೆಯನ್ನು ಖಂಡಿಸಿ, ದಲಿತ ವಿದ್ಯಾರ್ಥಿ ಒಕ್ಕೂಟದವರು ಸಹ್ಯಾದ್ರಿ ಕಾಲೇಜಿನಲ್ಲಿ ಪ್ರತಿಭಟನೆ ನಡೆಸಿದರು. ಅವರ ಮೇಲೆ ಎಬಿವಿಪಿಯವರು ಹಲ್ಲೆ ನಡೆಸಿದರು. ಈ ಘಟನೆಯ ನಂತರ ಅಣತಿಯವರು ಪೋಲೀಸ್ ಸ್ಟೇಶನ್‌ನಲ್ಲಿ ಪ್ರಕರಣ ದಾಖಲಿಸಿದರು. ಇವುಗಳು ಅಂದಿನ ದೈನಿಕಗಳಲ್ಲಿ ಪ್ರಮುಖ ವಿಷಯವಾಗಿ ಚರ್ಚಿಸಲ್ಪಟ್ಟಿತು. ದಸಂಸದ ಕಾರ್ಯನಿಮಿತ್ತ ಬೇರೆ ಜಿಲ್ಲೆಗೆ ತೆರಳಿದ್ದ ಕೃಷ್ಣಪ್ಪ ವಾಪಸಾದ ನಂತರ, ಇನ್ನೊಂದು ಬೃಹತ್ ಪ್ರತಿಭಟನೆ ಆಯೋಜಿಸಿದರು. ಅದರಲ್ಲಿ ಜಿ. ರಾಮಕೃಷ್ಣ, ಪ್ರೊ. ಧರ್ಮಲಿಂಗಂ,

ಚಂದ್ರಶೇಖರ ಪಾಟೀಲ ಮುಂತಾದವರು ಸೇರಿದ್ದರು. ರಾಜ್ಯ ಮಟ್ಟದ ಈ ಕಾರ್ಯಕ್ರಮದ ಸಂದರ್ಭದಲ್ಲಿ ಶಿವಮೊಗ್ಗಾದ ಬ್ರಾಹ್ಮಣರ ಬೀದಿಗಳಲ್ಲಿ ವಿಚಾರವಾದಿ ವೇದಿಕೆ ಸದಸ್ಯರು ಕರಪತ್ರಗಳನ್ನು ಹಂಚಿದ್ದರು. ಸತ್ಯನಾರಾಯಣ ಅಣತಿಯವರನ್ನೇ ಗುರಿಯಾಗಿಸಿಕೊಳ್ಳುವುದರಲ್ಲಿ ಆರ್.ಎಸ್.ಎಸ್. ಹಾಗೂ ಹಿಂದು ಮತೀಯವಾದಿಗಳಿಗೆ ಮುಖ್ಯ ಕಾರಣವೆಂದರೆ, ಅವರು ಬ್ರಾಹ್ಮಣ ಸಮುದಾಯಕ್ಕೆ ಸೇರಿದ್ದರೂ, ಎಡ ಪಂಥೀಯರು, ದಲಿತರು, ಪ್ರಗತಿಪರರೊಂದಿಗೆ ಸೇರಿ ವೈದಿಕ ಧರ್ಮದ ವಿರೋಧಿಯಾಗಿದ್ದುದರ ಬಗ್ಗೆ ತೀವ್ರ ಅಸಮಧಾನ. ಅವರು ಕೆಲಸ ಮಾಡುತ್ತಿದ್ದ ಡಿವಿಎಸ್ ಕಾಲೇಜಿನಲ್ಲಿ "ಸ್ವಾಮಿ"ಯವರೊಬ್ಬರನ್ನು ಕರೆಯಿಸಿದ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನು ಕಟ್ಟಿಕೊಂಡು ಅವರು ಪ್ರತಿಭಟನೆ ಮಾಡಿದ್ದರು. ಇವರ ವಿರುದ್ಧ ಸದರಿ ಕಾಲೇಜಿನ ಆಡಳಿತ ಮಂಡಳಿಯಿಂದ ಶಿಸ್ತು ಕ್ರಮ ಕೈಗೊಂಡಾಗ, ಪ್ರಖ್ಯಾತ ವಿಚಾರವಾದಿ ಡಾ. ಹೆಚ್. ನರಸಿಂಹಯ್ಯನವರಿಂದ ಮತ್ತು ಆಗಿನ ಶಿಕ್ಷಣ ಸಚಿವರಾದ ಬದರೀನಾರಾಯಣ್‌ರವರಿಂದ ಆಕ್ಷೇಪಗಳು ಬಂದಿದ್ದವು. ಸಮುದಾಯ ನಾಟಕ ತಂಡದವರು, ಈ ಎಲ್ಲಾ ಘಟನಾವಳಿಗಳನ್ನಾಧರಿಸಿ, ಬೀದಿ ನಾಟಕಗಳನ್ನು ಪ್ರದರ್ಶಿಸಿದ್ದರು.

ಸಾಗರದಲ್ಲಿ ವಿವಿಧ ಸಂಘಟನೆಗಳು ಒಗ್ಗೂಡಿ ವರದಕ್ಷಿಣೆ ವಿರುದ್ಧ ವಿಚಾರ ಗೋಷ್ಠಿಯನ್ನು ಏರ್ಪಡಿಸಿದ್ದರು. ಅಲ್ಲಿ ವಿಚಾರ ಮಂಡನೆಗೆ ನಾನು ಹೋಗಿದ್ದೆ. ದಸಂಸದ ತರಬೇತಿ ಶಿಬಿರಕ್ಕೆ ಹೋಗಿದ್ದರಿಂದ ಕೃಷ್ಣಪ್ಪ ನನ್ನೊಂದಿಗೆ ಬಂದಿರಲಿಲ್ಲ. ದಸಂಸ ಸಂಚಾಲಕರಾಗಿದ್ದ, ಎಂ.ಎಲ್. ನಾಗಭೂಷಣರವರು ಹಾಗೂ ಪ್ರಜ್ಞಾ ವೇದಿಕೆ, ದಸಂಸದವರು ಸೇರಿ ಆಯೋಜಿಸಿದ್ದ ಈ ವಿಚಾರಗೋಷ್ಠಿಯಲ್ಲಿ ಕಾಲೇಜು ವಿದ್ಯಾರ್ಥಿಗಳೇ ಅಧಿಕ ಸಂಖ್ಯೆಯಲ್ಲಿದ್ದರು. ವಿದ್ಯಾಥಿಗಳೂ ಸಹ ವಿಷಯದ ಪರ-ವಿರೋಧದ ವಾಗ್ವಾದದಲ್ಲಿ ಪೈಪೋಟಿಯಿಂದ ಪಾಲ್ಗೊಂಡಿದ್ದು ಅಂದಿನ ಯುವಜನತೆಯ ವಿಚಾರಗಳ ದಿಕ್ಕುದೆಸೆಯನ್ನು ಪ್ರತಿಬಿಂಬಿಸುತ್ತಿತ್ತು.

ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾನಿಲಯದವರು 'ಶ್ರೀಕುವೆಂಪು' ಎಂಬ ವಿಚಾರಸಂಕಿರಣವೊಂದನ್ನು ಬೆಂಗಳೂರಿನ ಸೆಂಟ್ರಲ್ ಕಾಲೇಜು ಆವರಣದ ಸೆನೆಟ್ ಹಾಲ್‌ನಲ್ಲಿ ಆಯೋಜಿಸಿದ್ದರು. ಈ ಸಂಬಂಧವಾಗಿ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿದ್ದ ಡಾ. ಜಿ.ಎಸ್. ಶಿವರುದ್ರಪ್ಪನವರು, ಕೃಷ್ಣಪ್ಪನವರಿಗೆ ಪತ್ರ ಬರೆದು "ಕುವೆಂಪು ಕಾದಂಬರಿಗಳಲ್ಲಿ ದಲಿತ ಜೀವನಚಿತ್ರ"ದ ವಿಷಯವಾಗಿ ಲೇಖನವೊಂದನ್ನು ಮಂಡಿಸಲು ಆಹ್ವಾನಿಸಿದ್ದರು. ಕೃಷ್ಣಪ್ಪ ಈ ಕರೆಯನ್ನು ಒಪ್ಪಿಕೊಂಡರು. ನಾನು ಮಕ್ಕಳನ್ನು ಕರೆದುಕೊಂಡು ಅವರೊಂದಿಗೆ ಹೊರಟೆನು. ಅಧ್ಯಾಪಕರಾದ ಕೃಷ್ಣಪ್ಪನವರಿಗೆ, ಕುವೆಂಪುರವರ ಬಗ್ಗೆ ಇದ್ದ ಅಪಾರ ಗೌರವ ಮತ್ತು ಅವರ ಕೃತಿಗಳ ಸುಧೀರ್ಘ ಓದು ಹಾಗೂ ದಲಿತ ಚಳುವಳಿಯ ಸೈದ್ಧಾಂತಿಕತೆಯೊಂದಿಗೆ ಸ್ಥಾಪಿತ ವಿಮರ್ಶಾ ಮಾನದಂಡಗಳಿಗಿಂತ ಭಿನ್ನ ದೃಷ್ಟಿಕೋನದಿಂದ ಲೇಖನವನ್ನು ಸಿದ್ಧಗೊಳಿಸಿಕೊಂಡಿದ್ದರು. ನಾನು ಮೂರೂ ದಿನಗಳ ಗೋಷ್ಠಿಯಲ್ಲಿ ಮಕ್ಕಳನ್ನು ತೊಡೆಮೇಲೆ ಮಲಗಿಸಿಕೊಂಡು, ವಿಚಾರಗಳನ್ನು ಆಲಿಸಿದ್ದೆ. ಅವರು ಮಂಡಿಸಿದ ಲೇಖನದ ಮುಖ್ಯ ವಾದ ಹೀಗಿತ್ತು:

ತಮಗಿಂತ ಮೇಲಿರುವ ಬ್ರಾಹ್ಮಣಶಾಹಿಯನ್ನು ಪ್ರತಿಭಟಿಸುವ ಭರದಲ್ಲಿ ಕುವೆಂಪುರವರಿಗೆ ಶೂದ್ರರಿಗಿಂತ ಕೆಳಮಟ್ಟದಲ್ಲಿರುವ ದಲಿತರು ಕಾಣದೆ ಹೋದರು. ಒಂದು ಕಡೆ ಶೋಷಣೆಯನ್ನು ಪ್ರತಿಭಟಿಸಿದ ಕವಿ, ಮತ್ತೊಂದು ಕಡೆ ಶೋಷಣೆಯನ್ನು ಮೌನವಾಗಿ ಒಪ್ಪಿಕೊಂಡರು. ಉದಾಹರಣೆಗೆ, ಸಣ್ಣ ಬೀರ ಮತ್ತು ಇಜಾರಸಾಬಿಯ ಹೊನ್ನಾಳಿ ಹೊಡೆತದ ಪ್ರಸಂಗವನ್ನು ಉಲ್ಲೇಖಿಸುತ್ತಾ, ಸೇಡಿಗೆ ಸೇಡು ತೀರಿಸಿಕೊಂಡ ಸಣ್ಣಬೀರ ಪ್ರತಿಭಟನೆಯ ಸಂಕೇತವಾಗುತ್ತಾನೆ. ಪಾತ್ರ ಜೀವಂತವಾಗುತ್ತದೆ. ಇಂಥ ಒಂದು ಸಣ್ಣ ಸಂದರ್ಭ, ಕಾದಂಬರಿಯ ಧೀರ್ಘ ಹರವಿನಲ್ಲಿ ಯಾವ ಲೆಕ್ಕಕ್ಕೂ ಬರುವುದಿಲ್ಲ. ದಲಿತ ಪಾತ್ರಗಳು ಕೇವಲ, ಹೆಂಡ-ಮಾಂಸ-ಕಾಮ ಇತ್ಯಾದಿ ಮಣ್ಣಿನ ಸ್ತರದಲ್ಲಿಯೇ ಬದುಕಿ ಪ್ರತಿಭಟಿಸದೆ, ಘರ್ಷಿಸದೆ, ಅರ್ಥೈಸಿಕೊಳ್ಳದೆ ಹೋಗುತ್ತವೆ. ಕುವೆಂಪು "ಒಡೇರದಿಣ್ಣೆ" ಮೇಲು ನಿಂತು ದಲಿತರ ಬದುಕನ್ನು ನೋಡಲು ಸಾಧ್ಯವೇ ಹೊರತು, ಹೊಲೆಯರ ಗುಡಿಸಲಿನಲ್ಲಿ ಕುಳಿತು ನೋಡಲಾರರು. ಹಾಗೇ, ಕಾವೇರಿ ಗುತ್ತಿಯುನ್ನು ನೋಡುತ್ತಿದ್ದ ಪ್ರಸಂಗವನ್ನು ಉದಾಹರಿಸಿಕೊಂಡು, ಮೇಲ್ಜಾತಿ ಹೆಣ್ಣೊಬ್ಬಳು ದಲಿತ ಹುಡುಗನನ್ನು ನೋಡುವಾಗ ನಿಸರ್ಗ ವಿರೋಧ, ಅಸ್ವಾಭಾವಿಕ ಆಗುವುದಾದರೆ, ಅದೇ ಬ್ರಾಹ್ಮಣ ಹೆಣ್ಣೊಬ್ಬಳು ಗೌಡರ ಹುಡುಗನನ್ನು ನೋಡುವಾಗ, ಅದು ಅಸಾಧ್ಯ, ಅಸ್ವಾಭಾವಿಕ ಆಗುವುದಿಲ್ಲ ಏಕೆ? ಆಗ ದದ್ದು ಹತ್ತಿದ ಬೀದಿನಾಯಿ, ಹಂದಿ ಕಲ್ಪನೆಗಳೇಕೆ ಸ್ಫುರಿಸುವುದಿಲ್ಲ? ಈ ಪ್ರಶ್ನೆಗಳನ್ನು ಕೇಳುವ ಕೃಷ್ಣಪ್ಪ ಅಂತಿಮವಾಗಿ ಈ ಮಾತುಗಳೊಂದಿಗೆ ತಮ್ಮ ಲೇಖನವನ್ನು ಮುಕ್ತಾಯಗೊಳಿಸುತ್ತಾರೆ. "ನನ್ನ ಈ ಎಲ್ಲ ವಾದದ ಮೊತ್ತದ ಅಭಿಪ್ರಾಯ ಇಷ್ಟೆ, ಕುವೆಂಪು ಅವರಲ್ಲಿರುವ ಸಂದಿಗ್ಧತೆಗಳು ಮಿತಿಗಳು, ವರ್ಗ ಹಿತಾಸಕ್ತಿಗಳು, ದಲಿತ ಜೀವನ ಚಿತ್ರಣಕ್ಕೆ ಅಥೆಂಟಿಸಿಟಿಯನ್ನೂ, ಸಮತೋಲನವನ್ನೂ ತಂದು ಕೊಡದೆ ಹೋಗುತ್ತದೆ. ಈ ಮಾತು ಕೇವಲ ಕುವೆಂಪು ಅವರಿಗೆ ಮಾತ್ರವಲ್ಲ, ಇದುವರೆಗೂ ಕನ್ನಡ ಸಾಹಿತ್ಯದಲ್ಲಿ ದಲಿತೇತರರು, ದಲಿತರನ್ನು ಕುರಿತು ಬರೆದಿರುವ ಎಲ್ಲ ಕೃತಿಗಳಿಗೂ ಅನ್ವಯವಾಗುತ್ತದೆ. ನನ್ನ ಈ ಆರೋಪಕ್ಕೆ ಇತ್ತೀಚಿನ ದಿನಗಳಲ್ಲಿ ವಸ್ತು, ಭಾಷೆ, ಶೈಲಿಗಳ ದೃಷ್ಟಿಯಿಂದ ವಿಶಿಷ್ಟವಾಗಿ ಬೆಳೆಯುತ್ತಿರುವ ದಲಿತರೆ ರಚಿಸುತ್ತಿರುವ ದಲಿತ ಸಾಹಿತ್ಯ ಉತ್ತರವಾಗಿದೆ."

ಹೀಗೆ ಮುಕ್ತಾಯಗೊಂಡ ಲೇಖನ ಮಂಡನೆ, ತರುವಾಯ ಬಹಳ ಬಿಗುವಿನ ವಾತಾರಣವನ್ನು ಸಭಾಂಗಣದಲ್ಲಿ ಮೂಡಿಸಿತ್ತು. ಅನೇಕ ಪ್ರಶ್ನೆಗಳನ್ನು ಸಾಹಿತ್ಯದ ವಿದ್ಯಾರ್ಥಿಗಳು ಎತ್ತಿದ್ದರು. ಅಂಥಹ ಒಂದು ಪ್ರಶ್ನೆಗೆ ಕೃಷ್ಣಪ್ಪ ಉತ್ತರಿಸಿದ್ದನ್ನು ಇಲ್ಲಿ ಉಲ್ಲೇಖಿಸಬಹುದು: "ಕಲೆಗಿಂತ ಬದುಕು ದೊಡ್ಡದು. ಬದುಕಿನ ಬಗ್ಗೆ ಕಾಳಜಿ ವಹಿಸದ ಸಾಹಿತ್ಯ ಸೃಷ್ಟಿ ಹಾಗೂ ವಿಮರ್ಶೆ ಎರಡೂ ಅಪಾಯಕಾರಿ. ಹಾಗು ಹೊಣೆಗೇಡಿ ಎಂದು ನನ್ನ ಅಭಿಪ್ರಾಯ." ಸಾಹಿತ್ಯ ವಲಯದಲ್ಲಿ ಕೃಷ್ಣಪ್ಪನವರ ಈ ವಿಮರ್ಶಾ ಲೇಖನ ಬಹು ಚರ್ಚೆಗೆ ಒಳಪಟ್ಟಿತು. ರಹಮತ್ ತರೀಕೆರೆರವರ ಸಂಪಾದಕತ್ವದಲ್ಲಿ ಪ್ರಕಟಗೊಂಡ "ಶತಮಾನದ ವಿಮರ್ಶೆಯ" ಗ್ರಂಥದಲ್ಲಿ ಈ ಲೇಖನ ಸೇರಿಸಲ್ಪಟ್ಟಿತು ಎಂಬುದನ್ನು ಇಲ್ಲಿ ಸ್ಮರಿಸಬಹುದು.

(ಮುಂದುವರೆಯುವುದು)

---

## ಸುರೇಂದ್ರ ಕೌಲಗಿಯವರಿಗೆ ಜಮ್ನಾಲಾಲ್ ಬಜಾಜ್ ಪ್ರಶಸ್ತಿ



ಹಿರಿಯ ಸರ್ವೋದಯ ಮುಖಂಡ ಸುರೇಂದ್ರ ಕೌಲಗಿಯವರಿಗೆ ಈ ವರ್ಷದ ಜಮ್ನಾಲಾಲ್ ಬಜಾಜ್ ರಾಷ್ಟ್ರೀಯ ಪುರಸ್ಕಾರವನ್ನು ಪ್ರಕಟಿಸಲಾಗಿದೆ. ಬಹಳ ವರ್ಷಗಳ ಹಿಂದೆ ಸ್ವಾತಂತ್ರ್ಯ ಹೋರಾಟಗಾರ ದಿ. ತಗಡೂರು ರಾಮಚಂದ್ರ ರಾವ್ ಅವರಿಗೆ ಈ ಗೌರವ ಸಂದಿತ್ತು. ಈಗ ಕರ್ನಾಟಕದ ಎರಡನೆಯವರಾಗಿ ಕೌಲಗಿಯವರು ಈ ಗೌರವಕ್ಕೆ ಭಾಜನರಾಗಿದ್ದಾರೆ.

ಜಮ್ನಾಲಾಲ್ ಬಜಾಜ್ ಕುಟುಂಬ ಗಾಂಧೀಜಿಯವರ ಜೀವಿತ ಕಾಲದಿಂದಲೂ ಗಾಂಧಿವಾದಿ ರಚನಾತ್ಮಕ ಚಟುವಟಿಕೆಗಳೊಂದಿಗೆ ಗುರುತಿಸಿಕೊಂಡಿದ್ದಾರೆ. ಅವರ ಕುಟುಂಬದ ಸದಸ್ಯರು ಈಗಲೂ ಗಾಂಧಿಯವರ ವಾರ್ಧಾ ಮತ್ತು ವಿನೋಬಾರ ಪೌನಾರ್ ಆಶ್ರಮಗಳ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದು, ತಮ್ಮ ಕುಟುಂಬದ ವಾಣಿಜ್ಯೋದ್ಯಮ ಚಟುವಟಿಕೆಗಳಿಗೆ ಒಂದು ಘನತೆಯನ್ನು ಒದಗಿಸಿಕೊಂಡಿದ್ದಾರೆ. ಅಂತೆಯೇ ಕೌಲಗಿಯವರು ಮಂಡ್ಯ ಜಿಲ್ಲೆಯ ಮೇಲ್ಕೋಟೆಯಲ್ಲಿ ಜನಪದ ಸೇವಾ ಟ್ರಸ್ಟ್ ಆಶ್ರಯದಲ್ಲಿ ನಡೆಸುತ್ತಿರುವ ಖಾದಿ-ಗ್ರಾಮೋದ್ಯೋಗ, ಹೊಸ ಜೀವನ ದಾರಿ ಪ್ರಯೋಗ, ಅಂಗವಿಕಲ ಮತ್ತು ಅನಾಥ ಮಕ್ಕಳ ಪುನರ್ವಸತಿ ಮತ್ತು 'ಜನಪದ ವಿಚಾರ' ಎಂಬ ಗಾಂಧಿ ವಿಚಾರಗಳ ಮಾಸಿಕದ ಸಂಪಾದನೆ ಮತ್ತು ಪ್ರಕಟಣೆ ಇತ್ಯಾದಿ ವಿಧಾಯಕ ಚಟುವಟಿಕೆಗಳನ್ನು ಮಾನ್ಯ ಮಾಡಿ ಅವುಗಳನ್ನು ಪ್ರೋತ್ಸಾಹಿಸಲು ಈ ಪ್ರಶಸ್ತಿಯನ್ನು ಕೌಲಗಿಯವರಿಗೆ ನೀಡಲಾಗಿದೆ.

ಈ ಪ್ರಶಸ್ತಿ ಐದು ಲಕ್ಷ ರೂಪಾಯಿಗಳ ನಗದು ಮತ್ತು ಪ್ರಶಸ್ತಿ-ಫಲಕಗಳನ್ನು ಒಳಗೊಂಡಿದ್ದು, ಮುಂಬೈನಲ್ಲಿ ನವೆಂಬರ್‌ನಲ್ಲಿ ನಡೆಯುವ ಸಮಾರಂಭದಲ್ಲಿ ಅವರಿಗೆ ಪ್ರದಾನ ಮಾಡಲಾಗುವುದು. ಸುರೇಂದ್ರ ಕೌಲಗಿಯವರಿಗೆ 'ಹೊಸ ಮನುಷ್ಯ'ದ ಪರವಾಗಿ ಅಭಿನಂದನೆಗಳು.-ಸಂ

ಪರಿಸರ

# ಪಶ್ಚಿಮ ಘಟ್ಟಗಳಿಗೆ ಬಂದಿದೆ ಈಗ ಕಂಟಕ

–ಡಾ. ಶೇಖರ್ ಗೌಳೇರ್



ಅಂದು ಮಡಿಕೇರಿ ೮೦ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಸಂಭ್ರಮದಲ್ಲಿ ಮುಳುಗಿತ್ತು. ಅಲ್ಲಿಗೆ ಬಂದವರು ಅಲ್ಲಿನ ಅನುಪಮ ಪ್ರಕೃತಿ ಸೌಂದರ್ಯ ಮತ್ತು ತಂಪು ಹವಾಗುಣವನ್ನು ಹಾಡಿಹೊಗಳಿದರು. 'ಜಯ ಸುಂದರ ನದಿ ವನಗಳ ನಾಡೆ.....' 'ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲಿ, ನಿತ್ಯಹರಿದ್ವರ್ಣ ತೇಗ ಗಂಧ, ತರುಗಳಲ್ಲಿ ನಿತ್ಯೋತ್ಸವ' ಇತ್ಯಾದಿ ಕವಿವಾಣಿಗಳು ಅಲ್ಲಿ ಮೊಳಗಿದವು. ಸಮ್ಮೇಳನಾಧ್ಯಕ್ಷರಾದ ಮಲೆನಾಡಿನ ಪುತ್ರ ನಾ.ಡಿಸೋಜಾರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಕನ್ನಡ ನಾಡುನುಡಿಗಳ ಸಂರಕ್ಷಣೆಯ ಮಹತ್ವದ ಬಗ್ಗೆ ಮಾತನಾಡುತ್ತಾ, ಕನ್ನಡಿಗರ ಜೀವನ್ಮರಣದ ಪ್ರಶ್ನೆಯಾಗಬಲ್ಲ ಪಶ್ಚಿಮಘಟ್ಟಗಳ ಸಂರಕ್ಷಣೆಯಾಗಬೇಕು, ಕಸ್ತೂರಿರಂಗನ್ ವರದಿ ಅನುಷ್ಠಾನಗೊಳ್ಳಬೇಕು ಎಂದು ಹೇಳಿದ್ದೇ ತಡ ಪ್ರತಿಭಟನೆಯ ಧ್ವನಿ ಭುಗಿಲೆದ್ದಿತು. ಡಿಸೋಜಾ ಅವರು ಬೇಷರತ್ ಕ್ಷಮೆ ಯಾಚಿಸದಿದ್ದರೆ, ಅಲ್ಲಿಯೇ ಉಗ್ರ ಹೋರಾಟ ನಡೆಸಲಾಗುವುದೆಂದು ಸ್ಥಳೀಯ ಶಾಸಕರಾದ ಕೆ.ಜಿ.ಬೋಪಯ್ಯ ಮತ್ತು ಅಪ್ಪಚ್ಚು ರಂಜನ್ ಒತ್ತಾಯ ಮಾಡಿದರು. ಕನ್ನಡ ಭಾಷೆ, ನೆಲ, ಜಲ ಹಾಗೂ ಜನರ ಪ್ರಾತಿನಿಧಿಕ ಸಂಸ್ಥೆಯೆಂದು ಬೀಗುವ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಅಸಹಾಯಕತೆಯ ಪರಾಕಾಷ್ಠೆಯಲ್ಲಿ ಸಮ್ಮೇಳನದ ಅಂತ್ಯದಲ್ಲಿ ಕಸ್ತೂರಿರಂಗನ್ ವರದಿಯ ಜಾರಿಯನ್ನು ವಿರೋಧಿಸುವ ನಿರ್ಣಯವನ್ನು ಕೈಗೊಂಡಿತು. ಅದು ಸದ್ದಿಲ್ಲದೆ ಅನುಮೋದನೆಯೂ ಆಯಿತು.

ನಮ್ಮ ಸಾಹಿತ್ಯ–ಸಾಂಸ್ಕೃತಿಕ ಲೋಕದ ಬೌದ್ಧಿಕ ದಿವಾಳಿತನದ, ಅತಿರೇಕದ ಪ್ರದರ್ಶನವಿದು. ನುಡಿಗೆ ಸಂಬಂಧಿಸಿದ ಹಾಗೆಯೇ, ನಾಡಿನ ಪ್ರಕೃತಿ, ಪರಿಸರ ಕಾಳಜಿಗಳನ್ನು ಕುರಿತಂತೆ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯಬೇಕಾದ ಸಾಹಿತ್ಯ ಪರಿಷತ್ತಿನಂತಹ ಕನ್ನಡಿಗರ ಪ್ರಾತಿನಿಧಿಕವೆಂದು(?) ಹೇಳಲಾಗುವ ಸಂಘಟನೆಯೇ ಮಾಧವ್ ಗಾಡ್ಗೀಳ್ ಹಾಗೂ ಕಸ್ತೂರಿ ರಂಗನ್ ವರದಿಯನ್ನು ಗಂಭೀರವಾಗಿ ಅರ್ಥಮಾಡಿಕೊಳ್ಳದೇ, ಚರ್ಚಿಸದೇ, ಕನಿಷ್ಟ ಪಕ್ಷ ಒಂದು ಗೋಷ್ಠಿಯಲ್ಲಾದರೂ ಸಂವಾದ ಮಾಡದೇ ಆತುರಕ್ಕೆ ಬಲಿಯಾಗಿ ಅದರ ವಿರುದ್ಧ ನಿರ್ಣಯ ಕೈಗೊಂಡು ತಾನೇ ಅಗೌರವಕ್ಕೆ ಪಾತ್ರವಾಯಿತಲ್ಲದೆ ಹಾಸ್ಯಾಸ್ಪದವೂ ಆಯಿತು. ನಿಸರ್ಗ ಸಂಪತ್ತನ್ನು ಲೂಟಿ ಮಾಡಿ ಭೋಗದ ಬದುಕು ರೂಪಿಸಿಕೊಳ್ಳುವ ಒಂದು ಗುಂಪಿನ ಜನರ ಸಾಲಿಗೆ ಸಾಹಿತಿಗಳೂ ಸೇರುತ್ತಾರೆಯೇ? ಎಂದು ಪ್ರಶ್ನಿಸಬೇಕಾದ ಕಾಲವೀಗ ಬಂದಂತಿದೆ.

೧೫೦ ದಶಲಕ್ಷ ವರ್ಷಗಳಷ್ಟು ಪುರಾತನವಾದ ಪಶ್ಚಿಮಘಟ್ಟಗಳು ಹಿಮಾಲಯಕ್ಕಿಂತ ಹಳೆಯವು. ಭೂ ವೈಜ್ಞಾನಿಕವಾಗಿ ಇವುಗಳನ್ನು ಜಗತ್ತಿನ ವಜ್ರಕವಚಗಳೆಂದೇ ಬಣ್ಣಿಸಲಾಗಿದೆ. ದೇಶದ ಸಪ್ತ ಗಿರಿಸಾಲುಗಳಲ್ಲಿ ಇವುಗಳಿಗೆ ಅಗ್ರಸ್ಥಾನ. ಡೆಕ್ಕನ್ ಟ್ರ್ಯಾಪ್ ಎಂದೇ ಹೆಸರಾದ ಈ ಪ್ರದೇಶದಲ್ಲಿ ಪಶ್ಚಿಮಘಟ್ಟಗಳು ಪ್ರಧಾನ ಜಲಸ್ಥಾವರಗಳು. ದಕ್ಷಿಣ ಭಾರತದ ಒಟ್ಟು ೫೮ ನದಿಗಳು ಇಲ್ಲಿ ಹುಟ್ಟಿ ಹರಿಯುತ್ತವೆ. ಪಶ್ಚಿಮಘಟ್ಟಗಳಿಲ್ಲದಿದ್ದರೆ ಮುಂಗಾರು ಮಾರುತಗಳನ್ನು ತಡೆದು ಮಳೆ ಸುರಿಸುವುದಾದರೂ ಯಾವುದು? ಮುಂಗಾರಿನಲ್ಲಿ ೨೦೦೦ದಿಂದ ೮೦೦೦ ಮಿ.ಮೀ. ಮಳೆ ಸುರಿದು ಪಶ್ಚಿಮಘಟ್ಟಗಳು ಹಚ್ಚ ಹಸುರಾಗುತ್ತವೆ. ಜಲನಿಧಿಗಳಾಗಿ ರೂಪುಗೊಳ್ಳುತ್ತವೆ. ಇಲ್ಲಿ ಧುಮುಕುವ ನೂರಾರು ಜಲಪಾತಗಳಂತೂ ಮನಮೋಹಕ. ನಮ್ಮ ನಿತ್ಯ ಬದುಕಿನ ಚಕ್ರ ತಿರುಗಿಸುವ ವಿದ್ಯುದಾಗಾರಗಳ ನೆಲೆಗಳಾಗಿವೆ.



ಪಶ್ಚಿಮಘಟ್ಟಗಳ ವ್ಯಾಪ್ತಿಯಲ್ಲಿ ೫೦ಕ್ಕೂ ಹೆಚ್ಚು ಅಣೆಕಟ್ಟುಗಳು ನಿರ್ಮಾಣಗೊಂಡಿವೆ. ಇವುಗಳಿಂದ ಕುಡಿಯುವ ನೀರು, ಕೃಷಿ ನೀರಾವರಿ, ಕೈಗಾರಿಕೆ, ಜಲವಿದ್ಯುತ್ ಘಟಕ, ಸಂಗೀತ ಕಾರಂಜಿ ಹಾಗೂ ಪ್ರವಾಸೋದ್ಯಮಗಳು ಪ್ರಗತಿಯಾಗಿವೆ. ಸುಮಾರು ೨೫ ಕೋಟಿ ಜನರ ಬದುಕು, ಅಸ್ತಿತ್ವ ಹಾಗೂ ಭವಿಷ್ಯ ಈ ಪಶ್ಚಿಮ ಘಟ್ಟಗಳನ್ನೇ ಅವಲಂಬಿಸಿದೆ. ಸೋಲಿಗರು, ಸಿದ್ದಿಗಳು, ಹಾಲಕ್ಕಿ ಒಕ್ಕಲಿಗರು, ಕಾಡು ಕುರುಬರು, ಜೇನು ಕುರುಬರು ಹಾಗೂ ಗೌಳಿಗರಂಥ ಬುಡಕಟ್ಟು ಜನಾಂಗದವರ ದೈನಂದಿನ ಬದುಕು ಮತ್ತು ಅವನ್ನು ಕಟ್ಟಿರುವ ಸಾಮಾಜಿಕ–ಸಾಂಸ್ಕೃತಿಕ ಮೌಲ್ಯಗಳು ಈ ಪಶ್ಚಿಮ ಘಟ್ಟದೊಂದಿಗೆ ಬೆರೆತುಹೋಗಿದೆ. ಪಶ್ಚಿಮ ಘಟ್ಟಗಳನ್ನು ಕನ್ನಡಿಗರ ಬೆನ್ನುಲುಬೆಂದೇ ಕರೆದರೆ ಆಶ್ಚರ್ಯವಲ್ಲ! ಆದರೆ ಈ ಮಾತು ಎಷ್ಟು ಜನ ಕನ್ನಡಿಗರಿಗೆ ಅರ್ಥವಾದೀತು?

ಜಗತ್ತಿನ ಮಹಾ ಜೀವ ವೈವಿಧ್ಯತೆಯ ಎಂಟು ಅದ್ಭುತ ಸೂಕ್ಷ್ಮತಾಣಗಳ ಪೈಕಿ ಪಶ್ಚಿಮಘಟ್ಟವೂ ಒಂದು. ಈ ಜೀವಿ ವೈವಿಧ್ಯದ ಮಹಾಭಂಡಾರದಲ್ಲಿ ೪೦೦೦ ಹೂ ಬಿಡುವ ಸಸ್ಯ ಪ್ರಭೇದ, ೬೪೫ ಜಾತಿಯ ನಿತ್ಯಹರಿದ್ವರ್ಣ ಮರಗಳು, ೩೫೦ ಜಾತಿಯ ಇರುವೆ, ೩೩೦ ಜಾತಿಯ ಚಿಟ್ಟೆಗಳು, ೧೭೪ ಜಾತಿಯ ಕೀಟವರ್ಗ, ೨೮೮ ಪ್ರಭೇಧಗಳ ಮೀನುಗಳು, ೨೨೦ ಜಾತಿಯ ಉಭಯವಾಸಿ ಪ್ರಭೇಧ, ೨೨೫ ಜಾತಿಯ ಸರೀಸೃಪ ಪ್ರಭೇದ, ೧೨೦ ಸಸ್ತನಿ ಪ್ರಭೇದ ಹಾಗೂ ೫೦೦ಕ್ಕೂ ಹೆಚ್ಚು ಪಕ್ಷಿ ಪ್ರಭೇದಗಳು ಇದೂವರೆಗಿನ ಜೀವ ವಿಜ್ಞಾನಿಗಳ ಸಂಶೋಧನಾ ದಾಖಲೆಯ ಪಟ್ಟಿಯಲ್ಲಿವೆ. ಪ್ರತಿ ವರ್ಷವೂ ನಿರಂತರವಾಗಿ ಸಸ್ಯ ಮತ್ತು ಪ್ರಾಣಿ ವರ್ಗಗಳಿಗೆ ಸೇರಿದ ಹೊಸ ಹೊಸ ಜೀವ ಪ್ರಭೇದಗಳು ಪತ್ತೆಯಾಗುತ್ತಲೇ ಇವೆ. ಕಣ್ಣಿಗೆ ಕಾಣದ ಅದೆಷ್ಟು ಜೀವ ಜಂತುಗಳು ಇಲ್ಲಿ ಮನೆ ಮಾಡಿಕೊಂಡಿವೆಯೋ ಊಹಿಸಲೂ ಸಾಧ್ಯವಿಲ್ಲ. ಈ ವಿಶಿಷ್ಟ ಭೌಗೋಳಿಕ ಪರಿಸರದ ಮೇಲೆ ಜಗತ್ತಿನ ನೂರಾರು ಜೀವ ವಿಜ್ಞಾನಿಗಳು ಸಂಶೋಧನೆ ಮಾಡುತ್ತಿದ್ದಾರೆ. ಬೆಲೆ ಕಟ್ಟಲಾಗದ ಅಗಣಿತ ಜೀವಿ ವೈವಿಧ್ಯದ ಈ ಜೀವಂತ ಗಣಿಯನ್ನು ಮುಂದಿನ ಪೀಳಿಗೆಗೆ ಉಳಿಸಬೇಕಾದದ್ದು ನಮ್ಮೆಲ್ಲರ ಹೊಣೆಯಲ್ಲವೆ ?

ವಿಶೇಷವಾಗಿ ಪಶ್ಚಿಮಘಟ್ಟದ ತಪ್ಪಲಿನ ಕರ್ನಾಟಕದ ಮಲೆನಾಡಿನಲ್ಲಿ ಅರಣ್ಯ ಮೂಲ ಕೈಗಾರಿಕೆಗಳಾದ ಕಾಗದ, ಮರದ ಹಾಳೆ, ಗಂಧದೆಣ್ಣೆ, ಪೀಠೋಪಕರಣಗಳಿಗಾಗಿ ಅಮೂಲ್ಯ ಮರಗಳು ಉರುಳಿದವು. ಬಿದಿರು, ಬೆತ್ತ, ಶ್ರೀಗಂಧ, ಕರಿಮರ, ಸಾಗುವಾನಿ, ನಂದಿ, ಮತ್ತಿ, ಹೊನ್ನೆ, ಮುಂತಾದವುಗಳ ದಟ್ಟತೆ ಕ್ಷೀಣಿಸಿತು. ಬೃಹತ್ ಅಣೆಕಟ್ಟೆಗಳಿಂದ ನಿತ್ಯಹರಿದ್ವರ್ಣ ಕಾಡು ಮುಳುಗಡೆಯಾದವು. ಚಹ, ಕಾಫಿ, ಏಲಕ್ಕಿ, ಮೆಣಸು, ರಬ್ಬರ್ ತೋಟಗಾರಿಕೆಯಿಂದ ಮಲೆನಾಡಿನ ಅರಣ್ಯ ಕರಗತೊಡಗಿತು. ನೆಲೆ ಕಳೆದುಕೊಂಡ ವನ್ಯಮೃಗಗಳು ನೆರೆ ಪ್ರದೇಶಗಳಿಗೆ ವಲಸೆ ಹೋದವು. ಕುದುರೆಮುಖ, ಕೆಮ್ಮಣ್ಣುಗುಂಡಿ, ಅಂಬಾರಗುಡ್ಡದಂಥ ಗಣಿಗಾರಿಕೆಗಳು, ಕಬ್ಬಿಣದ ಅದಿರು, ಮ್ಯಾಂಗನೀಸ್, ಬೆಣಚು ಕಲ್ಲು ಮುಂತಾದವುಗಳನ್ನು ಅಗೆದು ತೆಗೆದು ಕಾಡಿನ ಗರ್ಭವನ್ನೇ ಸೀಳಿ ಹಾಕಿದವು. ಮನುಷ್ಯನ ಅತಿಯಾದ ಚಟುವಟಿಕೆಗಳಿಂದ, ಅಮೂಲ್ಯವಾದ ಪಶ್ಚಿಮಘಟ್ಟಗಳು ಸೊರಗತೊಡಗಿದವು. ಅಕ್ರಮ ಸಕ್ರಮ ಸಾಗುವಳಿ, ಬಗರ್‌ಹುಕುಂ, ಹೆಸರಿನ ಭೂ ಮಾಫಿಯಾ ಕೂಡ ಕಾಡಿನ ಗರ್ಭಕ್ಕೆ ಕನ್ನ ಹಾಕಿತು. ೧೯೭೦ರ ದಶಕದಲ್ಲಿ ನಿಧಾನವಾಗಿ ಪರಿಸರ ಚಳುವಳಿಗಳು ಆರಂಭಗೊಂಡವು. ವೃಕ್ಷ ಲಕ್ಷ ಆಂದೋಲನ, ಮೌನ ಕಣಿವೆ ಉಳಿಸಿ ಆಂದೋಲನ, ಪಶ್ಚಿಮಘಟ್ಟ ಉಳಿಸಿ ಅಭಿಯಾನ,



ನರ್ಮದಾ ಬಚಾವೊ ಆಂದೋಲನಗಳು ಪಶ್ಚಿಮಘಟ್ಟದ ತಪ್ಪಲಿನಲ್ಲಿ ಮಾರ್ದನಿಸಿತು. ಸರ್ಕಾರಗಳು ಕಾಯ್ದಿರಿಸಿದ ಅರಣ್ಯ, ಕಾಯ್ದಿರಿಸಿದ ಜೀವಾಲಯ, ಅಭಯಾರಣ್ಯ, ವನ್ಯಜೀವಿ ಧಾಮ, ರಾಷ್ಟ್ರೀಯ ಉದ್ಯಾನವನಗಳನ್ನು ಸ್ಥಾಪಿಸಿ ಕೈ ತೊಳೆದುಕೊಳ್ಳಲು ನೋಡಿತು.

ಆದರೆ ಪಶ್ಚಿಮ ಘಟ್ಟಗಳು ಕೇವಲ ಕರ್ನಾಟಕಕ್ಕೆ, ಭಾರತಕ್ಕೆ ಸಂಬಂಧಿಸಿದ ಪ್ರದೇಶವಲ್ಲವಲ್ಲ? ಅದು ಇಡೀ ಭೂಖಂಡದ ಜೀವ ಕೇಂದ್ರಗಳಲ್ಲಿ ಒಂದಾಗಿದ್ದು, ಅದರ ಸಂರಕ್ಷಣೆಗೆ ಅಂತಾರಾಷ್ಟ್ರೀಯ ಮಟ್ಟದ ಪರಿಸರವಾದಿ ವಲಯಗಳ ಜೊತೆಗೆ ಸ್ಥಳೀಯ ಒತ್ತಡಗಳೂ ಹೆಚ್ಚಾಗತೊಡಗಿತು. ಆಗ ೨೫ ಕೋಟಿಗೂ ಅಧಿಕ ಜನರ ಜೀವಸಲಿಲವಾದ ಪಶ್ಚಿಮಘಟ್ಟಗಳನ್ನು ಸಂರಕ್ಷಿಸುವುದು ಹೇಗೆ, ಅವುಗಳ ಒಡಲಲ್ಲಿ ನಡೆಸಬಹುದಾದ ಅಭಿವೃದ್ಧಿ ಕಾರ್ಯಗಳ ಸ್ವರೂಪ ಹಾಗೂ ತೀವ್ರತೆಗಳ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡಬೇಕೆಂದು ೪-೩-೨೦೧೦ರಂದು ಅಂದಿನ ಅರಣ್ಯ ಮತ್ತು ಪರಿಸರ ಸಚಿವರಾಗಿದ್ದ ಪ್ರೊ. ಜಯರಾಂ ರಮೇಶ್‌ರವರು ಖ್ಯಾತ ಪರಿಸರ ತಜ್ಞರಾದ ಪ್ರೊ. ಮಾಧವ್ ಗಾಡ್ಗೀಳ್ ಅಧ್ಯಕ್ಷತೆಯಲ್ಲಿ 'ಪಶ್ಚಿಮಘಟ್ಟ ಜೀವಿ ಪರಿಸರ ಪರಿಣಿತ'ರ ತಂಡ ರಚಿಸಿದರು. ಅವರ ಜೊತೆಗೆ ೧೪ ಜನ ಪರಿಣಿತರಿದ್ದರು. ತಂಡದ ವರದಿಯನ್ನು ದಿನಾಂಕ ೩೦-೦೮-೨೦೧೧ರಂದು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಯಿತು.

ಆ ಸಂದರ್ಭದಲ್ಲಿ ಜಯಂತಿ ನಟರಾಜನ್ ಹೊಸದಾಗಿ ಬಂದ ಪರಿಸರ ಸಚಿವರಾಗಿದ್ದರು. ಅವರಿಗೆ, ಅಂದರೆ ಜಯರಾಂ ರಮೇಶರನ್ನು ತೆಗೆದು ಅವರ ಜಾಗದಲ್ಲಿ ಇವರನ್ನು ಕೂರಿಸಿದ್ದ ಹಿತಾಸಕ್ತಿಗಳಿಗೆ ಈ ವರದಿಯ ಶಿಫಾರಸ್ಸುಗಳು ರುಚಿಸಲಿಲ್ಲ. ಹಾಗಾಗಿ ಅವರು ಗಾಡ್ಗೀಳ್ ವರದಿಯನ್ನು ಬಹಿರಂಗ ಪಡಿಸದೆ ಕಾಲಹರಣ ಮಾಡಿದರು. ಮಾಹಿತಿ ಹಕ್ಕಿನ ಪ್ರಕಾರ ಕೇರಳದ *ರಿವರ್ ರಿಸರ್ಚ್ ಫೌಂಡೇಶನ್*‌ನ ಕೃಷ್ಣನ್ ನ್ಯಾಯಾಂಗ ಹೋರಾಟ ನಡೆಸಿದಾಗ ಸರ್ಕಾರ ವರದಿಯನ್ನು ಸಾರ್ವಜನಿಕರಿಗೆ ತನ್ನ ಜಾಲ ತಾಣದಲ್ಲಿ ಪ್ರಕಟಿಸಿತು. ವರದಿ ಪ್ರಕಟವಾಗುತ್ತಿದ್ದಂತೆ ಪಶ್ಚಿಮಘಟ್ಟ ವ್ಯಾಪ್ತಿಯ ಆರೂ ರಾಜ್ಯಗಳ ಬಹುತೇಕ ರಾಜಕೀಯ ಪಕ್ಷಗಳು ಪರಿಣಿತ ವರದಿಯ ಮೇಲೆ ಹರಿಹಾಯ್ದರು. ಮಾಧವ್ ಗಾಡ್ಗೀಳ್‌ರ ೫೦೦ ಪುಟದ ವರದಿಯಲ್ಲಿ ಏನಿದೆ ಎಂಬುದನ್ನು ತಿಳಿದುಕೊಳ್ಳುವ ಗೋಜಿಗೆ ಯಾರೂ ಹೋಗಲಿಲ್ಲ.

ಬಹಿರಂಗ ಪಡಿಸಲಾರದಂಥ ರಹಸ್ಯ ಗಾಡ್ಗೀಳ್ ವರದಿಯಲ್ಲಿ ಏನಿತ್ತು? ವರದಿಯಲ್ಲಿ ಗಾಡ್ಗೀಳ್‌ರು ಪಶ್ಚಿಮಘಟ್ಟಗಳನ್ನು ನಾಲ್ಕು ಅತಿ ಸೂಕ್ಷ್ಮವಲಯಗಳನ್ನಾಗಿ ಗುರುತಿಸಿ, ಅವುಗಳಲ್ಲಿ ೨೨೦೦ ಗ್ರಿಡ್‌ಗಳನ್ನು ವಿಭಜನೆ ಮಾಡಿದ್ದರು. ಅಭಿವೃದ್ಧಿ ಕಾರ್ಯಗಳನ್ನು ಮಾಡುವಾಗ, ಗ್ರಾಮ ಪಂಚಾಯಿತಿ ಹಾಗೂ ಸ್ಥಳೀಯ ಸಂಘ ಸಂಸ್ಥೆಗಳ ನಿರ್ಧಾರಗಳೇ ಅಂತಿಮವಾಗಬೇಕೆಂದು ಅವರು ವರದಿಯಲ್ಲಿ ಸೂಚಿಸಿದ್ದರು. "ಜೀವಿ ಪರಿಸರಾತ್ಮಕ ಸೂಕ್ಷ್ಮ ಪ್ರದೇಶ"ದಲ್ಲಿ ಕೆಲವು ನಿಷೇಧಗಳನ್ನು ಗಾಡ್ಗೀಳ್ ಪ್ರಸ್ತಾಪ ಮಾಡಿದ್ದರು. ಪ್ಲಾಸ್ಟಿಕ್ ಬಳಕೆ, ವಂಶವಾಹಿ ರೂಪಾಂತರ ಬೆಳೆ, ವಿಶೇಷ ಆರ್ಥಿಕ ವಲಯ ಮತ್ತು ಹೊಸ ಗಿರಿಧಾಮಗಳ ನಿರ್ಮಾಣ, ಸರ್ಕಾರಿ ಭೂಮಿಯನ್ನು ಖಾಸಗಿ ಭೂಮಿಯಾಗಿ ಪರಿವರ್ತನೆ, ಹೊಸ ವಿದ್ಯುತ್ ಯೋಜನೆ, ಗಣಿಗಾರಿಕೆ, ವಿಷಕಾರುವ ಉದ್ದಿಮೆಗಳಿಗೆ, ಕೀಟನಾಶಕಗಳ ಬಳಕೆ ಇವೆಲ್ಲವುಗಳ ಮೇಲೆ ನಿಷೇಧ ವಿಧಿಸಲಾಗಿತ್ತು. ಇವುಗಳೆಲ್ಲವೂ ರಾಜಕಾರಣಿಗಳ ಮತ್ತು ಅವರ ಚೇಲಾಗಳಾದ ವಿವಿಧ ಕ್ಷೇತ್ರಗಳ ಉದ್ಯಮಪತಿಗಳು, ಭೂ ದಂಧೆಕೋರರು, ಕಂಟ್ರಾಕ್ಟರುಗಳು, ವ್ಯಾಪಾರಿಗಳು, ಅಕ್ರಮ ಭೂ ಮಾಲೀಕರ ಕೆಂಗಣ್ಣಿಗೆ ಗುರಿಯಾದವು. ಗಾಡ್ಗೀಳ್ ವರದಿ ಮೂಲೆಗುಂಪಾಗಬೇಕೆಂದು ಅವರು ಬಯಸಿದ್ದರು. ಅಭಿವೃದ್ಧಿಯ ರುಚಿ ಹತ್ತಿಸಿಕೊಂಡಿದ್ದ ಸಾಮಾನ್ಯ ಜನಸಮೂಹವೂ ಈ ಹುನ್ನಾರಗಳನ್ನು ಅರ್ಥ ಮಾಡಿಕೊಳ್ಳಲಿಲ್ಲ ಮಾತ್ರವಲ್ಲ, ಗಾಡ್ಗೀಳ್ ತಮ್ಮ ವರದಿಯಲ್ಲಿ ತಿಳಿಸಿದ್ದ ಹಸಿರು ತಂತ್ರಜ್ಞಾನ, ಸಾವಯವ ಕೃಷಿ, ಜನಪರ ಉದ್ಯೋಗ ಸೃಷ್ಟಿಯ ಉದ್ದಿಮೆ, ಕುಲಾಂತರಿ ಮುಕ್ತ ಪಶ್ಚಿಮಘಟ್ಟ, ದೇಸೀ ಜಾನುವಾರು ಸಾಕಾಣಿಕೆ, ಗೋಮಾಳಗಳ ಮರುಸ್ಥಾಪನೆ, ಸಾಂಪ್ರದಾಯಿಕ ಬೆಳೆಗಳ ಬೀಜ ಸಂರಕ್ಷಣೆ, ಸಾವಯವ ಗೊಬ್ಬರ ಘಟಕ ಇತ್ಯಾದಿ ಪರಿಸರ ಸ್ನೇಹಿ ಅಂಶಗಳನ್ನು ಒಳಗೊಂಡ ಪರ್ಯಾಯ ಅಭಿವೃದ್ಧಿ ಮಾದರಿಯ ವಿವರಗಳನ್ನು ಗಮನಿಸಲೇ ಹೋಗಲಿಲ್ಲ. ಸರ್ಕಾರಕ್ಕೆ ಬೇಕಾಗಿದ್ದುದೂ ಇದೇ ಆಗಿತ್ತಲ್ಲ!



ನಮ್ಮ ರಾಜಕಾರಣಿಗಳ ಅಭಿವೃದ್ಧಿಯ ವ್ಯಾಖ್ಯಾನದಲ್ಲಿ ಪ್ರಾಣಿ, ಪಕ್ಷಿ, ಕೀಟ, ಗಿಡ, ಮರ, ಲತೆ, ಅಂತರ್ಜಲ, ಕೆರೆ, ಬಾವಿ, ನದಿ, ತೊರೆ ಇವು ಯಾವುದೂ ಲೆಕ್ಕಕ್ಕಿಲ್ಲ. ಇವು ವಿನಾಶಗೊಂಡರೆ ನಮ್ಮ ಬದುಕು ಎದುರುಗೊಳ್ಳಬಹುದಾದ ದುರಂತವನ್ನು ಅವರು ಊಹಿಸಿಕೊಳ್ಳಲಾರರು. ಅಭಿವೃದ್ಧಿ ಎಂದರೆ ರಸ್ತೆ, ರೈಲುಮಾರ್ಗ, ಅಣೆಕಟ್ಟೆ, ವಿದ್ಯುದುತ್ಪಾದನೆ, ಕೈಗಾರಿಕೆ, ರೆಸಾರ್ಟ್ ಇತ್ಯಾದಿಗಳೆಂಬುದು ಅವರ ಲೆಕ್ಕಾಚಾರ. ನೈಸರ್ಗಿಕ ಕಾಡಿಗೂ, ಕಾಫಿ, ಚಹ, ರಬ್ಬರ್ ತೋಟಗಳಿಗೂ ಇರುವ ವ್ಯತ್ಯಾಸವೇ ಅವರಿಗೆ ತಿಳಿದಿಲ್ಲ. ವಿಶ್ವಸಂಸ್ಥೆಯ ಶೈಕ್ಷಣಿಕ-ಸಾಮಾಜಿಕ-ಸಾಂಸ್ಕೃತಿಕ ಸಂಸ್ಥೆ(ಯುನೆಸ್ಕೋ) ಪಶ್ಚಿಮಘಟ್ಟಗಳನ್ನು ವಿಶ್ವಪರಂಪರೆಯ ಪಟ್ಟಿಗೆ ಸೇರಿಸಿದ ಸಂದರ್ಭದಲ್ಲಿಯೂ ನಮ್ಮ ರಾಜಕೀಯ ಧುರೀಣರು ಕಾಡುಗಳ್ಳರಂತೆಯೇ ವರ್ತಿಸಿದರು. ಇತರ ರಾಜ್ಯಗಳಿಗಿಂತ ವಿಶಿಷ್ಟವಾದ ಶೇಕಡಾ ೪೦ರಷ್ಟು ಕಾಡು ಕರ್ನಾಟಕದಲ್ಲಿದೆ. ಇದರಲ್ಲಿ ವಿಶ್ವಪಾರಂಪರಿಕ ತಾಣಗಳೂ ಸೇರಿವೆ ಎಂಬುದರ ಪ್ರಾಮುಖ್ಯತೆಯೇ ಇವರ ಗಮನಕ್ಕೆ ಬಾರದಿರುವುದು ನಮ್ಮ ದುರಂತ.

ಎಲ್ಲಾ ಪಟ್ಟಭದ್ರ ಶಕ್ತಿಗಳು ಒಗ್ಗಟ್ಟಾಗಿ ಗಾಡ್ಗೀಳ್ ವರದಿಯನ್ನು ವಿರೋಧಿಸಿದವು. ಇದರ ಪರಿಣಾಮವಾಗಿ ಬಾಹ್ಯಾಕಾಶ ವಿಜ್ಞಾನಿ ಡಾ. ಕಸ್ತೂರಿರಂಗನ್ ನೇತೃತ್ವದಲ್ಲಿ ಮತ್ತೊಂದು ಉನ್ನತ ಹಂತದ ಸಮಿತಿಯನ್ನು ಕೇಂದ್ರ ಸರ್ಕಾರ ದಿನಾಂಕ ೧೭-೦೮-೨೦೧೨ರಂದು ನೇಮಿಸಿತು. ಆದರೆ ಇತ್ತೀಚೆಗೆ ಪ್ರಕಟವಾದ ಕಸ್ತೂರಿರಂಗನ್ ವರದಿಯಲ್ಲಿ ಗಾಡ್ಗೀಳ್ ವರದಿಯ ಶಿಫಾರಸ್ಸುಗಳು ಸಂಪೂರ್ಣ ಮರೆಯಾಗಿ ಪರಿಸರವಾದಿಗಳನ್ನು ಬೆಚ್ಚಿಬೀಳಿಸಿತು. ಕಸ್ತೂರಿ ರಂಗನ್ ವರದಿಯಲ್ಲಿ ಪಶ್ಚಿಮಘಟ್ಟದ ಶೇಕಡಾ ೫೮.೪೪ರಷ್ಟು ಪ್ರದೇಶದಲ್ಲಿ ಸಾಂಸ್ಕೃತಿಕ ಭೂ ದೃಶ್ಯಾವಳಿಯನ್ನು ಗುರುತಿಸಿ ಎಚ್ಚರಗೇಡಿ ಅಭಿವೃದ್ಧಿಗೆ ಯಾವುದೇ ನಿಯಂತ್ರಣವಿಲ್ಲದೇ ಮುಕ್ತ ಅವಕಾಶ ಕಲ್ಪಿಸಿದ್ದು ದೊಡ್ಡ ದುರಂತದ ಸಂಗತಿ. ಹಾಗೆಯೇ ಜೀವಿ ಪರಿಸರ ಸಂರಕ್ಷಣೆಯ ಹೊಣೆ ರಾಜಕೀಯ ನೇತೃತ್ವದ ಸಮಿತಿಯ ಹೆಗಲಿಗೇರಿದ್ದು ಮತ್ತೊಂದು ವಿಷಾದದ ಸಂಗತಿ. ಆದರೂ ಈ ವರದಿಯೂ ನಮ್ಮ ರಾಜಕಾರಣಿಗಳಿಗೆ ಬೇಡವಾಗಿದೆ. ಇದು ಪ್ರಜಾಪ್ರಭುತ್ವದ ಅಣಕದ ಮತ್ತೊಂದು ಮಾದರಿಯೇ ಆಗಿದೆ.

ನಾವಿಂದು ಮಿತಿಯಿಲ್ಲದ ಭೋಗದ ಬದುಕಿನಲ್ಲಿ ಸಿಲುಕಿ ಹೋಗಿದ್ದೇವೆ. ಇದರ ಪರಿಣಾಮವಾದ ಕುರುಡಿನಿಂದಾಗಿ, ನಮ್ಮ ಹಿರಿಯರು ಅರಿತುಕೊಂಡು ಬಾಳಿದ್ದ ಮಣ್ಣು, ನೀರು, ಜೀವ ವೈವಿಧ್ಯತೆ ಮತ್ತು ಜೀವಿ ಪರಿಸರಗಳ ನಡುವಿರುವ ಅವಿನಾಭಾವ ಸಾವಯವ ಸಂಬಂಧಗಳನ್ನು ಕತ್ತರಿಸಿ ಹಾಕತೊಡಗಿದ್ದೇವೆ. ಈಗಾಗಲೇ ಸಾಕಷ್ಟು ಘಾಸಿಗೊಂಡಿರುವ ಸೃಷ್ಟಿಯ ಸಂಕೀರ್ಣ ಜಾಲದ ಸಾವಯವ ಸೂಕ್ಷ್ಮ ಸಂಬಂಧಗಳನ್ನು ನಾವಿಂದು ಅತ್ಯಂತ ಸೂಕ್ತ ಭೂ ಬಳಕೆ ಹಾಗೂ ಭೂ ಹೊದಿಕೆಗಳ ಪುನರ್ ವಿನ್ಯಾಸದಿಂದ ಪುನರುಜ್ಜೀವನಗೊಳಿಸಿ ಮರುಸ್ಥಾಪಿಸಬೇಕಿದೆ. ಈಗಾಗಲೇ ತುಂಬಾ ತಡವಾಗಿದೆ ಎಂದು ಏನೂ ಮಾಡದಿರುವುದಕ್ಕಿಂತ ತಡವಾಗಿಯಾದರೂ ಆರಂಭಿಸಬೇಕಿದೆ. ಪ್ರಕೃತಿಯು ಮನುಷ್ಯನ ಆಸೆಗಳನ್ನು ಪೂರೈಸಬಲ್ಲದು, ಆದರೆ ದುರಾಸೆಗಳನ್ನಲ್ಲ ಎಂಬ ಗಾಂಧೀಜಿಯವರ ಮಾತುಗಳನ್ನು ಅರ್ಥಮಾಡಿಕೊಳ್ಳಬೇಕಿದೆ. ಹಾಗಾಗಿ ನಾವೀಗ ಪರಿಸರ ತಜ್ಞರ ವರದಿಗಳ ಬಗ್ಗೆ ಸಾಮೂಹಿಕ ದನಿ ಎತ್ತಬೇಕಿದೆ.



**(ವೃತ್ತಿಯಿಂದ ಅಧ್ಯಾಪಕರಾಗಿದ್ದ ಲೇಖಕ ಡಾ. ಶೇಖರ್ ಗೌಳೇರ್, ಸಕ್ರಿಯ ಪರಿಸರವಾದಿ ಮತ್ತು ಚಾರಣಿಗರು. ಸದ್ಯ ರಾಜ್ಯ ವಿಜ್ಞಾನ ಪರಿಷತ್ತಿನ ಪದಾಧಿಕಾರಿ ಮತ್ತು 'ಬಾಲವಿಜ್ಞಾನ' ಪತ್ರಿಕೆಯ ಸಂಪಾದಕರು)**

ಯುವ ಸಮಾಜವಾದಿ ಚಿಂತನ ವೇದಿಕೆ

# ಮೋದಿಯವರ 'ಸ್ಮಾರ್ಟ್' ನಗರಗಳೆಂಬ ದುಃಸ್ವಪ್ನಗಳು...

- ಡಾ. ಸುಶಿ ಕಾಡನಕುಪ್ಪೆ

ಪ್ರಿಯ ಓದುಗರೇ,

ಈ ಸಂಚಿಕೆಯಿಂದ ನಮ್ಮ ಯುವ ಓದುಗರಿಗೆಂದೇ ಒಂದು ಚಿಂತನಾ ವೇದಿಕೆಯನ್ನು ಆರಂಭಿಸುತ್ತಿದ್ದೇವೆ. ನಮ್ಮ ಎಳೆಯರು ಇವೊತ್ತು ತಮ್ಮನ್ನು ಚಿಂತೆಗೀಡುಮಾಡುತ್ತಿರುವ, ತಮ್ಮಲ್ಲಿ ದ್ವಂದ್ವಗಳನ್ನು ಹುಟ್ಟಿಸುತ್ತಿರುವ ಯಾವುದೇ ಸಮಕಾಲೀನ ವಿದ್ಯಮಾನದ ಬಗ್ಗೆ ತಮ್ಮ ಎಳೆ ಬರಹಗಳನ್ನು ಕಳಿಸಬಹುದು. ಇವುಗಳಲ್ಲಿ ನಿಮ್ಮ ತೊದಲು ಭಾಷೆಯಲ್ಲೇ ನಿಮ್ಮ ಪ್ರಶ್ನೆಗಳನ್ನು ಮುಂದಿಡಬಹುದು; ಚರ್ಚೆಗಳನ್ನು ಆಹ್ವಾನಿಸಬಹುದು. ಆದರೆ ಬರಹಗಳ ಮಿತಿ ೫೦೦ ಶಬ್ದಗಳು. ಜೊತೆಗೆ ನಿಮ್ಮ ಒಂದು ಭಾವ ಚಿತ್ರವನ್ನು ಕಳಿಸಲು ಮರೆಯಬೇಡಿ. ದಯವಿಟ್ಟು ನಿಮ್ಮ ಬರಹಗಳನ್ನು 'ನುಡಿ'ಯಲ್ಲಿ ಸಂಯೋಜಿಸಿ ಮೇಲ್ ಮಾಡಿರಿ.

ಈ ವೇದಿಕೆಯ ಮೊದಲ ಪ್ರಸ್ತುತಿಯಾಗಿ ಪ್ರಕಟವಾಗುತ್ತಿರುವ ಈ ಬರಹದಲ್ಲಿ ಡಾ. ಸುಶಿ ಕಾಡನಕುಪ್ಪೆ ಮೋದಿ ಸರ್ಕಾರ ಮುಂಗಡಪತ್ರದ



ಮೂಲಕ ತನ್ನ 'ಅಭಿವೃದ್ಧಿ' ಪರಿಕಲ್ಪನೆಯ ಒಂದು ಮಾದರಿಯಾಗಿ ೭೦೬೦ ಕೋಟಿ ರೂ.ಗಳ ಮಂಜೂರಾತಿಯೊಂದಿಗೆ ಪ್ರಕಟಿಸಿರುವ ನೂರು 'ಸ್ಮಾರ್ಟ್' ನಗರಗಳ ನಿರ್ಮಾಣದ ಸಾಧಕ-ಬಾಧಕಗಳನ್ನು ಚರ್ಚೆ ಮಾಡಿದ್ದಾರೆ. ಡಾ. ಸುಶಿ ಬೆಂಗಳೂರಿನ ಒಕ್ಕಲಿಗರ ಸಂಘದ ಡೆಂಟಲ್ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿದ್ದಾರೆ.-ಸಂ.

ಈಗ ಅಧಿಕಾರಕ್ಕೆ ಬಂದಿರುವ ಬಿಜೆಪಿಯ ಪಕ್ಷದ ಪ್ರಣಾಳಿಕೆಯಲ್ಲಿರುವ ಒಂದು ಭರವಸೆ ನನ್ನ ಗಮನ ಸೆಳೆಯಿತು. ಅದೆಂದರೆ 'ಅಭಿವೃದ್ಧಿ' ಎಂಬ ಮಹಾ ಕಾರ್ಯಕ್ರಮದ ಒಂದು ಮುಖ್ಯ ಅಂಶವಾಗಿ ಹೊಸ ನೂರು 'ಸ್ಮಾರ್ಟ್' ನಗರಗಳ ನಿರ್ಮಾಣಗಳ ಬಗ್ಗೆ ಆಡುತ್ತಿರುವ ಮಾತುಗಳನ್ನು ಗಮನಿಸಿದರೆ ಇವನ್ನು ನಾವು ಕನ್ನಡದಲ್ಲಿ 'ಡಿಕಾವ್' ನಗರಗಳೆಂದು ಕರೆಯಬಹುದೇನೋ! ಎಲ್ಲಾ ಆಧುನಿಕ ಸೌಲಭ್ಯಗಳನ್ನು ಒಳಗೊಂಡಂತೆ ಇರುವ ಈ ನಗರಗಳನ್ನು ಜನವಸತಿಯ ಮಾದರಿ ವ್ಯವಸ್ಥೆಗಳಾಗಿ ಮಾಡುವ ಎಲ್ಲಾ ಭರವಸೆಗಳನ್ನು ಪಕ್ಷದ ಪ್ರಣಾಳಿಕೆ ಕೊಟ್ಟಿದೆ. ನಗರಾಭಿವೃದ್ಧಿಗೆ ಒತ್ತು ಕೊಡಲೇಬೇಕಾದ ಅನಿವಾರ್ಯತೆಯ ಬಗ್ಗೆಯೂ ಪ್ರಣಾಳಿಕೆ ಹೆಚ್ಚು ಕಾಳಜಿ ತೋರಿಸಿದೆ. ನಗರಗಳನ್ನು ತೀವ್ರವಾಗಿ ಕಾಡುವ ತ್ಯಾಜ್ಯ ವಿಲೇವಾರಿ ಮತ್ತು ನೀರಿನ ಸಮಸ್ಯೆಗಳನ್ನು ಈ ಮಾದರಿ ನಗರಗಳು ನಿವಾರಿಸುವ ಎಲ್ಲಾ ಮಾರ್ಗಗಳನ್ನು ಅನುಸರಿಸುವ ಮತ್ತು ನಗರಗಳಲ್ಲಿ ಸುಗಮವಾಗಿ ಜೀವನ ಸಾಗಿಸಲು ಬೇಕಾಗುವ ಸೌಲಭ್ಯಗಳನ್ನು ಹೊಂದಿರುವ 'ನಕಾಶೆ'ಯನ್ನು ಸಿದ್ಧಪಡಿಸುವ ಭರವಸೆಯನ್ನು ಇದು ಒಳಗೊಂಡಿದೆ. ನಗರಗಳಲ್ಲಿ ವಾಸಿಸುವ ಜನರು ಬೇಸತ್ತು ಹೋಗಿರುವ ಕೆಟ್ಟ ರಸ್ತೆಗಳು ಮತ್ತು ಮಲಿನ ವಾತಾವರಣಕ್ಕೂ ಈ ಮಾದರಿ ನಗರಗಳು ಪರಿಹಾರ ಒದಗಿಸುವ ಗುರಿ ಹೊಂದಿವೆ. ಇದರ ಅಂಗವಾಗಿ ನಗರಗಳಲ್ಲಿ ಸಂಚಾರ ವ್ಯವಸ್ಥೆಯನ್ನು ಹೆಚ್ಚು ಸುಗಮವಾಗಿಯೂ, ಸಂಪೂರ್ಣವಾಗಿಯೂ ದೊರಕಿಸುವ ಮತ್ತು ಅತಿಮುಖ್ಯವಾಗಿ ನಗರಗಳಲ್ಲಿ ಬದುಕಲು ಒಳ್ಳೆಯ ಬಡಾವಣೆಗಳ ವ್ಯವಸ್ಥೆಯನ್ನು ಕಲ್ಪಿಸುವ ಭರವಸೆಯಿದೆ. ಭಾರತ ದೇಶವನ್ನು ಪ್ರಪಂಚದಲ್ಲಿ ಒಂದು ಮಹಾನ್ ಶಕ್ತಿಯನ್ನಾಗಿ ಮಾರ್ಪಡಿಸಲು ನಗರಾಭಿವೃದ್ಧಿಯೂ ಒಂದು ಅತಿಮುಖ್ಯ ಕ್ರಮವಾಗಿ ಪರಿಗಣಿಸುವುದಾಗಿ ಹೇಳಿರುವುದು ನಮ್ಮ ಹೊಸ ಟೆಕ್ಕಿ ಜನಾಂಗಕ್ಕೆ ಆಶಾದಾಯಕವಾಗಿ ತೋರುವುದರಲ್ಲಿ ಯಾವ ಸಂಶಯವೂ ಇಲ್ಲ.

ಈ ಹೊಸ ನೂರು 'ಡಿಕಾವ್' ನಗರಗಳಿಗೆ ದೇಶಾದ್ಯಂತ ಜಾಗ ಗುರುತಿಸಿ ಅವುಗಳ ನಿರ್ಮಾಣಕ್ಕೆ ಚಾಲನೆ ನೀಡಲಾಗುವುದಾದರೆ, ಈ ನಗರಗಳ ಸೃಷ್ಟಿಗೆ ಬಂಡವಾಳ ತರಬೇಕಾಗುತ್ತದೆ. ಬಂಡವಾಳಶಾಹಿಗಳು ನಗರಾಭಿವೃದ್ಧಿಗೆ ಹಣ ಹೂಡುವಾಗ ಅವರು ಇದು ದೇಶದ ಅಭಿವೃದ್ಧಿಯ ಕೆಲಸ ಎಂದು ಲಾಭದಾಯಕವಾದ ಅವಕಾಶಗಳನ್ನೇನು ಕೈಬಿಡುವುದಿಲ್ಲ. ಇಡೀ ಒಂದು ನಗರದ ಸೃಷ್ಟಿಗೆ ವಾಸಮಾಡಲು ಕೇವಲ ಮನೆಗಳಷ್ಟೇ



ಚೀನಾದಲ್ಲಿನ ಒಂದು ಪ್ರೇತ ನಗರ

ಅಲ್ಲದೆ, ಬಡಾವಣೆಗಳು ಮತ್ತು ಅವಕ್ಕೆ ನೀರಿನ ವ್ಯವಸ್ಥೆ, ರಸ್ತೆಗಳು, ಸಂಚಾರ ವ್ಯವಸ್ಥೆ, ವಿದ್ಯುತ್, ಶಾಲಾ ಕಾಲೇಜುಗಳು, ಆಸ್ಪತ್ರೆಗಳು, ಹೋಟೆಲ್‌ಗಳು, ಶಾಪಿಂಗ್ ಮಾಲ್‌ಗಳು ಮತ್ತೂ ಹಲವಾರು ಆಧುನಿಕ ಸವಲತ್ತುಗಳನ್ನು ಒಳಗೊಂಡಂತೆ ಒಂದು ಮಾದರಿ ನಗರ ವ್ಯವಸ್ಥೆ ಸೃಷ್ಟಿಯಾಗಬೇಕು. ಈ ಹಿನ್ನೆಲೆಯಲ್ಲಿ ಚೀನಾ ದೇಶದಲ್ಲಿ ಸುಮಾರು ಹತ್ತು ವರ್ಷಗಳಿಂದೀಚೆಗೆ ನಡೆಯುತ್ತಿರುವ ಇಂತಹುದೇ 'ಅಭಿವೃದ್ಧಿ'ಯ ವಿದ್ಯಮಾನವನ್ನು ಗಮನಿಸಬೇಕಾಗಿದೆ. ಚೀನಾ ದೇಶದಲ್ಲಿ ಹೊಸದಾಗಿ ಸೃಷ್ಟಿಸಲಾದ ಅದೆಷ್ಟೋ ನಗರಗಳು ಎಲ್ಲಾ ಆಧುನಿಕ ಸವಲತ್ತುಗಳನ್ನು ಹೊಂದಿದ್ದರೂ ಇಂದು ಯಾರೂ ವಾಸಿಸಲು ಇಷ್ಟಪಡದ ಖಾಲಿ ನಗರಗಳಾಗಿವೆ. ಮನೆಗಳು ಮತ್ತು ಅಪಾರ್ಟ್‌ಮೆಂಟುಗಳು, ಖಾಲಿ ರಸ್ತೆಗಳು, ಖಾಲಿಯಾಗಿ ಧೂಳು ಹೊಡೆಯುತ್ತಿರುವ ಶಾಪಿಂಗ್‌ಮಾಲ್‌ಗಳು, ಎಕರೆಗಟ್ಟಲೆ ವಿಸ್ತಾರವಾದ ಬಡಾವಣೆಗಳು ಒಂದು ರೀತಿ ಭಯ ಹುಟ್ಟಿಸುವ ರೀತಿ ಪಾಳುಬಿದ್ದಿವೆ. ಈ ನಗರಗಳಿಗೆ ಪ್ರವಾಸಿಗರು ಕುತೂಹಲಕ್ಕಾಗಿ ಭೇಟಿಕೊಡುವುದು ಉಂಟು. ಈ ಪಾಳು ಬಿದ್ದ ನಗರಗಳು ನವ ನಾಗರೀಕತೆಯ ಪಳೆಯುಳಿಕೆಗಳಂತೆ ಕಲಾವಿದರನ್ನು ಆಕರ್ಷಿಸುವುದುಂಟು. ಕೆಲವು ಪಾಳುಬಿದ್ದ ನಗರಗಳು ಎಷ್ಟು 'ಡಿಕಾವ್' ಆಗಿವೆಯೆಂದರೆ ಅಲ್ಲಿಗೆ ಹೊಸದಾಗಿ ಮದುವೆಯಾದ ಜೋಡಿ ಈ ನಗರಗಳ ಅತಿಸುಂದರ ರಸ್ತೆ ಮತ್ತು ಕಟ್ಟಡಗಳ ನಡುವೆ ವಿವಿಧ ಭಂಗಿಗಳಲ್ಲಿ ನಿಂತು ಚಿತ್ರ ತೆಗಿಸಿಕೊಳ್ಳುವುದು ಸಾಮಾನ್ಯವಾಗಿದೆ. ಇದಿಷ್ಟು ಬಿಟ್ಟರೆ ಇಲ್ಲಿ ಬೇರೆ ಚಟುವಟಿಕೆ ಇಲ್ಲ! ಜನ ವಾಸವಿಲ್ಲ. ಈ ನಗರಗಳು ತಮ್ಮ ವಿಸ್ತಾರವಾದ ಸುಂದರವಾಗಿ ಕಟ್ಟಲ್ಪಟ್ಟಿರುವ ಕಟ್ಟಡಗಳ ಮಧ್ಯೆ ಜೀವದ ಸ್ಪರ್ಶವಿಲ್ಲದೆ ಹಾಗೇ ಕೊಳೆಯುತ್ತಿವೆ. ಇಂತಹ ನಗರಗಳನ್ನು ಈಗ 'ಪ್ರೇತ ನಗರಿ'(ಗೋಸ್ಟ್ ಸಿಟೀಸ್) ಎಂದು ಕರೆಯುತ್ತಾರೆ. ಇದು ಚೀನಾದಲ್ಲಿ ಮಾತ್ರ ಕಾಣುವ ಸಂಗತಿಯೇನಲ್ಲ, ಪ್ರಪಂಚದ ಹಲವು ಕಡೆ (ಉದಾಹರಣೆಗೆ-ಬ್ರಿಟನ್, ಯೂರೋಪ್, ಅಮೇರಿಕಾ, ಇತ್ಯಾದಿಗಳ ಕಡೆ) ನಾವು ನೋಡಬಹುದು.

ಪಾಳುಬಿದ್ದಿರುವ ಇಂತಹ ವಿಶಾಲವಾದ 'ಪ್ರೇತ ನಗರಿ'ಗಳಿಗೆ ಹಲವಾರು ಕಾರಣಗಳನ್ನು ತಜ್ಞರು ಕೊಟ್ಟಿದ್ದಾರೆ. ಅದರಲ್ಲಿ ಬಂಡವಾಳಶಾಹಿ ವ್ಯವಸ್ಥೆಯನ್ನು ಪುಷ್ಟೀಕರಿಸಲು ನಗರಾಭಿವೃದ್ಧಿಯನ್ನು ಪೋಷಿಸುವುದು ಒಂದು. ಅಭಿವೃದ್ಧಿ ಹೆಸರಿನಲ್ಲಿ ಸಾವಿರಾರು ಕೋಟಿ ರುಪಾಯಿಗಳ ಬಂಡವಾಳ ಹೂಡುವಿಕೆಯನ್ನು ಪ್ರೋತ್ಸಾಹಿಸುವುದು ದೇಶದ ಆರ್ಥಿಕ ಅಭಿವೃದ್ಧಿಗೆ ಅನಿವಾರ್ಯವೆಂಬುದನ್ನು ಪದೇ ಪದೇ ಒತ್ತಿ ಹೇಳುತ್ತಿರುವ ನಮ್ಮ ರಾಜಕಾರಣಿಗಳನ್ನು ಮತ್ತು ಹಲವಾರು ತಜ್ಞರನ್ನು ನಾವು ನೋಡಬಹುದು. ಉದ್ಯೋಗ ಸೃಷ್ಟಿಗೂ ಇದು ಅನಿವಾರ್ಯವೆಂದು ಕಾಣಿಸುವ ಹಾಗೆ ಮೂಡಿಸಿರುವ ಅಭಿಪ್ರಾಯದ ಅಲೆ ನಮ್ಮನ್ನು ತುಂಬಾ ಆಕರ್ಷಿಸುತ್ತಿದೆ.

ನಗರಾಭಿವೃದ್ಧಿಯಿಂದಾಗಿ ಹಳ್ಳಿಗಾಡುಗಳಿಂದ ಪಟ್ಟಣಗಳಿಗೆ ಮತ್ತು

ದೊಡ್ಡ ನಗರಗಳಿಗೆ ಉದ್ಯೋಗಕ್ಕಾಗಿ ವಲಸೆ ಬರುವುದನ್ನು ನಾವು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗಿಯೇ ಕಾಣುತ್ತಿದ್ದೇವೆ. ಇದು ಅಭಿವೃದ್ಧಿಯ ಲಕ್ಷಣವೆಂದೇ ನಮ್ಮ ಮುಂದೆ ಪ್ರಸ್ತುತಪಡಿಸಲಾಗುತ್ತಿದೆ. ಇದು ಕೇವಲ ನಗರಗಳನ್ನು ಗಮನದಲ್ಲಿರಿಸಿಕೊಂಡು ಕೊಡುವ ಸಮರ್ಥನೆಯೆ ಹೊರತು ತಮ್ಮ ಬಂಡವಾಳ ಹೂಡುವಿಕೆಗೆ ಸಾಧ್ಯವಾಗುವ ಅವಕಾಶಗಳೆಂದು ನಮ್ಮನ್ನು ಆಳುವವರು ಎಂದೂ ಬಹಿರಂಗವಾಗಿ ಹೇಳುವುದಿಲ್ಲವಷ್ಟೆ. ನಗರಗಳಿಗೆ ಹೆಚ್ಚು ಸಂಖ್ಯೆಯಲ್ಲಿ ಬರುತ್ತಿರುವ ವಲಸೆಗಳು ಸೃಷ್ಟಿಸಿರುವ ಸಮಸ್ಯೆಗಳನ್ನು ನಾವು ಪರಿಹರಿಸುವ ಗೋಜಿಗೆ ಹೋಗದೆ, ಪುಂಖಾನುಪುಂಖವಾಗಿ ನಗರೀಕರಣ ಯೋಜನೆಗಳಿಗೆ ಪ್ರೋತ್ಸಾಹ ಕೊಡುತ್ತಿರುವುದು ಎಷ್ಟು ಸರಿ? ಈಗಾಗಲೇ ಇರುವ 'ಅಭಿವೃದ್ಧಿ' ಹೊಂದಿರುವ ನಗರಗಳಲ್ಲಿರುವ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವುದೇ ಒಂದು ದೊಡ್ಡ ಸವಾಲಾಗಿ ನಮ್ಮ ಮುಂದೆ ಇದೆ. ಈಗಿರುವ ಸಮಸ್ಯೆಗಳಲ್ಲಿ ಒಂದಾದ ನೀರು ಪೂರೈಸುವಿಕೆಯನ್ನೇ ತೆಗೆದುಕೊಂಡರೆ, ಬೃಹತ್ ನಗರಗಳಲ್ಲಿ ಮೇಲೆದ್ದಿರುವ ಹಲವಾರು ಬೃಹತ್ ಅಪಾರ್ಟ್‌ಮೆಂಟ್‌ಗಳಿಗೆ ಅಧಿಕೃತ ನೀರಿನ ಪೂರೈಕೆ ಇಲ್ಲದಿದ್ದರೂ, ಅದರಲ್ಲಿ ವಾಸಿಸುವ ಹಣವಂತರಿಗೆ ಮಾತ್ರ ನೀರಿಗೇನು ಬರವಿಲ್ಲ. ನೀರನ್ನು ದುಡ್ಡು ಕೊಟ್ಟು ಕೊಳ್ಳಬಹುದಾದ ಶಕ್ತಿ ಅವರಿಗಿದೆ. ಇಂತಹ ಅಪಾರ್ಟ್‌ಮೆಂಟ್‌ಗಳನ್ನು ಪರಿಸರ ಮಾಲಿನ್ಯದಿಂದ ದೂರವಿರುವ ಮತ್ತು ಹೊರಗಿನ ಸಮಾಜದ ತಂಟೆ ತಕರಾರುಗಳಿಂದ 'ಸುರಕ್ಷಿತ'ವಾಗಿ ಇರಬಯಸುವ ಶ್ರೀಮಂತ ವರ್ಗದವರಿಗೆಂದೇ ಕಟ್ಟಲ್ಪಟ್ಟಿರುವುದರಿಂದ ಹಲವಾರು ನಮೂನೆಗಳಿರುವ ಅಪಾರ್ಟ್‌ಮೆಂಟ್‌ಗಳು ಸಿಗುತ್ತವೆ. ಹಲವಾರು ಬಗೆಯ 'ಸೌಂದರ್ಯ ಲಹರಿ'(ಥೀಮ್)ಗಳೊಂದಿಗೆ ವಿನ್ಯಾಸಗೊಂಡಿರುವ ಈ ಅಪಾರ್ಟ್‌ಮೆಂಟ್ ಸಮೂಹಗಳಲ್ಲಿ ಸುಂದರ ಜಲಪಾತಗಳಿರುವ ಪರಿಸರವನ್ನು ಸೃಷ್ಟಿಸುವುದಕ್ಕಾಗಿಯೇ ನೀರನ್ನು ಯಥೇಚ್ಚವಾಗಿ ಉಪಯೋಗಿಸಲಾಗಿರುತ್ತದೆ.

ಅಭಿವೃದ್ಧಿಯ ಹೆಸರಿನಲ್ಲಿ ಇಂತಹ ಹೊಸ ಹೊಸ ನಗರಿಗಳನ್ನು ಸೃಷ್ಟಿಸುವ ಯೋಜನೆಯಲ್ಲಿ ಯಾವ ವರ್ಗಗಳಿಗೆ ಈ ನಗರಗಳು ಮೀಸಲು ಎಂಬುದು ಇಲ್ಲಿನ ಮುಖ್ಯ ಪ್ರಶ್ನೆಯಾಗುತ್ತದೆ. ಈಗಾಗಲೇ ನಾವು ಪ್ರಪಂಚದ ಹಲವಾರು ದೇಶಗಳಲ್ಲಿ ಕಂಡಿರುವ ಹಾಗೆ ವಾಸಮಾಡಲು ಅವಶ್ಯಕತೆ ಇಲ್ಲದೆ ಬಂಡವಾಳ ಹೂಡಲಿಕ್ಕೆಂದೆ ಮನೆಗಳನ್ನು ಇಂತಹ ನಗರಗಳಲ್ಲಿ ಕೊಂಡು ಈಗ ಎಷ್ಟೊ ಹೊಸ ನಗರಗಳು ಜನರಿಲ್ಲದೇ ಪಾಳುಬಿದ್ದಿವೆ. ನಮ್ಮ ದೇಶದಲ್ಲೂ ನಾವು ಇಂತಹ ಹೊಸ ಹೊಸ ನಗರಗಳನ್ನು ಸೃಷ್ಟಿಸಲು ಯೋಜನೆಗಳನ್ನು ಹಾಕಿದರೆ ತುಂಬಾ ಎಚ್ಚರಿಕೆಯಿಂದ ಎಲ್ಲಾ ಮಗ್ಗುಲುಗಳನ್ನೂ ಪರಿಶೀಲಿಸುವುದು ಅತ್ಯವಶ್ಯಕ. ಆದರೆ ಉದ್ಯೋಗ ಒದಗಿಸಲು ಇಂತಹ ಯೋಜನೆಗಳ ಅವಶ್ಯಕತೆಯಿದೆಯೆಂದು ಆಮಿಷ ತೋರುವ ನಮ್ಮ ಜನಪ್ರತಿನಿಧಿಗಳ ಮತ್ತು ಬಂಡವಾಳಶಾಹಿಗಳ ಮಾತುಗಳನ್ನು ನಾವು ಅನುಮಾನದಿಂದಲೇ ನೋಡಬೇಕಾಗುತ್ತದೆ.

' 'ಡಿಕಾವ್' ನಗರಗಳು ದೃಷ್ಟಿಯಲ್ಲಿಟ್ಟುಕೊಂಡಿರುವುದು ಇಂತಹ ಸಮುದಾಯಗಳನ್ನೇ ಅಲ್ಲವೇ? ಈಗ ಇಂತಹ ನಗರಗಳಲ್ಲಿ ವಾಸಿಸಬಯಸುವ ಸಮುದಾಯಗಳು ಹೆಚ್ಚು ಸಂಖ್ಯೆಯಲ್ಲಿ ನಮ್ಮ ದೇಶದಲ್ಲೂ ಬೆಳೆಯುತ್ತಿರುವ ಕುರುಹುಗಳನ್ನು ಗಮನಿಸಿದಾಗ ಅದು ಸೃಷ್ಟಿ ಮಾಡುವ ಸಾಮಾಜಿಕ ಅಪಾಯಗಳ ಬಗ್ಗೆ ನಾವು ಚಿಂತಿಸಬೇಕಾದ ಅವಶ್ಯಕತೆಯಿದೆಯಲ್ಲವೇ? ಇಂತಹ ಸಮುದಾಯಗಳ ಗುಚ್ಛಗಳನ್ನು ಸಾಕಲು ಬೇಕಾಗುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಎಲ್ಲಿಂದ ತಂದೊದಗಿಸುವುದು? ನೈಸರ್ಗಿಕ ಸಂಪನ್ಮೂಲಗಳ ಬಳಕೆ ಇಲ್ಲಿ ಅವಶ್ಯಕತೆಗಿಂತ ನೂರು ಪಟ್ಟು ಹೆಚ್ಚು ಉಪಯೋಗಿಸಲ್ಪಡುತ್ತದೆ. ಇಲ್ಲಿ ಸ್ಪರ್ಧಾತ್ಮಕ ಶ್ರೀಮಂತಿಕೆ ಮತ್ತು 'ಸ್ಥಾನಮಾನ' (ಲಕ್ಷುರಿ ಮತ್ತು ಸ್ಟೇಟಸ್) ಮಾತ್ರ ಪ್ರಮುಖವೆನಿಸುತ್ತವೆ. ಹೀಗಿರುವಾಗ ಇಲ್ಲಿ ಸಂಪನ್ಮೂಲಗಳ ದುರ್ಬಳಕೆಯ ಬಗ್ಗೆ ತಲೆಕೆಡಿಸಿಕೊಳ್ಳದ ಮನೋಭಾವ ತುಂಬಾ ಸಹಜವಾಗಿಯೇ ಇರುತ್ತದೆ . ಆಗ ಹಣವೊಂದಿದ್ದರೆ ಏನನ್ನು ಬೇಕಾದರೂ ಕೊಂಡುಕೊಳ್ಳುವ ತಾಕತ್ತನ್ನು ನಮ್ಮ ಸರ್ಕಾರ ಮತ್ತು ಸಮಾಜ ಸೃಷ್ಟಿ ಮಾಡಿಕೊಡುವ ಹಾದಿಯಲ್ಲಿ ಮುಂದುವರಿದರೆ ಶ್ರೇಣೀಕೃತ ಸಮಾಜದ ಈಗಾಗಲೇ ಇರುವ ಹಲವು ಮುಖಗಳ ನಡುವೆ ಹೊಸ ಮುಖವೊಂದು ನಮಗೆ ನಿಧಾನವಾಗಿ ಕಾಣಿಸಿಕೊಳ್ಳತೊಡಗುತ್ತದೆ. ಹಾಗಾಗಿ ಹೊಚ್ಚ ಹೊಸ ನೂರು 'ಡಿಕಾವ್' ನಗರಗಳ ಸೃಷ್ಟಿಯಂತಹ ಅತಿ ಆಕರ್ಷಕ ಭರವಸೆಗಳು ನಾವು ಯಾವ ಉದ್ದೇಶಗಳ ತಳಹದಿಯ ಮೇಲೆ ನಿಂತಿದೆ ಎಂಬುದನ್ನು ಅರಿಯುವ ಪ್ರಯತ್ನ ಮಾಡಲೇಬೇಕು. ಇಲ್ಲದಿದ್ದರೆ ಬಂಡವಾಳಶಾಹಿಗಳ ಅಂತ್ಯವಿಲ್ಲದ ದುರಾಸೆಗೆ ಸಮಾಜವನ್ನು ಬಲಿಕೊಡುವ ದುಷ್ಟ ಸಾಹಸಕ್ಕೆ ಕೈ ಹಾಕಿದಂತೆಯೆ ಸರಿ.

ಈಗೀಗ ಟೆಕ್ನಾಲಜಿಯನ್ನು ಹಳ್ಳಿಗಳಲ್ಲೂ ತರುವ ನಮ್ಮ ಜನಪ್ರತಿನಿಧಿಗಳ ಭರವಸೆಗಳು, ಮೂಲಭೂತ ಸೌಕರ್ಯಗಳೂ ಇಲ್ಲದನಮ್ಮ ಎಷ್ಟೋ ಹಳ್ಳಿಗಳನ್ನು ನೋಡಿದರೆ ಹಾಸ್ಯಾಸ್ಪದವೆನ್ನಿಸುತ್ತದೆ. ಮೂಲಭೂತ ಸೌಕರ್ಯಗಳನ್ನು ಟೆಕ್ನಾಲಜಿಯಿಂದಲೇ ತರಲು ಸುಲಭ ಸಾಧ್ಯವೆಂದು ಹೇಳುವುದನ್ನು ಅವರಾರೂ ಮರೆಯುವುದಿಲ್ಲ . ಬರೀ ನಕಾಶೆಗಳಲ್ಲದೆ ನಗರ ಗ್ರಾಮೀಣ ಪ್ರದೇಶಗಳೆರಡನ್ನೂ ಒಳಗೊಂಡಂತೆ ಸಮಾನವಾದ ಅಭಿವೃದ್ಧಿಯ ಕಾರ್ಯಗಳನ್ನು ಮಾಡುವ ಸರ್ಕಾರಗಳನ್ನು ನಾವು ಇನ್ನೂ ಕಲ್ಪಿಸಿಕೊಳ್ಳುವ ಸ್ಥಿತಿಯಲ್ಲೇ ಇದ್ದೇವೆ. ಪ್ರಪಂಚದ ಹಲವಾರು ದೇಶಗಳಲ್ಲಿ ಅಭಿವೃದ್ಧಿ ಹೆಸರಿನಲ್ಲಿ ವ್ಯಯವಾಗಿರುವ ಹಣ ಮತ್ತು ಅದರಿಂದ ನೆನೆಗುದಿಗೆ ಬಿದ್ದಿರುವ ಹಲವಾರು ಯೋಜನೆಗಳಿಂದ ನಾವು ಪಾಠ ಕಲಿಯುವುದಿದೆ. ಈಗಿರುವ ದೇಶದ ಸ್ಥಿತಿಗೆ ಕಾರಣಗಳನ್ನು ಹುಡುಕುವ ಪ್ರಾಮಾಣಿಕ ಪ್ರಯತ್ನವೇ ಈಗ 'ಅಭಿವೃದ್ಧಿ'ಯ ಪರಿಕಲ್ಪನೆಯನ್ನು ಅರ್ಥ ಮಾಡಿಕೊಳ್ಳುವ ನಮ್ಮ ಮೊದಲನೆ ಹೆಜ್ಜೆಯಾಗಬೇಕು. *

## ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ(ರಿ), ಶಿವಮೊಗ್ಗ

### ಅಧ್ಯಯನ ಶಿಬಿರ-2014

### ವಿಷಯ : ಆಧುನಿಕತೆಯೊಂದಿಗೆ ಮುಖಾಮುಖಿ

ಪ್ರತಿ ವರ್ಷದಂತೆ ಈ ವರ್ಷವೂ ನಮ್ಮ ಪ್ರತಿಷ್ಠಾನವು ಕುಪ್ಪಳ್ಳಿಯಲ್ಲಿ ಇದೇ ಅಕ್ಟೋಬರ್ 18 ಹಾಗೂ 19ರಂದು(ಶನಿವಾರ ಮತ್ತು ಭಾನುವಾರ') ಆಧುನಿಕತೆಯೊಂದಿಗೆ ಮುಖಾಮುಖಿ ಎಂಬ ಎರಡು ದಿನಗಳ ಅಧ್ಯಯಯನ ಶಿಬಿರವೊಂದನ್ನು ಆಯೋಜಿಸುತ್ತಿದೆ. ಈ ಶಿಬಿರದಲ್ಲಿ ಆಧುನಿಕತೆ ಎಂದರೇನು? ಭಾರತದಲ್ಲಿ ಅಳವಡಿಸಿಕೊಳ್ಳಾದ ಆಧುನಿಕತೆಯ ಸಾಧಕ ಬಾಧಕಗಳೇನು? ಇಂದಿನ ಜಾಗತೀಕರಣದ ಪರಿಣಾಮಗಳಿಗೂ ಇದಕ್ಕೂ ಇರುವ ಸಂಬಂಧಗಳೇನು? ಇತ್ಯಾದಿ ಪ್ರಶ್ನೆಗಳನ್ನು ನಾಲ್ಕಾರು ಗೋಷ್ಠಿಗಳಲ್ಲಿ, ವಿವಿಧ ಹಿನ್ನೆಲೆಗಳ ಸಂಪನ್ಮೂಲ ವ್ಯಕ್ತಿಗಳ ಮಾರ್ಗದರ್ಶನದಲ್ಲಿ ಚರ್ಚಿಸಲಾಗುವುದು. ಆಸಕ್ತರು ಶಿಬಿರಕ್ಕೆ ತಮ್ಮ ಹೆಸರನ್ನು ನೋಂದಾಯಿಸಕೊಳ್ಳಬಹುದು. ಪದವಿ ಮತ್ತು ಅದಕ್ಕೂ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಆದ್ಯತೆ ಉಂಟು.

ಶಿಬಿರಾರ್ಥಿಗಳಿಗೆ ಎರಡೂ ದಿನ ಊಟೋಪಹಾರ ಮತ್ತು ಸಾಮೂಹಿಕ ವಸತಿ ಕಲ್ಪಿಸಲಾಗುವುದು. ಸಾರ್ವಜನಿಕರಿಗೆ ಶಿಬಿರ ಶುಲ್ಕ ರೂ. 150/- ವಿದ್ಯಾಥಿಗಳಿಗೆ: ರೂ.100/- ವಸತಿ ಸೌಲಭ್ಯ ಸೀಮಿತವಾಗಿರುವುದರಿಂದ ಆಸಕ್ತರು ಆದಷ್ಟು ಬೇಗ ತಮ್ಮ ಶುಲ್ಕ ಪಾವತಿ ಮಾಡಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬಹುದು.

ಸಂಪರ್ಕ ದೂರವಾಣಿ ಸಂಖ್ಯೆಗಳು : **9448238638/ 9535651553/9481351079**

**ಡಿ.ಎಸ್. ನಾಗಭೂಷಣ**

ಅಧ್ಯಕ್ಷರು: ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ

**ಸಮಕಾಲೀನ**

# ಇದು ಲೈಂಗಿಕ ಅತ್ಯಾಚಾರಗಳ ಕಾಲವೇ?



ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕ ಮನಸ್ಸನ್ನು ಆಕ್ರಮಿಸಿಕೊಂಡಿರುವ ಒಂದು ದೊಡ್ಡ ಸುದ್ದಿ ಎಂದರೆ 'ಲೈಂಗಿಕ ಅತ್ಯಾಚಾರ'. ಇದನ್ನು ನಾನು ಬೇಕೆಂದೇ 'ಸುದ್ದಿ' ಎಂದು ಕರೆದಿದ್ದೇನೆ. ಏಕೆಂದರೆ ಒಂದು ಅತ್ಯಾಚಾರದ ಸುದ್ದಿ ಪ್ರಕಟವಾಗುತ್ತಿದ್ದಂತೆ ಅದರ ಹಿಂದೆ ಒಮ್ಮೆಗೇ ಹತ್ತಾರು ಅತ್ಯಾಚಾರಗಳ ಸುದ್ದಿ ಪ್ರಕಟವಾಗುತ್ತಿದ್ದು, ದೇಶದಲ್ಲಿ ನಿಜವಾಗಿಯೂ ಈ ಅತ್ಯಾಚಾರಗಳು ನಮ್ಮ ಮಾಧ್ಯಮಗಳು ಬಿಂಬಿಸುತ್ತಿರುವ ಹಾಗೆ ಹೆಚ್ಚುತ್ತಿವೆಯೇ ಎಂಬ ಸಂದೇಹ ಹಲವರಲ್ಲಿ ಉಂಟಾಗಿದೆ. ಮತ್ತೆ ನಾನು 'ಮಾಧ್ಯಮಗಳು ಬಿಂಬಿಸುತ್ತಿರುವ ಹಾಗೆ' ಅಂದೆ. ಅಂದರೆ, ಈ ಬಿಂಬವನ್ನು ಸೃಷ್ಟಿಸಿರುವ ವಾಸ್ತವವನ್ನು ಪೂರ್ಣವಾಗಿ ಗ್ರಹಿಸಬೇಕಾಗಿದೆ ಎಂದಷ್ಟೇ ನಾನು ಹೇಳುತ್ತಿರುವುದು. ಏಕೆಂದರೆ ಈ ವಿಷಯದಲ್ಲಿ ನಡೆಯುತ್ತಿರುವ ಚರ್ಚೆಗಳಲ್ಲಿ ಅನಗತ್ಯ ಆವೇಶ, ಆವೇಗ ಮತ್ತು ಆಕ್ರಮಣಗಳೇ ಹೆಚ್ಚಾಗಿ ಕಾಣುತ್ತಿದ್ದು ಪರಿಹಾರದ ಮಾರ್ಗಗಳು ದಾರಿ ತಪ್ಪಿದಂತಿವೆ.

ಈ ಸಂಬಂಧವಾಗಿ ಮೊದಲಿಗೇ ನಾವು ಗಮನಿಸಬೇಕಾದ ಇತ್ತೀಚಿನ ಸಂಗತಿಗಳು: ಇತ್ತೀಚಿನ ಉ.ಪ್ರ.ದ ಬದಾಯೂ ಅತ್ಯಾಚಾರಗಳ ಪ್ರಕರಣದಲ್ಲೇ ಭೀಕರವೆನಿಸಿ ಅತ್ಯಾಚಾರಗಳ ಬಗ್ಗೆ ವ್ಯಾಪಕ ಚರ್ಚೆಗೆ ಕಾರಣವಾಗಿದ್ದ ಒಂದೇ ಕುಟುಂಬದ ಮೂವರು ಬಾಲಕಿಯರ ಮೇಲೆ ಅತ್ಯಾಚಾರವೆಸಗಿ ಶವಗಳನ್ನು ಮರಕ್ಕೆ ನೇಣು ಹಾಕಲಾಗಿತ್ತೆಂದು ವರದಿಯಾಗಿದ್ದ ಪ್ರಕರಣದಲ್ಲಿ ಇದೀಗ ವೈದ್ಯಕೀಯ ವರದಿ, ಇದಕ್ಕೆ ಲೈಂಗಿಕತೆಯ ಆಯಾಮವಿದ್ದ ಯಾವ ಸಾಕ್ಷ್ಯಗಳೂ ಇಲ್ಲ ಎಂದು ಹೇಳಿದೆ. ಇನ್ನು ನಮ್ಮ ಬೆಂಗಳೂರು ಶಾಲೆಯಲ್ಲಿ ಮಗುವೊಂದರ ಮೇಲೆ ನಡೆಯಿತೆಂದು ವರದಿಯಾದ ಅತ್ಯಾಚಾರದ ಪ್ರಕರಣದ ಅಪರಾಧ ಮತ್ತು ಅಪರಾಧಿಯ ವಿವರಗಳು ದಿನದಿಂದ ದಿನಕ್ಕೆ ಬದಲಾಗುತ್ತಿವೆ. ಮೊನ್ನೆ ನಮ್ಮ ರಾಜ್ಯದ ಶ್ರೇಷ್ಠ ನ್ಯಾಯಾಲಯ ಅತ್ಯಾಚಾರದ ಪ್ರಕರಣವೊಂದನ್ನು ಪರಸ್ಪರ ಸಮ್ಮತಿಯಲ್ಲಿ ನಡೆದ ಪ್ರಕರಣವೆಂದು ಹೇಳಿ ಅತ್ಯಾಚಾರದ ಆರೋಪವನ್ನು ತಿರಸ್ಕರಿಸಿದೆ.

ಹಾಗಾದರೆ ಅತ್ಯಾಚಾರಗಳ ವಿದ್ಯಮಾನ ಬರೀ ಮಾಧ್ಯಮಗಳ ಸೃಷ್ಟಿಯೇ? ಆದರೆ ಮಾಧ್ಯಮಗಳು ಹೀಗೆ ಒಟ್ಟಾಗಿ ತಂತಾನೇ ಏನನ್ನಾದರೂ ಸೃಷ್ಟಿಸಲಾರವು. ಅವು ಸಂಗತಿಗಳನ್ನು ತಂತಮ್ಮ ಮಾರುಕಟ್ಟೆ ಅಗತ್ಯಗಳಿಗೆ ತಕ್ಕಂತೆ ರೂಪಾಂತರಗೊಳಿಸಬಲ್ಲವಷ್ಟೆ. ಹಾಗಾಗಿ ನಾವಿಂದು ಯೋಚನೆ ಮಾಡಬೇಕಾಗಿರುವುದು ಅತ್ಯಾಚಾರವೆಂಬ ಇವೊತ್ತಿನ ವಿದ್ಯಮಾನದ ಹಿಂದಿರುವ ಒಟ್ಟು ಮಾನಸಿಕತೆಯ ಬಗ್ಗೆ. ಏಕೆಂದರೆ ಅತ್ಯಾಚಾರಗಳು ಅದರ ಅಕ್ಷರಶಃ ಅರ್ಥದಲ್ಲಿ ಎಂದಿನಿಂದಲೂ ನಡೆಯುತ್ತಾ ಬಂದಿವೆ–ವಿವಾಹವೆಂಬುದು ಸಾಂಸ್ಥೀಕರಣಗೊಂಡು, ಅದಕ್ಕೆ 'ಪಾವಿತ್ರ್ಯ'ವೆಂಬುದೊಂದನ್ನು ಪ್ರದಾನ ಮಾಡಿದಾಗಿನಿಂದ. ಈ ಕಟು ವಾಸ್ತವದ ಅರಿವಿನಲ್ಲಿ ನೋಡಿದಾಗ, ಇವೊತ್ತು ಅತ್ಯಾಚಾರಗಳು ಎಂದು ಕರೆಸಿಕೊಳ್ಳುವ ಪ್ರಸಂಗಗಳ ವಿವರಣೆಗಳಲ್ಲಿಯೇ ಅತ್ಯಾಚಾರದ ಹೆಚ್ಚಳದ ಸತ್ಯಾಸತ್ಯತೆಯ ಮರ್ಮವೂ ಅಡಗಿರುವುದನ್ನು ಕಾಣಬಹುದಾಗಿದೆ. ಸಮಾಜವು ಪ್ರಗತಿಯ ಹೆಸರಿನಲ್ಲಿ ಅತ್ಯಾಧುನಿಕಗೊಳ್ಳುತ್ತಿದ್ದಂತೆ, ಹಳೆಯ ಕಟ್ಟುಪಾಡುಗಳು ಬಂಧನಗಳ ಅರ್ಥ ಪಡೆದುಕೊಳ್ಳುತ್ತಿದ್ದಂತೆ, ಪಾವಿತ್ರ್ಯಗಳೆಂಬುವು ಅರ್ಥ–ಹೀನವಾಗಿ ಕಾಣತೊಡಗುತ್ತಿದ್ದಂತೆ, ಇವೆಲ್ಲವುಗಳ ಪರಿಣಾಮವಾಗಿ ಶೀಲ–ಅಶ್ಲೀಲಗಳ ಪರಿಕಲ್ಪನೆ ಕಾಲ–ದೇಶ ಸಾಪೇಕ್ಷತೆಗಳಿಗೆ ಸಿಕ್ಕಿ ಅಪ್ರಸ್ತುತವಾಗತೊಡಗಿದಂತೆ, ಎಲ್ಲ ಸಂಬಂಧಗಳ ಸ್ವರೂಪವೂ ತಮ್ಮ ಆಧ್ಯಾತ್ಮಿಕತೆಯನ್ನು ಕಳೆದುಕೊಂಡು ದೇಹದ ಮಟ್ಟಕ್ಕೆ, ಆನಂತರ ಸಹಜವಾಗಿಯೇ ಬಳಕೆದಾರಿಕೆಯ(**utilitarian**) ಇಳಿಯುತ್ತಿದ್ದಂತೆ, ಮನುಷ್ಯನೊಳಗಿನ ಒಳಗಿನ 'ಸುಖ'ದ ಅಗತ್ಯ ಕೇವಲ ಒಂದು ಭೌತಿಕ ಅಗತ್ಯ ಮಾತ್ರವಾಗಿ, ಅಂದರೆ ಆಧುನಿಕತೆ ಪರಿಭಾಷೆಯಲ್ಲಿ ಹೇಳುವುದಾದರೆ ಒಂದು ಹಕ್ಕಾಗಿ ಅಭಿವ್ಯಕ್ತಗೊಂಡು, ಮನುಷ್ಯ ತನಗೆ ಗೊತ್ತಿಲ್ಲದಂತೆಯೇ (ಪ್ರಜ್ಞಾಪೂರ್ವಕತೆಯನ್ನು ಕಳೆದುಕೊಂಡು–ಅಂದರೆ ಇಂತಹ ಹಕ್ಕಿನ ಉದಯ ಸೃಷ್ಟಿಸುವ ಜವಾಬ್ದಾರಿಯ ಮರೆವು) ಅವನು ಮಾಡುವ ಎಲ್ಲ ಕ್ರಿಯೆಗಳೂ ಅತ್ಯಾಚಾರಗಳ(ಅತಿಯಾದ ಆಚರಣೆ–ಕ್ರಿಯೆ ಎನ್ನುವ ಅರ್ಥದಲ್ಲಿ) ಚಹರೆಗಳನ್ನೇ ಪಡೆದುಕೊಳ್ಳತೊಡಗುತ್ತವೆ. ಆಧುನಿಕ ಕಾಲದ–ನಿರ್ದಿಷ್ಟವಾಗಿ ಹೇಳುವುದಾದರೆ ಜಾಗತೀಕರಣ ಕಾಲದ–ಹೆಮ್ಮೆಯ ಲಕ್ಷಣವಾದ ಮಿತಿ ಇಲ್ಲದ ಬಳಕೆದಾರಿಕೆಯ(ಗ್ರಾಹಕವಾದ) ಒಂದು ರೂಕ್ಷವಾದ ಮುಖವೇ ಈ ಲೈಂಗಿಕ ಅತ್ಯಾಚಾರ. ಇಂತಹ ಸಮಾಜ ಈ ಲಕ್ಷಣಗಳನ್ನು ಪ್ರಕಟಪಡಿಸುವುದೇ ತನ್ನ ಬಲಶಾಲಿ ಅಂಗದ ಮೂಲಕ. ಅಂದರೆ ಇಂದಿನ ಸಂದರ್ಭದಲ್ಲಿ ಗಂಡಿನ ಮೂಲಕ. ಆದರೆ ಇಂತಹ ಸಮಾಜವನ್ನು ನಿರ್ಮಿಸುವ ಕೆಲಸದಲ್ಲಿ ಹೆಣ್ಣೂ ವಿಭಿನ್ನ ಮತ್ತು ಸಕ್ರಿಯ ಪಾತ್ರ ವಹಿಸುವುದರಿಂದ ಅವಳು ಇದಕ್ಕೆ ಗಂಡನ್ನೇ ದೂಷಿಸುವುದು ತನ್ನ ಜವಾಬ್ದಾರಿಯನ್ನು ಮರೆಮಾಚಿಕೊಳ್ಳುವ ಕೆಲಸ ಎನ್ನಿಸಿಕೊಳ್ಳುತ್ತದೆ. ಗಂಡು ಇಲ್ಲಿ ಮೊದಲ ಅಪರಾಧಿಯಾಗಿರಬಹುದು ಅಷ್ಟೆ. ಆದರೆ ಹೆಣ್ಣು ತನ್ನ ಎರಡನೇ ಅಪರಾಧಿ ಸ್ಥಾನವನ್ನು ನಿರಾಕರಿಸಲಾರಳಷ್ಟೆ.

ಹಾಗಾಗಿ ಇಂದಿನ ಅತ್ಯಾಚಾರದ ವಿದ್ಯಮಾನವನ್ನು ಕೇವಲ ಗಂಡು–ಹೆಣ್ಣಿನ ಲೈಂಗಿಕ ಸಂಬಂಧದ ಪ್ರಶ್ನೆಯಾಗಿ ಮಾತ್ರ ನೋಡುವುದು, ಸಮಾಜವಾಗಿ ನಮ್ಮನ್ನು ನಾವೇ ಮೋಸಗೊಳಿಸಿಕೊಳ್ಳುವ ಕೆಲಸವಾಗುತ್ತದೆ. ಇದಕ್ಕೆ ಪರಿಹಾರ ಹುಡುಕುವ ಕೆಲಸದಲ್ಲಿ ಇದು ಕೆಲ ಕುರುಡುಗಳನ್ನು ಮಾತ್ರ ಸೃಷ್ಟಿಸಬಲ್ಲುದು. ಇಂದು ಚರ್ಚಿಸಲಾಗುತ್ತಿರುವ ಕಾನೂನುಗಳನ್ನು ಹೆಚ್ಚಾಗಿ ಹೆಣ್ಣಿನ ಪರ ತಿದ್ದುವುದು, ಗೂಂಡಾ ಕಾಯಿದೆ ಬಳಕೆ, ಎಲ್ಲೆಡೆ ಸಿ.ಸಿ. ಟಿವಿ ಅಳವಡಿಕೆ ಇತ್ಯಾದಿ ಕ್ರಮಗಳೆಲ್ಲ ಹೆಚ್ಚೆಂದರೆ ತತ್ಕಾಲೀನವಾಗಿ ಗಂಡನ್ನು ಬೆದರಿಸಿ ಸಮಾಜಕ್ಕೆ ಮಾರಕವಾಗುವ ಹಾಗೆ ಅವನ ಕಸುವನ್ನು ಕುಗ್ಗಿಸುವ ಕ್ರಮಗಳಾದಾವೇ ಹೊರತು ಪರಿಹಾರವಾಗಲಾರವು. ಇಲ್ಲದಿದ್ದಲ್ಲಿ, ಮೂರು ವರ್ಷಗಳ ಹಸುಳೆಯ ಮೇಲೆ, ಎಂಬತ್ತು ವರ್ಷಗಳ ಮುದುಕಿಯ ಮೇಲೆ ನಡೆಯಲಾರಂಭಿಸಿರುವ 'ಲೈಂಗಿಕ' ಅತ್ಯಾಚಾರಗಳನ್ನು ವಿವರಿಸುವುದಾದರೂ ಹೇಗೆ? ಹಾಗಾಗಿ ಇಂತಹ ಕೇವಲ ಹೆಣ್ಣುಪರವಾದ ತತ್ಕಾಲೀನ ಕ್ರಮಗಳು ಮನುಷ್ಯ ಲೋಕದಲ್ಲಿನ ಗಂಡು–ಹೆಣ್ಣೆಂಬ ಎರಡು ಪ್ರಭೇಧಗಳ ನಡುವಿರುವ ನೈಸರ್ಗಿಕ ಸಂಬಂಧದ ಹದ, ಮಾರ್ದವತೆ ಮತ್ತು ಕಟುಮಧುರವಾದ ಕರ್ಷಣಾನುಭವಗಳಿಗೇ ಧಕ್ಕೆ ತಂದು ಅದರ ಸಮತೋಲನವನ್ನು ಹಾಳುಗೆಡಹಬಲ್ಲುವಷ್ಟೆ. ಇದರ ದೂರಗಾಮಿ ಪರಿಣಾಮ ತುಂಬ ನಿರ್ಣಾಯಕವಾದದ್ದು: ಮನುಷ್ಯ ಲೋಕದ ಸೌಂದರ್ಯಾನುಭವ ಮತ್ತು ಅದರಿಂದ ಹುಟ್ಟುವ ಅವನ/ಳ ಕ್ರಿಯಾಶೀಲತೆಯ ಮೂಲಸೆಲೆಗಳೇ ಬತ್ತಿಹೋಗಿ ಮನುಷ್ಯ ಬದುಕಿನ ಸಾರ್ಥಕತೆಯೇ ಪ್ರಶ್ನಾರ್ಹವಾದೀತು! ಇಂದಿನ ಆರ್ಥಿಕ ಜಾಗತೀಕರಣದ ತಾರ್ಕಿಕ ಅಂತ್ಯದ ಸುಳಿವನ್ನೂ ನಾವು ಇಲ್ಲೇ ಕಾಣಬಹುದೇನೋ.

ಅದೇನೇ ಇರಲಿ, ಇದೂ ಈ ಸಮಸ್ಯೆಯ ಪರಿಹಾರಕ್ಕೆ ಬೇಕಿರುವುದು ಹೆಣ್ಣು–ಗಂಡೆಂಬ ಪರಿಗಣನೆಯಿಲ್ಲದ ಒಂದು ಸಾಮಾಜಿಕ ಪರಿಹಾರ. ಅಂದರೆ ಇಂದಿನ ಅತ್ಯಾಚಾರಗಳ ವಿದ್ಯಮಾನವನ್ನು ಒಂದು ರೋಗ ಲಕ್ಷಣವೆಂದು ಮಾತ್ರ ಗುರುತಿಸಿ ಮೂಲ ರೋಗಕ್ಕೆ ಮದ್ದು ಅರೆಯುವ ಕೆಲಸ ಆರಂಭವಾಗಬೇಕಿದೆ. ಖ್ಯಾತ ಚಿಂತಕಿ ವಂದನಾ ಶಿವ ಅವರು ಇದನ್ನು ಹೆಣ್ಣು–ಗಂಡು ಕೂಡಿ ತಮ್ಮ ಮಿತಿಯಿಲ್ಲದ ಸುಖಕ್ಕಾಗಿ ಭೂಮಿಯ ಮೇಲೆ ನಡೆಸಲಾರಂಭಿಸಿರುವ ಅತ್ಯಾಚಾರ ಎಂದು ವಿಶ್ಲೇಷಿಸಿದ್ದರು. ಬಹುಶಃ ಇದಕ್ಕೆ ಪರಿಹಾರದ ಚಿಂತನೆ ಇಲ್ಲಿಂದಲೇ ಆರಂಭವಾಗಬೇಕೆಂದು ಕಾಣುತ್ತದೆ.

–ಇದು ಒಂದು ನೋಟ ಮಾತ್ರ. ಮುಂದಿನ ಪುಟಗಳಲ್ಲಿ ನಮ್ಮ ಓದುಗರ ಬೇರೆ ಬೇರೆ ನೋಟಗಳಿವೆ. ಇದರಲ್ಲಿ ಎರಡು ಗಂಡು ನೋಟಗಳೂ ಇವೆ. ಇವುಗಳ ನಡುವಣ ಸಾದೃಶ್ಯವನ್ನೂ ಗಮನಿಸಿ. ಬರೆಯಿರಿ.–ಸಂ.

# ಪ್ರಗತಿಯ ರುಚಿಯಲ್ಲಿ ಮನೆ–ಮನಗಳ ಭ್ರಷ್ಟತೆ



**ಈ**ಗ ಎಲ್ಲೆಲ್ಲೂ ಅತ್ಯಾಚಾರದ ಸುದ್ದಿ. ತೊಟ್ಟಿಲ ಕೂಸಿನಿಂದ ಹಿಡಿದು ಮುಪ್ಪಿನ ಮುದುಕಿಯರನ್ನೂ ಬಿಡದಂತೆ ನೆಕ್ಕುತ್ತಿರುವ ಬೆಂಕಿ. ಇದನ್ನೆಲ್ಲಾ ಕೇಳುತ್ತಾ ನೋಡುತ್ತಾ ಇದ್ದರೆ ಜಗತ್ತಿನಲ್ಲಿ ಹೆಣ್ಣು ಗಂಡು, ಹೆಣ್ಣು ದೇಹ, ಗಂಡು ದೇಹ ಎಂಬುದೆಲ್ಲಾ ಮರೆತೇ ಹೋಗಿ ಬರೀ ಲಿಂಗಗಳು ಬದುಕುತ್ತಿವೆಯೇನೋ ಎನ್ನಿಸುತ್ತಿದೆ. ದೇಹಿಗಳಾಗಿ ಅನುಭವಿಸುವ ಕಷ್ಟಗಳನ್ನು ಸ್ತ್ರೀವಾದ ಎತ್ತಿಕೊಂಡ ಹೊತ್ತಲ್ಲೇ ಅತ್ಯಾಚಾರದ ಬಗ್ಗೆ ಒಂದು ತಾತ್ವಿಕ ಪ್ರಶ್ನೆಯೂ ಸಹ ಹುಟ್ಟಿಕೊಂಡಿತು. ದೇಹವನ್ನೆ ಗುರಿಯಾಗಿಟ್ಟುಕೊಂಡು ಮಾಡುವ ಅತ್ಯಾಚಾರವು ಹೆಣ್ಣನ್ನು ಮಾನಸಿಕವಾಗಿಯೂ ಸದೆ ಬಡಿಯಬಲ್ಲ ಆಯುಧ ಎನ್ನಿಸಿ ಅದನ್ನು ಒಂದು ತಂತ್ರವಾಗಿ ಬಳಸುವ ಇರಾದೆಯನ್ನು ಪುರುಷಪ್ರಧಾನ ಸಮಾಜದ ದೃಷ್ಟಿಕೋನಗಳಲ್ಲಿ ಅಡಗಿಕೊಂಡಿರುವುದು ಕಾಣತೊಡಗಿತು. ಯುದ್ಧಗಳಲ್ಲಿ ಹೆಣ್ಣಿನ ಮೇಲಿನ ಅತ್ಯಾಚಾರವು ಪುರುಷ ಅಹಂನ ಒಂದು ಭಾಗವಾಗಿ ಬೆಳೆಯಿತು. ಮಿಲಿಟರಿ ಸಂಸ್ಥೆಗಳಲ್ಲಿಯೂ ಅತ್ಯಾಚಾರವು ಒಪ್ಪಿತವಾದ ಸಂಗತಿಯೇ ಆಗಿದೆ. ಈ ಪುರುಷಾಹಂಕಾರಕ್ಕೆ ಒಂದು ಇತಿಹಾಸವೇ ಇದೆ ಎನ್ನುವುದನ್ನು ಚರಿತ್ರೆ ನಮಗೆ ತೋರಿಸಿಕೊಡುತ್ತಲೇ ಇದೆ. ಆದುದರಿಂದ ಅತ್ಯಾಚಾರ ಎನ್ನುವುದು ಆಧುನಿಕ ಸಮಾಜ ಬೆಚ್ಚಿ ಬೀಳಬಹುದಾದ ಸಂಗತಿಯಾಗಿ ಮಾತ್ರ ಉಳಿಯುವುದಿಲ್ಲ. ಅದೊಂದು ಇತಿಹಾಸದ ಮುಂದುವರಿಕೆ. ಅದಕ್ಕೆ ಕಾಲದೇಶಗಳು ವಿಭಿನ್ನವಾದ ವ್ಯಾಖ್ಯಾನವನ್ನು ಕೊಡುತ್ತಿರುತ್ತವೆ.

ಆಧುನಿಕ ಅಥವಾ ಆಧುನಿಕೋತ್ತರ ಸಮಾಜಗಳಲ್ಲಿ ಅತ್ಯಾಚಾರದ ಬಗ್ಗೆ ಹೆಚ್ಚೇ ಜಾಗೃತಿ ಉಂಟಾಗಿದೆ. ಎಲ್ಲರೂ ಈ ಸಂಗತಿಯನ್ನು ಮುಕ್ತವಾಗಿ ಚರ್ಚಿಸುತ್ತಾರೆ; ಉಪಾಯ ಸೂತ್ರಗಳನ್ನು ಹುಡುಕುತ್ತಾರೆ; ಕಾನೂನಿನ ರಕ್ಷೆ ಒದಗಿಸುವ ಕುರಿತು ಸರ್ಕಾರಗಳು ಚಿಂತಿಸುತ್ತವೆ; ಪ್ರತಿಭಟನೆಗಳು ನಡೆಯುತ್ತವೆ; ಮಾಧ್ಯಮಗಳಲ್ಲಿ ಚರ್ಚೆ ನಡೆಯುತ್ತವೆ. ಆದರೂ ಯಾಕೆ ಭಾನಾಮತಿ ಹಿಡಿದಂತೆ ಒಮ್ಮೆ ಅಲ್ಲಿ ಒಮ್ಮೆ ಇಲ್ಲಿ ಎಂಬಂತೆ ಅತ್ಯಾಚಾರಗಳೇಕೆ ಘಟಿಸುತ್ತಲೇ ಇವೆ?– ಈ ಪ್ರಶ್ನೆಗೆ ತತ್‌ಕ್ಷಣಕ್ಕೆ ಉತ್ತರ ಹೊಳೆದಿದೆಯೆಂದು ನನಗನ್ನಿಸುವುದಿಲ್ಲ. ನಾವೆಲ್ಲರೂ ನಮಗೆ ತಿಳಿದ ಪರಿಹಾರಗಳನ್ನು ಸೂಚಿಸುತ್ತಿದ್ದೇವಷ್ಟೆ? ರೋಗದ ಕಾರಣಗಳನ್ನರಿಯದೆ ಚಿಕಿತ್ಸೆ ಕೊಡಲಾಗುತ್ತದೆ ಎಂದು ಯಾರಾದರೂ ನಂಬಬಹುದೆ? ಅತ್ಯಾಚಾರದ ಕಾಯಿಲೆಯ ಗುಟ್ಟು ನಮ್ಮೊಳಗೇ ಎಲ್ಲೋ ಇರಬೇಕು. ಗಾಂಧಿ ಹೇಳಿದಂತೆ ಸ್ವರಾಜ್ ಎನ್ನುವುದು ಹೊರಗಿನದು ಮಾತ್ರವಲ್ಲ, ಒಳಗಿನದು ಕೂಡ.

ಜಾಗತೀಕರಣ ಬಂದ ಎರಡು ಮೂರು ದಶಕಗಳಲ್ಲಿ ಮೌಲ್ಯ ವ್ಯವಸ್ಥೆಯಲ್ಲಿ ಭಾರೀ ಬದಲಾವಣೆಯಾಗಿದೆ. (ಹೀಗೆ ಹೇಳಿದ ಕೂಡಲೆ ಸನಾತನವಾದಿಗಳೆಂದು ಅನುಮಾನಿಸುತ್ತಾರೆ; ಆದರೂ ಪರವಾಗಿಲ್ಲ). ಮುಖ್ಯವಾಗಿ ನೈತಿಕತೆಯನ್ನು ಗ್ರಹಿಸುವ ಕ್ರಮದಲ್ಲಿ ಪಲ್ಲಟ ಕಾಣುತ್ತಿದೆ. ನೈತಿಕತೆ ಎಂದರೆ ಶೀಲ ಎಂದರ್ಥವಲ್ಲ; ಅದರಲ್ಲಿ ಮಾನವ ಗೌರವ, ಸಹ ಸ್ಪಂದನ, ಸಹಬಾಳ್ವೆಯ ತಿಳಿವಳಿಕೆ ಇರುತ್ತದೆ. ಈ ಗುಣಗಳು ಮಾಯವಾಗತೊಡಗುತ್ತಾ ಬಂದು ಅತೀವವಾದ ಲೌಕಿಕ ಜಗತ್ತು ನಮ್ಮ ಸುತ್ತ ಆವರಿಸುತ್ತಿದೆ. ಭೋಗವೇ ಪ್ರಧಾನವಾದ ಮೌಲ್ಯವನ್ನುಳ್ಳ ಸಮಾಜ ನಮ್ಮ ಮುಂದಿದೆ. ಈ ಸಮಾಜದ ಮೌಲ್ಯವು 'ಬಳಸಿ ಬಿಸಾಡು' ಎನ್ನುವುದಾಗಿದೆ. ತತ್ಕ್ಷಣಕ್ಕೆ ತನ್ನ ಅನುಕೂಲಕ್ಕೆ ಒದಗುವ ಯಾವುದೇ ಆದರೂ ಸರಿ ಅದನ್ನು ಬಳಸಿಕೊಳ್ಳುವುದಕ್ಕೆ ಮನಸ್ಸು ಮಾಡುವಂತೆ ಪ್ರೇರೇಪಿಸುತ್ತಿದೆ. ಮಾರುಕಟ್ಟೆಗೆ ಯಾವಾಗಲೂ 'ಉದ್ರೇಕ' ಎನ್ನುವುದು ಸರಕೇ. ಅದನ್ನು ಅದು ವಸ್ತುಗಳ ಮೂಲಕ ವ್ಯಾಪಾರ ಮಾಡಲು ಬಯಸುತ್ತಿರುತ್ತದೆ. ಇದೀಗ ಸೊಂಟದ ಕೆಳಗಿನ ಅಂಗಗಳೇ ಅದಕ್ಕೆ ಕೇಂದ್ರವಾಗಿದ್ದು ಅವುಗಳ ಉದ್ರೇಕಕ್ಕೆ ಮುಕ್ತ ಮಾರುಕಟ್ಟೆ ತಯಾರಾಗಿದೆ. ಅತ್ಯಾಚಾರಿಗಳು ಈ ಮಾರುಕಟ್ಟೆ ಸಮಾಜದ ಗ್ರಾಹಕರು. ಅವರು ಇಂಚಿಂಚೂ ಅದಕ್ಕೆ ಒಳಗಾಗಿದ್ದಾರೆ. ಆದುದರಿಂದ ಅವರಿಗೆ ಬರಿಯ ಅಂಗಗಳೇ ಕಾಣುತ್ತವೆ ಹೊರತಾಗಿ ಮನುಷ್ಯರಲ್ಲ. ವಿವಾಹ ಬಾಹಿರ ಸಂಬಂಧಗಳನ್ನು ಛೀಕರಿಸಿ ನೋಡುತ್ತಿದ್ದ ಸಮಾಜವೀಗ ಬೆಪ್ಪುಗೊಂಡು ತಂದೆ ಮಗಳ ಮೇಲೆ, ಅಣ್ಣ ತಂಗಿಯ ಮೇಲೆ, ಪ್ರೇಮಿ ತನ್ನ ಎಳೆಯ ಪ್ರೇಮಿಯ ಮೇಲೆ ಅತ್ಯಾಚಾರ ಮಾಡುವ ಮನಸ್ಥಿತಿಯನ್ನು ಒದಗಿಸಿಕೊಟ್ಟಿದೆ.

ಸಮಾಜದಲ್ಲಿ ವಿಕೃತಿ ತಲೆ ಎತ್ತುತ್ತಿರುವುದು ಖಚಿತವಾಗಿದೆ. ಲೈಂಗಿಕತೆಗಳ ಬಗ್ಗೆ ವಿಚಿತ್ರವಾದ ಕುತೂಹಲ ಬೆಳೆದಿರುವ ಪರಿಣಾಮ ಅದರ ಬಗೆಗಿನ ಗೀಳು ಬೆಳೆಸಿಕೊಳ್ಳುವ ಯುವಜನರು ಕಾಣುತ್ತಾರೆ. ಅವರ ಕೈಗೆ ಸಿಕ್ಕಿರುವ ಯಾಂತ್ರಿಕ ಉಪಕರಣಗಳು ಅವರ ಗೀಳುಗಳನ್ನು ಪೋಷಿಸುವ ಪೋರ್ನೋ ಲೋಕವನ್ನೇ ಬಿಚ್ಚಿ ತೋರಿಸುತ್ತಿದೆ. ಇದರಿಂದ ಉತ್ತೇಜಿತಗೊಂಡು ಪ್ರಯೋಗಾರ್ಥ ಅತ್ಯಾಚಾರ ಮಾಡುವವರ ಸಂಖ್ಯೆ ಹೆಚ್ಚಿದೆ. ಈ ವಿಕಾರಗಳನ್ನು ಹೇಗೆ ನಿರ್ವಹಿಸಬೇಕೆನ್ನುವುದು ತಿಳಿಯದೆ ಹೋಗಿದೆ.

ಅತ್ಯಾಚಾರವನ್ನೇ ಪುನಾ ಪುನಾ ಅತ್ಯಾಚಾರ ಮಾಡುವ ಸುದ್ದಿವಾಹಿನಿಗಳು ಈ ರೋಗವನ್ನು ಇನ್ನಷ್ಟು ವೇಗವಾಗಿ ಹಬ್ಬಿಸುತ್ತಿವೆ. ಮಾಧ್ಯಮಗಳು ಚುರುಕಾಗುವುದು ಎಂದರೆ ಚಪ್ಪರಿಸುವ ಮಸಾಲೆಯ ಸರಕನ್ನು ತಂದು ವೀಕ್ಷಕರ ಮುಂದಿಡುವುದು ಎಂದರ್ಥವಲ್ಲ. ಆದರೆ ನಡೆಯುತ್ತಿರುವುದು ಮಾತ್ರ ಅದೇ. ಮಾನವೀಯತೆಯನ್ನು ಸೃಷ್ಟಿಸುವುದೆಂದರೆ ದಾರುಣತೆಯನ್ನು ಢಾಳಾಗಿ ಚಿತ್ರಿಸುವುದು ಎಂಬ ಅರ್ಥ ಬರುವಂತಾಗಿದೆ. ಈ ದಿಸೆಯಲ್ಲಿ ಮಾಧ್ಯಮಗಳನ್ನೂ ಹೊಣೆ ಮಾಡಬೇಕಿದೆ.

ಇನ್ನು ಸನಾತನವಾದಿಗಳು ಎಬ್ಬಿಸುವ ಕಿಡಿಗಳು ವಿಚಿತ್ರವಾದ ವಾದದ ಉನ್ಮಾದವನ್ನು ನೀಡುತ್ತದೆ. ಅತ್ಯಾಚಾರದ ಹೊಣೆಗಾರಿಕೆಯನ್ನು ಇವರು ಹೆಣ್ಣಿನ ಮೇಲೆಯೇ ವರ್ಗಾಯಿಸುತ್ತಾರೆ. ಅವಳ ಉಡುಪು, ವರ್ತನೆಗಳು ಗಂಡಸರನ್ನು ಉತ್ತೇಜಿಸುವಂತಿರುತ್ತವೆಯಾದ್ದರಿಂದ ಅತ್ಯಾಚಾರಗಳು ನಡೆಯುತ್ತವೆ ಎಂಬ ಫರ್ಮಾನು ಹೊರಡಿಸುತ್ತಾರೆ. ಈ ರೀತಿಯ ಮಿಥೀಕರಣಗಳು ಹೆಣ್ಣಿನ ಅತ್ಯಾಚಾರದ ಸುತ್ತ ಗಿರಕಿ ಹೊಡೆಯುತ್ತಲೇ ಇರುತ್ತವೆ. ಆದರೆ ಇವುಗಳ ಪೊಳ್ಳುತನವು ಅತ್ಯಾಚಾರದಂತಹ ಸಮಸ್ಯೆಗಳನ್ನು ಪರಿಹರಿಸುವುದಿಲ್ಲವೆಂದು ನೆನಪಿನಲ್ಲಿಡಬೇಕು.

ಅತ್ಯಾಚಾರಗಳ ವಿರುದ್ಧ ಸಮರ ಸಾರುವ ಸರ್ಕಾರಗಳು, ಕಾನೂನುಗಳಿಂದ ಪರಿಹಾರ ಸಿಕ್ಕಿದೆಯೇ? ಎಂದು ನೋಡಿದರೆ, ಸಹಜವಾಗಿ ಬದುಕಬೇಕಾದ ಪರಿಸರವನ್ನು ಬಲಿಗೊಟ್ಟು ಅತಿ ಕಾವಲಿನ ವಾತಾವರಣ ಸೃಷ್ಟಿಸಿದಲ್ಲಿ ಸುರಕ್ಷೆ ಎನ್ನುವುದು ಮೂಡುವುದು ಅನುಮಾನ. ಇನ್ನಷ್ಟು ವಿಕೃತಿಗಳು ಕಾಣಿಸಿಕೊಳ್ಳುವ ಅಪಾಯಗಳೇ ಹೆಚ್ಚು. ಮನೆಯಲ್ಲಿ, ಶಾಲೆಯಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಎಷ್ಟು ಸಿ.ಸಿ ಟಿವಿ ಕ್ಯಾಮೆರಾಗಳು ಇದ್ದರೂ ಮನೋವಿಕೃತಿಯನ್ನು ತಡೆಯಲಾರದು. ಇದಕ್ಕೆ ಬದಲಾಗಿ ಮನೋಭಾವವನ್ನು ಬದಲಾಯಿಸುವ ಹೊಣೆಗಾರಿಕೆಯನ್ನು ಸಮಾಜ ಹೊತ್ತುಕೊಳ್ಳಬೇಕಿದೆ. ಕಳೆದ ಸಂಚಿಕೆಯ ಸಂಪಾದಕೀಯದಲ್ಲಿ ಸಂಪಾದಕರು ಬರೆದಂತೆ ಪ್ರಗತಿಯ ರುಚಿಗೆ ಬಿದ್ದು ಅದಕ್ಕೆ ಬೇಕಾದ 'ಆಧುನಿಕ' ಮನಃಸ್ಥಿತಿಯ ಹೆಸರಿನಲ್ಲಿ ನಮ್ಮ ಮನೆ–ಮನಗಳನ್ನು ಎಷ್ಟು ಭ್ರಷ್ಟಗೊಳಿಸಿಕೊಂಡಿದ್ದೇವೆ ಮತ್ತು ಇದಕ್ಕೂ ಹೆಚ್ಚುತ್ತಿರುವ ಅತ್ಯಾಚಾರಗಳಿಗೂ ಸಂಬಂಧವಿದೆಯೇ ಎಂದು ಯೋಚಿಸಬೇಕಾಗಿದೆ ಎಂಬ ಮಾತು ನನ್ನೊಳಗೂ ಕಾಡಿ, ಕಾರಣ ಮತ್ತು ಪರಿಣಾಮಗಳನ್ನು ಒತ್ತಟ್ಟಿಗೆ ವಿಶ್ಲೇಷಿಸಬೇಕೆನ್ನುವ ಅರಿವು ಮೂಡಿತು. ಅತ್ಯಾಚಾರವು ದೈಹಿಕ ಮತ್ತು ಮಾನಸಿಕ ಸಮಸ್ಯೆ ಅಷ್ಟೇ ಅಲ್ಲ ಸಾಮಾಜಿಕ ಕೂಡ. ಹೆಚ್ಚಿನದಾಗಿ ಮನೋಭಾವದ ಪರಿಣಾಮ ಎಂದು ನನ್ನ ತಿಳಿವಳಿಕೆ.



**–ತಾರಿಣಿ ಶುಭದಾಯಿನಿ**(ಸಾಹಿತ್ಯ ಚಿಂತಕಿ ಮತ್ತು ಅಧ್ಯಾಪಕಿ)

# ಅದು ಗಂಡಿನೊಳಗಿರುವ ಕಾಮದ ಕೇಡು!




ಅನಾ್ಯಂು´ು, ಅತ್ಯಾಚಾರದಂತಹ ಸಂಗತಿಗಳು ಹೊಸವೇನಲ್ಲ. ಅವು ಉದ್ದಕ್ಕೂ ನಡೆದುಕೊಂಡೇ ಬಂದಿವೆ. ಅವೆಲ್ಲ ಮನುಷ್ಯನೊಳಗಿನ ಕೇಡಿನ (evil in man) ಪ್ರತಿರೂಪಗಳಷ್ಟೆ. ಅವು ಹಿಂದೆಯೂ ಇದ್ದವು, ಈಗಲೂ ಇವೆ. ಂುಹಾವಾಗಲೂ ಇರುವಂತಹುಗಳೇ. ನಿರ್ಭಯ ಪ್ರಕರಣದ ನಂತರ ಲೈಂಗಿಕ ದೌರ್ಜನ್ಯಗಳ ಗಾಂಭೀರ್ಯ ನಮಗೆ ಅರ್ಥವಾಗುತ್ತಿದೆ ಅಷ್ಟೆ.

ಲೈಂಗಿಕ ಅತ್ಯಾಚಾರವೆಂಬುದು ಮನುಷ್ಯನಿಗೆ ಮಾತ್ರ ಸೀಮಿತ. ಏಕೆಂದರೆ ಮನುಷ್ಯ ಸುಸಂಸ್ಕೃತ ಪ್ರಾಣಿ ಅಲ್ಲವೆ! ಮನುಷ್ಯನಲ್ಲಿ 'ಅದು' ಸ್ವಲ್ಪ ಅಗತ್ಯಕ್ಕಿಂತ ಹೆಚ್ಚಿಗೇ ಇರುವುದರಿಂದ ಇತರೆ ಪ್ರಾಣಿಗಳಿಗಿರುವ ನಿಯತ್ತು ಮನುಷ್ಯನಿಗಿಲ್ಲ 'ಅದರ' ನಿಯಂತ್ರಣಕ್ಕಾಗಿಯೇ ಮನುಷ್ಯ ಮನೆ, ಮಠ, ಸಮಾಜ, ವಿವಾಹ, ನೈತಿಕತೆ, ಧರ್ಮ, ದೇವರು, ಮೌಲ್ಯ ಎಂದು ಎಲ್ಲವನ್ನು ಸೃಷ್ಟಿಸಿಕೊಂಡಿದ್ದರೂ ಅದು ನಿಯಂತ್ರಣಕ್ಕೆ ಬಾರದೇ ಮನುಷ್ಯನೊಳಗಿನ ತಮಂಧದ ಕೇಡು ಆಗಾಗ ಬೇರೆ ಬೇರೆ ರೂಪದಲ್ಲಿ ಪ್ರಕಟಗೊಳ್ಳುತ್ತಲೇ ಇರುತ್ತದೆ. ಮಿಲನದಲ್ಲಿ ಸಾವು ಇದೆ ಎಂದು ಗೊತ್ತಿದ್ದರೂ ನಮ್ಮ ಮಹಾಭಾರತದ ಪಾಂಡು ಅತ್ತ ಜಾರಿದ ಮತ್ತು ಅಸುನೀಗಿದ. ಆದ್ದರಿಂದ ಮನುಷ್ಯರಿರುವ ವರೆಗೆ ಲೈಂಗಿಕ ಅತ್ಯಾಚಾರವೆಂಬುದು ಆಗಾಗ ಘಟಿಸುತ್ತಲೇ ಇರುವ ಸಂಗತಿ.

ನಾಗರಿಕ ಸಮಾಜದಲ್ಲಿ ಇಂಥವುಗಳು ನಡೆಯುತ್ತಲೇ ಇರಬೇಕೆ ಎಂಬುದೆ ಇಂದಿನ ಪ್ರಶ್ನೆ. ಅನೇಕ ಕಾರಣಗಳಿಂದಾಗಿ ಹೆಣ್ಣು ಇಂದು ಪುರುಷರಿಗೆ ಸಮನಾಗಿ ದುಡಿಯಬೇಕಾಗಿದೆ, ದುಡಿಯುತ್ತಿದ್ದಾಳೆ. ಹೀಗಾಗಿ ಪರ ಪುರುಷರೊಂದಿಗೆ ಅವಳು ಏಗಬೇಕಾಗಿದೆ. ಇಂದು ಅವಳು ಹೆಚ್ಚು ಪ್ರದರ್ಶಿತಗೊಳ್ಳುತ್ತಿದ್ದಾಳೆ. ಅದರಿಂದಾಗಿಯೆ ಅವಳು ಹೆಚ್ಚು ಅಪಾಯದ ಸಾಧ್ಯತೆಗಳಿಗೀಡಾಗಿದ್ದಾಳೆ. ಮಹಿಳೆಯ ಸ್ವಲ್ಪ ಮಟ್ಟಿನ ದೈಹಿಕ ಬಲಹೀನತೆ ಮೃಗೀಯ ಪುರುಷನಿಂದ ಆಕ್ರಮಣಕ್ಕೊಳಗಾಗಲು ಕಾರಣವಾಗುತ್ತಿದೆ. ಪುರುಷನಷ್ಟೇ ಮಹಿಳೆಯು ದೈಹಿಕವಾಗಿ ಬಲಿಷ್ಠವಾಗಿದ್ದರೆ ಅತ್ಯಾಚಾರವೆಂಬುದು ವಿರಳವಾಗಿರಬಹುದಾಗಿತ್ತು. ನಮ್ಮ ಗಂಡು ಮಕ್ಕಳನ್ನು ಹೆಣ್ಣು ಮಕ್ಕಳ ತರ, ಹೆಣ್ಣು ಮಕ್ಕಳನ್ನು ಗಂಡು ಮಕ್ಕಳ ಬೆಳೆಸಿದರೆ, ಮನೆಯಲ್ಲಿ ಸಹೋದರಿಯರಿದ್ದರೆ ಮಹಿಳೆ ಕುರಿತು ಗಂಡಿಗೆ ಸ್ವಲ್ಪ ಕಳಕಳಿ ಹುಟ್ಟೀತು ಅನ್ನುವ ಭಾವನೆ ಉಂಟು. ಆದರೆ ಯಾವ ತರ್ಕಕ್ಕೂ ನಿಲುಕದ ಘಟನೆಗಳು ದಿನಾಲು ವರದಿಯಾಗುತ್ತಲೇ ಇರುತ್ತವೆ.

ಹಾಗಾದರೆ ಇದಕ್ಕೆ ಬೇರೆ ಉಪಾಯವೇ ಇಲ್ಲವೇ? ಇದೆ. ಅಂತಹ ಉಪಾಯಗಳನ್ನು ಕೂಡ ಗಂಡೇ ಹುಡುಕಿದ್ದಾನೆ. ಹೆಣ್ಣಿಗೆ ಬುರ್ಕಾ ಹಾಕುವ ಒಂದು ಕ್ರಮ Extreme ಉಪಾಯವಾಗಿ ಜಾರಿಯಲ್ಲಿದೆ. ಗಂಡು ಮಿಕಗಳಿಂದ ರಕ್ಷಣಾ ಉಪಾಯವಾಗಿ, ಗಂಡಿನ ಒತ್ತಾಸೆಯಿಂದ ಮಹಿಳೆ ಮುಖ ಮರೆ ಮಾಚುವ ಸಂಪ್ರದಾಯವು ಬಂದಿದೆ. ಕೆಲವು ಕಡೆ ಕೆಲವು ಜನಾಂಗಗಳಲ್ಲಿ ಈಗಲೂ ಅನುಸರಿಸಲಾಗುತ್ತಿರುವ ಯೋನಿಛೇದದಂತಹ(ಫಿಮೇಲ ಜನೆಟಿಕ್ ಮ್ಯುಟಿಲೇಶನ್) ಅಮಾನವೀಯ ಕೃತ್ಯಗಳು ಕೂಡ ಇವೆ. ಇವೆಲ್ಲ ಪುರುಷ ಮಹಿಳೆಯರ ಆಂಗಿಕ ನಿಯಂತ್ರಣಕ್ಕೆ ಮಾಡಿರುವ ಉಪಾಯಗಳು. ಇಲ್ಲಿ ಮಹಿಳೆಯ ಇಷ್ಟಾನಿಷ್ಟ ಲೆಕ್ಕಕ್ಕಿಲ್ಲ.

ಇದಕ್ಕೆ ತದ್ವಿರುದ್ಧವಾಗಿ ತುಂಡುಡುಗೆ, ಮಿನಿ, ಮಿಡಿ ಎಂದು ಪ್ರಚಲಿತ ಇವೆ. ಎರಡೂ ಒಂದೊಂದು ತೀರ. ಆದಷ್ಟು ಹೆಚ್ಚು ಹೆಚ್ಚು ತನ್ನನ್ನು ತೋರಿಸಿಕೊಳ್ಳಬೇಕೆನ್ನುವದು ಹೆಣ್ಣಿನ ಸೃಷ್ಟಿ ಸಹಜ ಮನೋಭಿಲಾಷೆಯಾದರೆ, ಆದಷ್ಟು ಹೆಚ್ಚು ಹೆಚ್ಚು ನೋಡಬೇಕೆನ್ನುವುದು ಗಂಡಿನ ಸಹಜ ವಾಂಛೆ. ಸ್ವಲ್ಪ ಇಂತಹ ಪ್ರದರ್ಶನ, ಪ್ರಚೋದನೆ ಕಡಿಮೆಯಾದರೆ ಇಂತಹ ಕೃತ್ಯಗಳಿಗೆ ಸ್ವಲ್ಪ ಕಡಿವಾಣ ಬೀಳಬಹುದು. ಗೋವಾದ ಸಚಿವರೋರ್ವರು ಇತ್ತೀಚೆಗೆ ಈ ಕುರಿತು Mild ಆಗಿ ಒಂದಿಷ್ಟು ಹೇಳಿದರೂ ಅವರ ವಿರುದ್ಧ ಮಾಧ್ಯಮದವರೂ, ಮಹಿಳಾವಾದಿಗಳು ತಿರುಗಿಬಿದ್ದರು. ಹೇಗಿದ್ದರೂ, ಏನು ಪ್ರದರ್ಶಿಸಿದರೂ, ಏನೂ ಘಟಿಸಬಾರದು ಅನ್ನುವ ಹಂತವನ್ನು ನಮ್ಮ ಸಮಾಜ ಇನ್ನೂ ತಲುಪಿಲ್ಲ. ಕೆಲವೆಡೆ ಇದು ನಿಮ್ನ ವರ್ಗದ ಅಸಹಾಯಕ ಮಹಿಳೆಯರ ವಿರುದ್ದ ನಡೆದರೆ, ಹೈ ಫೈ ಸಮಾಜದಲ್ಲಿ ಬೇರೆ ರೂಪದಲ್ಲಿ ನಡೆಯುತ್ತಿರುವುದನ್ನು ನಾವು ಕಾಣುತ್ತೇವೆ, ನಂತರದ ಪರಿಣಾಮಗಳಿಗೆ ಹೆದರಿ ಹೆಣ್ಣನ್ನು ಅತ್ಯಾಚಾರದ ನಂತರ ಸಾಯಿಸುವ ಕುಕೃತ್ಯವೂ ನಡೆಯುವುದನ್ನು ನೋಡುತ್ತೇವೆ. ಮುಗ್ಧ ಚಿಕ್ಕ ಮಕ್ಕಳು ಯಾವ ಪ್ರಚೋದನೆ ಮಾಡುತ್ತವೆ ಎಂಬ ಪ್ರಶ್ನೆಯೂ ಉಂಟು. ಅದು ಗಂಡಿನೊಳಗಿರುವ ಕಾಮದ ಕೇಡು ಅಷ್ಟೆ.

ಇಂತಹ ಘಟನೆಗಳಿಗೆ ಆಸ್ಪದ ಆಗದಂತೆ, ಸಿಗದಂತೆ ಗಂಡು ಹೆಣ್ಣು ವರ್ತಿಸಬೇಕು. ನಮ್ಮ ಕಾಯ್ದೆ ಕಾನೂನು ಈ ಕುರಿತು ಶಿಕ್ಷೆಗಿಂತ ಬಂಧಾತ್ಮಕ ಪ್ರತಿ ಉಪಾಯಗಳು, ಮಹಿಳಾ ಸ್ನೇಹಿ ವಾತಾವರಣ ನಿರ್ಮಾಣದ ಕಡೆಗೆ ಹೆಚ್ಚು ಗಮನ ವಹಿಸಬೇಕು. ಶಿಕ್ಷೆಯ ಬೆದರಿಕೆಗೆ ಮನಸಿಜನು ಮಣಿಯನು. ಆದರೂ ಇಂತಹ ಕೃತ್ಯಗಳು ಜನಮನದಿಂದ ಮರೆಯಾಗುವ ಮೊದಲು ಶಿಕ್ಷೆಯಾದರೆ ಸ್ವಲ್ಪ ಅಳಕು ಹುಟ್ಟೀತು.



**–ವೆಂಕಟೇಶ ಮಾಚಕನೂರು**( ಶಿಕ್ಷಣ ಇಲಾಖೆಯ ನಿವೃತ್ತ ಆಯುಕ್ತರು ಮತ್ತು ಲೇಖಕರು)

---

# ತಪ್ಪು ಸಮ್ಮತಿಗಳ ಕುರುಡು ಲೋಕ

ಇತ್ತೀಚಿನ ದಿನಗಳಲ್ಲಿ ಅತ್ಯಾಚಾರ ಪ್ರಕರಣಗಳು ಹೆಚ್ಚಾಗುತ್ತಿವೆಯೇ? ಅಥವಾ ಅದರ ಕುರಿತಾದ ಗುಲ್ಲು ಹೆಚ್ಚಾಗುತ್ತಿದೆಯೇ? ಎಂಬ ಪ್ರಶ್ನೆಗಳು ಇಂದು ಕಾಡಲು ಶುರುವಾಗಿದೆ. ಇದಕ್ಕೆ ಮುಖ್ಯ ಕಾರಣ, ಹೆಚ್ಚಾದ ಖಾಸಗಿ ಚಾನಲ್‌ಗಳ ಭರಾಟೆ. ಇವುಗಳು ರಣಹದ್ದುಗಳಂತೆ ಬ್ರೇಕಿಂಗ್ ನ್ಯೂಸ್‌ಗಳಿಗಾಗಿ ಕಾಯುತ್ತಾ ಸಿಕ್ಕಿದ ತಕ್ಷಣ ಎರಗತೊಡಗುತ್ತವೆ. ಆಹಾರವಷ್ಟೇ ಮುಖ್ಯ. ಹೊಣೆಯಲ್ಲ ಎಂಬುದು ಅವುಗಳ ಅಲಿಖಿತ ಧ್ಯೇಯವಾಕ್ಯವಾಗಿದೆ.

ಅದಿರಲಿ. ಈಗ ನಾವು ಗಂಭೀರವಾಗಿ ಯೋಚಿಸಬೇಕಾಗಿರುವುದು ಅತ್ಯಾಚಾರ ಮತ್ತು ಅದು ಬಿಂಬಿಸುತ್ತಿರುವ ಕ್ರೌರ್ಯದ ಕುರಿತು. ಬಹುಶಃ ಈ ಭೂಮಿ ಮೇಲೆ ನಾಗರಿಕತೆ ಎಂಬುದು ಆರಂಭವಾದಾಗಲೇ ಅತ್ಯಾಚಾರಗಳೂ ಆರಂಭವಾಗಿರಬೇಕು! ಯಾಕೆಂದರೆ ಈ ನಾಗರಿಕತೆಯ ನಾಯಕತ್ವ ವಹಿಸುವವರು ತಮ್ಮ ಮೂಗಿನ ನೇರಕ್ಕೆ ತಮಗೆ ಬೇಕಾದ ವಿಚಾರಗಳನ್ನು ಮಾತ್ರ 'ನ್ಯಾಯಬದ್ಧ'ಗೊಳಿಸಿಕೊಳ್ಳುವುದನ್ನು ಅರೆದು ಕುಡಿದವರು. ಹಾಗೆಯೇ ಈ ನಾಗರಿಕತೆಯ ವಿಕಾಸದ ಒಂದು ಹಂತದಲ್ಲಿ ಹೆಣ್ಣಿನ ಮೇಲೂ ನಿಯಂತ್ರಣ ಸಾಧಿಸಲಾಯಿತು. ಅಂದಿನಿಂದಲೇ ತನ್ನ ಇಚ್ಛೆಯನ್ನು ಮೀರಿ ನಡೆದ ಹೆಣ್ಣಿನ ಮೇಲೆ ನಿಯಂತ್ರಣ ಸಾಧಿಸಲು ಅತ್ಯಾಚಾರ ಕೂಡ ಒಂದು ಅಸ್ತ್ರವಾಯಿತು. ಯುದ್ಧ, ಕೋಮು ಗಲಭೆ, ಆಸ್ತಿ ಜಗಳಗಳಲ್ಲಿ ಶತ್ರು ಪಾಳಯದ ಹೆಂಗಸರ ಮೇಲೆ ಆಕ್ರಮಣ ಜಗತ್ತಿನ ಎಲ್ಲೆಡೆ ಇದೆ. ಅದರೊಂದಿಗೆ ಕಾಮಪಿಪಾಸುಗಳ, ವಿಕೃತ ಕಾಮಿಗಳ ಕೈಗೆ ಸಿಕ್ಕಿ ಹೆಂಗಸರು, ಮಕ್ಕಳು ನಿರಂತರ ನಲುಗಬೇಕಾಗಿದೆ. (ಅಪರಾಧ ದಾಖಲೆಗಳ ಪ್ರಕಾರ ಭಾರತದಲ್ಲಿ ಪ್ರತಿನಿತ್ಯ ೯೬ ಮಹಿಳೆಯರ ಮೇಲೆ ಅತ್ಯಾಚಾರವಾಗುತ್ತಿದೆ). ಒಂದಂತೂ ನಿಜ, ಇದು ಮೊದಲಿನಿಂದಲೂ ನಡೆದಿದೆ. ಆದರೆ ಪ್ರತಿಭಟಿಸಬೇಕಾದ ಮುಂಚೂಣಿ ವಿಷಯ ಎಂಬುದಾಗಿ ಮಾತ್ರ ಇದು ಹೆಚ್ಚು ಬಿಂಬಿತವಾಗಿರಲಿಲ್ಲ ಅಷ್ಟೆ.

ಇಂದು ಹಲವು ಕಾರಣಗಳಿಗಾಗಿ ಅತ್ಯಾಚಾರ ಪ್ರಕರಣಗಳು ಹೊರಬೀಳುತ್ತಿವೆ. ಇದಕ್ಕೆ ಮುಖ್ಯಕಾರಣಗಳು ಕಾನೂನಿನ ಅರಿವು ಮತ್ತು ಸ್ವಾವಲಂಬನೆ. ಆದರೆ ಇದೇ ಸಂದರ್ಭದಲ್ಲಿ ಅತ್ಯಾಚಾರಕ್ಕೆ ಕಾರಣಗಳೇನು ಎಂಬ ಚರ್ಚೆಯೂ ನಡೆಯುತ್ತಿದೆ. ಅದರಲ್ಲೂ ಇತ್ತೀಚೆಗೆ ಇದಕ್ಕೆ ಹೆಣ್ಣು ಎಷ್ಟು ಕಾರಣ ಎಂಬ ಚರ್ಚೆ ಗುಪ್ತವಾಗಿ, ವೇಷ ಬದಲಿಸಿಕೊಂಡು ತಲೆ ಎತ್ತುತ್ತಿದೆ. ಹೀಗೆ ಕೇಳುವಾಗ ಎಲ್ಲರಿಗೂ ಒಪ್ಪಿಗೆಯಾಗುವಂತೆ ಮುನ್ನೆಲೆಗೆ ತರುತ್ತಿರುವ ಒಂದಂಶ ಹೆಣ್ಣಿನ ಉಡುಗೆ ತೊಡುಗೆಯದು. ಕೆಲ ಹೆಣ್ಣುಮಕ್ಕಳು ಧರಿಸುವ ಅರೆಬರೆ ಉಡುಗೆಯು ಗಂಡಸರನ್ನು ಪ್ರಚೋದಿಸಿ ಅವರು ಅತ್ಯಾಚಾರ ಎಸಗಲು ಕಾರಣವಾಗುತ್ತಿದೆ ಎಂಬುದು ಒಂದು ವಾದ. ಈ ವಾದವನ್ನು ಮೊದಲಿಗೇ ವಿರೋಧಿಸಬೇಕಾಗಿರುವುದು ಯಾಕೆಂದರೆ ಇದು



ಹೀಗೆ ಹೇಳುವ ಮೂಲಕ ಅತ್ಯಾಚಾರಿಗಳಿಗೆ ನೇರ ಸಮರ್ಥನೆಯನ್ನೂ ಕುಮ್ಮಕ್ಕನ್ನೂ ಕೊಡುತ್ತದೆ ಎಂಬುದಕ್ಕಾಗಿ. ಯಾರೇ ಆದರೂ, ಸಭ್ಯ ಉಡುಗೆ ತೊಡಬೇಕೆಂದು ಹೇಳುವುದು ಸರಿಯಾದ ಮಾತು. ಆದರೆ ಹೆಂಗಸರ ಅಸಭ್ಯ ಉಡುಗೆಯಿಂದ ಅತ್ಯಾಚಾರಗಳು ನಡೆಯುತ್ತವೆ ಎಂದು ವಾದಿಸುವುದು ಅಪಾಯಕಾರಿ ಮಾತಾಗುತ್ತದೆ. ಈಗಾಗಲೇ ನೊಂದಿರುವ ಹೆಣ್ಣನ್ನೇ ಮತ್ತೆ ಅಪರಾಧಿಯಂತೆ ಚಿತ್ರಿಸುವುದರ ಕಡೆ ಗಮನ ಹೋದರೆ ಅಪರಾಧವೆಸಗಿದ ಗಂಡಿನ ಧೋರಣೆಗಳ ನಿಜವನ್ನು ಕಂಡುಕೊಳ್ಳುವುದು ಯಾವಾಗ ಎಂಬ ಪ್ರಶ್ನೆಯೂ ಇಲ್ಲಿ ಮುಖ್ಯ. ಅತ್ಯಾಚಾರಗಳು ಎಗ್ಗಿಲ್ಲದೆ ನಡೆಯುವಲ್ಲಿ ಅತ್ಯಾಚಾರಿಗಳಿಗೆ ನಿರಂತರವಾಗಿ ಒದಗಿ ಬಂದ ಪರೋಕ್ಷ ಬೆಂಬಲವೂ ಪ್ರಮುಖ ಕಾರಣವಾಗಿದೆ.

ಮತ್ತೆ ಇಲ್ಲಿ ಮೊದಲಿಗೇ ಹೇಳಬೇಕಾಗಿರುವುದೇನೆಂದರೆ ಹೆಂಗಸರ ಅಸಭ್ಯ ಉಡುಗೆಯನ್ನು ಸಮರ್ಥಿಸುವುದು ನನ್ನ ಉದ್ದೇಶವಲ್ಲ. ಆದರೆ, ಹೆಂಗಸರು ಈ ರೀತಿ ಉಡುಗೆ ತೊಡುವುದನ್ನು ಪ್ರೋತ್ಸಾಹಿಸುವ ಒಂದು ವ್ಯವಸ್ಥೆಯೇ ನಮ್ಮ ನಡುವೆ ಇಲ್ಲವೇ? ಈಗ  ಐವತ್ತು ವರ್ಷಗಳಿಗೆ ಹಿಂದಿನ ಸಿನಿಮಾಗಳಲ್ಲೂ ಕೂಡ (ಅದೂ ಕುಟುಂಬ ಸಮೇತ ನೋಡುವ ಸಿನಿಮಾ) ಕ್ಯಾಬರೆ ನೃತ್ಯ ಒಂದು ಅವಿಭಾಜ್ಯ ಅಂಗವಾಗಿತ್ತು. ಅಂದರೆ ಅಂತಹ ಹೆಂಗಸರು ಇರುವುದೇ ನಮ್ಮ ರಂಜನೆಗೆ ಎಂಬ ಸಂದೇಶವನ್ನು ಬಾಲ್ಯದ ಕಣ್ಣುಗಳಿಗೇ ರವಾನಿಸಲಾಗುತ್ತಿತ್ತು. ಆ ಮೂಲಕ ಹೆಣ್ಣಿನ ದೇಹ ಪ್ರದರ್ಶನವನ್ನು ಸಾರ್ವಜನಿಕವಾಗಿ ಮಾನ್ಯ ಮಾಡಲಾಯಿತು. ಸರಿ, ಇನ್ನು ಹೆಣ್ಣಿಗೆ ಕೊಡುತ್ತಿದ್ದ/ಕೊಡುತ್ತಿರುವ ಶಿಕ್ಷಣ ಯಾವ ರೀತಿ ಇದೆ? ಅದು ಸದಾ ಗಂಡಿನ ಮನ ಗೆಲ್ಲುವ ದಾರಿಯನ್ನು ಅಥವಾ ಅವನಂತೆ ಆಗುವ ದಾರಿಯನ್ನು ಹೇಳುತ್ತಿದೆ. ದೇಹದ ಮೂಲಕವಾದರೂ ಅಥವಾ ದೇಹವೇ ಅವನ ಪರಮ ಆಕರ್ಷಣೆ ಎಂಬುದಾದರೆ ಆ ದೇಹದ ಮೂಲಕವೇ ಅವನ ಮನ ಗೆಲ್ಲುವ ದಾರಿಯನ್ನು ಅವಳು ಹುಡುಕಿಕೊಳ್ಳುವುದನ್ನೇ ಅವಳ ಜೀವನದ ಪರಮ ಧ್ಯೇಯ ಎಂಬುದಾಗಿ ಬಿಂಬಿಸಲಾಯಿತೇ ಹೊರತು 'ಅವಳು ಅವಳಾಗಿ' ಒಂದು ಆದರ್ಶದ ದಾರಿ, ಅವಳನ್ನು ಪುರುಷನೂ ಅನುಸರಿಸಬಹುದು ಎಂದು ಯಾರೂ ಯಾವತ್ತೂ ಬಿಂಬಿಸಲೇ ಇಲ್ಲ. ಈ ಪಾಠವನ್ನು ಹೆಣ್ಣೂ, ಹೆಣ್ಣು ಹಾಗಿರುವುದೇ ಸರಿ ಎಂದು ಗಂಡೂ ಗ್ರಹಿಸುವಂತೆ ಅವರನ್ನು ನಾವು ರೂಪಿಸುತ್ತಿದ್ದೇವೆ. ಅದರ ಫಲವಾಗಿ ಅವಳು ಅವಕಾಶ ಸಿಕ್ಕಿದ ತಕ್ಷಣ ಒಂದೋ ಅವನಂತೆ ದರ್ಪ, ಅವನಂತೆ ಎಗ್ಗಿಲ್ಲದ ನಡೆಯಲ್ಲಿ ನಡೆಯುವುದೇ ಪರಮ ಆದರ್ಶವೆಂದುಕೊಳ್ಳುತ್ತಾಳೆ. ಅಥವಾ ಸದಾ ಅವನನ್ನು 'ಸೆಳೆ'ಯುವುದರಲ್ಲಿ ಮಗ್ನಳಾಗುತ್ತಾಳೆ. ಒಟ್ಟಿನಲ್ಲಿ ಅವಳು ಅವನ ಮೆಚ್ಚುಗೆಗಾಗಿ ಹಂಬಲಿಸುತ್ತಾ ನಲುಗುತ್ತಾಳೆ.

ನಡುವಿನ ದಾರಿಯಲ್ಲಿ ನಡೆಯುವುದನ್ನು ಕಲಿತವರು ಇಂದು ಹಲವರಿದ್ದರೂ ಅವರು ವಿರಳ. ಅಂತವರನ್ನು 'ಸ್ತ್ರೀ ವಾದಿ'ಗಳೆಂದು ಪ್ರತ್ಯೇಕಿಸುವುದೂ ನಡೆದಿದೆ. ಹಾಗೆ ನೋಡಹೋದರೆ, ಹೆಣ್ಣಿನ ಗುಣಗಳಿಂದ ಆಕರ್ಷಿತರಾಗಿ ಅದನ್ನು ಮೌಲ್ಯವಾಗಿ ಸ್ವೀಕರಿಸಿದವರು ಮತ್ತು ಅದನ್ನು ಸವಾಲಾಗಿ ಸ್ವೀಕರಿಸಿದವರು ಗಾಂಧಿ. ಬ್ರಹ್ಮಚರ್ಯ ಸಂಬಂಧಿಯಾದ ಅವರ ಪ್ರಯೋಗಗಳು ಮನಸ್ಸಿನ ಮೂಲಕ ಕಾಮವನ್ನು ಗೆಲ್ಲುವ ಕುರಿತು ನಂಬಿಕೆ ಇಟ್ಟ ನಡೆಯಾಗಿತ್ತು. ಹೀಗಾಗಿ ಅವರು ಯುವತಿಯರ ನಡುವೆ ಬತ್ತಲು ಮಲಗಿ ತಮ್ಮನ್ನು ತಾವು ಪರೀಕ್ಷಿಸಿಕೊಳ್ಳುವ ಧೈರ್ಯ ಮಾಡುತ್ತಾರೆ. ಅಂತಹ ಮಟ್ಟ ಮುಟ್ಟಿದ ಗಾಂಧಿಯ ಮುಂದೆ ಬತ್ತಲೆ ಯುವತಿ ನಿಂತರೂ ಅವರು ಪ್ರಚೋದನೆಗೆ ಒಳಗಾಗರು ಎಂಬುದು ನಿಶ್ಚಿತ. ಅಂದರೆ ನಾನು ಹೇಳ ಹೊರಡುತ್ತಿರುವುದು ನಾಗರೀಕರೆನಿಸಿಕೊಂಡ ನಾವು ನಮ್ಮ ಮನಸ್ಸುಗಳಿಗೆ, ಮತ್ತು ಆ ಮೂಲಕ ಸಮಾಜದ ಮನಸ್ಸಿಗೆ ತರಬೇತಿ ಕೊಡದೇ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಆದರೆ ನಾವು ಕೆಲವು ತಪ್ಪು ಸಮ್ಮತಿಗಳ ಮೂಲಕ ವ್ಯವಸ್ಥೆಯನ್ನು ಹದಗೆಡಿಸಿದ್ದಲ್ಲದೇ ಅದರ ಕುರಿತು ಕುರುಡಾಗಿದ್ದೇವೆ. ಇಂದಿನ ಮಾರುಕಟ್ಟೆಯ ಯುಗದಲ್ಲಿ ದೇಹವೂ ಸರಕಾಗಿದೆ. ಅದನ್ನು ಪ್ರಚೋದಿಸುವ ಉದ್ಯಮಗಳಿವೆ. ಅದು ಹೆಣ್ಣನ್ನೂ ಗಂಡನ್ನೂ ಬತ್ತಲುಗೊಳಿಸುತ್ತಿದೆ. ಹೆಣ್ಣಿನ ದೇಹ ಮಾತ್ರವಲ್ಲ, ಗಂಡಿನ ದೇಹವನ್ನೂ ಹುರಿಗೊಳಿಸಿ ಮಾರುತ್ತಿದೆ/ಕೆರಳಿಸುತ್ತಿದೆ. ಅದಕ್ಕೆ ಈ ವಿಚಾರದಲ್ಲಿ ಲಿಂಗಭೇದವಿಲ್ಲ. ಅದರ ಪರಿಣಾಮವಾಗಿ ಲೈಂಗಿಕ ವಿಕೃತಿಗಳು ಹೆಚ್ಚುತ್ತಿವೆ. ಜೊತೆಗೆ ಇಂಟರ್‌ನೆಟ್ ಸೈಟ್‌ಗಳು ಚಿಕ್ಕವರನ್ನೂ ಕೆಡಿಸುತ್ತಿವೆ.

ಒಂದು ಕಾಲಕ್ಕೆ ಬಾಲವಿಧವೆಯರಿಗೆ ಸಂಯಮ ಬೋಧಿಸಿ ಅವರು ಹಾಗೇ ಜೀವನ ಕಳೆಯುವಂತೆ ಮಾಡಿದವರು ನಾವು. ಅವಳ ತಲೆಯಲ್ಲಿ ತುಂಬಿ ಅವಳೇ ಅದಕ್ಕೆ ಸಮ್ಮತಿ ಕೊಡುವಂತೆ ಮಾಡಿದವರು ನಾವು. ಆದರೆ ಇಂದೇಕೆ ನಮ್ಮ ಗಂಡು ಮಕ್ಕಳಿಗೆ ಕನಿಷ್ಟ ಸಂಯಮ ಬೋಧಿಸುವುದು ನಮಗಾಗುತ್ತಿಲ್ಲ? ಸಂಯಮ ತಪ್ಪಿದ ಗಂಡು ಮಕ್ಕಳನ್ನು ಸಮರ್ಥಿಸುವುದೆಂದರೆ, ಇಂದಿನ ಮುಕ್ತ ವಾತಾವರಣದಲ್ಲಿ ಬೆಳೆಯುತ್ತಿರುವ ಹೆಣ್ಣು ಮಕ್ಕಳನ್ನೂ ಭವಿಷ್ಯದ ಅತ್ಯಾಚಾರಿಗಳನ್ನಾಗಿ ರೂಪಿಸುವುದಕ್ಕೆ ಗುಂಡಿ ತೋಡುತ್ತಿದ್ದೇವೆ ಎಂದೇ ಅರ್ಥ.

ಇತ್ತೀಚೆಗೆ ಹೆಣ್ಣಿನ ಪರ ಇರುವ ಕಾನೂನನ್ನು ದುರುಪಯೋಗ ಪಡಿಸಿಕೊಳ್ಳುವ ಪ್ರಕರಣಗಳೂ ನಡೆಯುತ್ತಿವೆ. ಗಂಡಿನ ಮೇಲಿನ ಈ ಕೆಲವು ಆಕ್ರಮಣಗಳಿಂದ ಗಂಡು ಕುಲದಲ್ಲಿ ಅಭದ್ರತೆ, ಅಸಹಾಯಕತೆಗಳು ಮೂಡುತ್ತಿವೆ. ಆದರೆ ಸಾವಿರಾರು ವರ್ಷಗಳಿಂದ ಹೆಣ್ಣೂ ಕೂಡ ಇದೇ ಭಾವಗಳಿಂದ ನರಳುತ್ತಿದ್ದಾಳಲ್ಲವೇ? ಅದರರ್ಥ ನಿರಪರಾಧಿ ಗಂಡಸರು ಶಿಕ್ಷೆ ಅನುಭವಿಸಬೇಕೆಂದಲ್ಲ. ಯಾರೂ ಅಂತಹ ಶಿಕ್ಷೆಗೆ ಒಳಗಾಗಬಾರದು. ಆದ್ದರಿಂದ ಸಭ್ಯತೆ, ಸಂಯಮ, ಶಿಷ್ಟಾಚಾರವನ್ನು ಗಂಡು ಹೆಣ್ಣುಗಳಿಬ್ಬರಿಗೂ ಸಮಾನವಾಗಿ ಬೋಧಿಸಬೇಕಾಗಿದೆ. ಒಬ್ಬರಿಗೆ ಮಾತ್ರ ಬೋಧಿಸಿದರೆ ಆಗ ಅದು ಗಂಡುಪರ ಸರ್ವಸಮ್ಮತಿಯನ್ನು ರೂಪಿಸುವ ಹುನ್ನಾರದ ಒಂದು ಭಾಗವಾಗುತ್ತದೆ. ಮೊದಲು ಹೆಣ್ಣಿನ ಉಡುಗೆಯ ಬಗ್ಗೆ ಆಕ್ಷೇಪ ನಂತರ ಹೆಣ್ಣಿನ ಸಾರ್ವಜನಿಕ ಜೀವನದ ಬಗ್ಗೆ ಆಕ್ಷೇಪವಾಗಿ ಅವಳು ಮನೆಯೊಳಗೆ ಬಂಧಿಯಾಗಬೇಕಾಗುತ್ತದೆ. ಗಂಡನ್ನು ಕೆರಳಿಸುತ್ತಾಳೆಂಬ ನೆಪದಲ್ಲಿ ಅವಳನ್ನು ಮುಚ್ಚಿಡುವ ಪ್ರಕ್ರಿಯೆ ಆರಂಭವಾಗುತ್ತದೆ. ಇಷ್ಟಾಗಿಯೂ ಅವಳ ಮೇಲಿನ ಅತ್ಯಾಚಾರ ಮಾತ್ರ ನಿಲ್ಲುವುದಿಲ್ಲ! ನಾನು ಇತ್ತೀಚೆಗೆ ನೋಡಿದ ಅತ್ಯುತ್ತಮ ಇರಾನಿ ಸಿನಿಮಾವನ್ನು ನೆನಪಿಸಿಕೊಳ್ಳಬಯಸುತ್ತೇನೆ. "ಶ್ . . ಗರ್ಲ್ಸ್ ಡೋಂಟ್ ಸ್ಕ್ರೀಂ" ಎಂಬ ಈ ಚಿತ್ರ ಹುಟ್ಟಿನಿಂದಲೇ ಅಡಿಯಿಂದ ಮುಡಿಯವರೆಗೆ ಮೈಮುಚ್ಚಿಕೊಂಡೇ ಇರುವ, ಸದಾ ಬುರ್ಕಾ ತೊಡುವ ಹೆಣ್ಣು ಮಕ್ಕಳಿರುವ ಇರಾನಿನಲ್ಲಿ ನಿರಂತರವಾಗಿ ಅಲ್ಲಿನ ಪುಟ್ಟ ಹೆಣ್ಣುಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯವನ್ನು ಎಳೆ ಎಳೆಯಾಗಿ ಬಿಚ್ಚಿಡುತ್ತದೆ. ಅಲ್ಲಿನ ಕಾನೂನಿನಲ್ಲಿ ಅಂತಹ ಗಂಡಸರನ್ನು ಶಿಕ್ಷಿಸಲು ಇರುವ ತೊಡಕನ್ನು ಮನ ಮುಟ್ಟುವಂತೆ ಹೇಳುತ್ತದೆ. ಸಾಮಾಜಿಕ ವಿಕೃತಿಯನ್ನು ಯಾವ ಬಟ್ಟೆಯಿಂದ ಮುಚ್ಚಿಡಲು ಸಾಧ್ಯ ಎಂದು ನಿಟ್ಟುಸಿರಿಡುತ್ತದೆ.

ಯಾವ ಸಮಾಜದಲ್ಲಿ ಹೆಣ್ಣನ್ನು ಹುಲ್ಲೆಯಂತೆಯೂ ಗಂಡನ್ನು ಹುಲಿಯಂತೆಯೂ ಭಾವಿಸಲಾಗಿದೆಯೋ, ಯಾವ ಸಮಾಜದಲ್ಲಿ ಹೆಣ್ಣಿನ ಮೇಲಿನ ಆಕ್ರಮಣಗಳಿಗೆ ಹಲವು ಬಗೆಯ ಸಮ್ಮತಿಗಳನ್ನು ರೂಪಿಸಲಾಗಿದೆಯೋ ಅಲ್ಲಿ ನಡೆಯುವ ಹೆಣ್ಣಿನ ಮೇಲಿನ ಅತ್ಯಾಚಾರಗಳಿಗೆ ನೆಪಗಳನ್ನಲ್ಲ, ಕಾರಣಗಳನ್ನು ಅನ್ವೇಷಿಸಿ ಅದರ ಬೇರನ್ನೇ ಕಿತ್ತುಹಾಕಬೇಕಾಗಿದೆ.



–ಡಾ. ಸಬಿತಾ ಬನ್ನಾಡಿ
(ಅಧ್ಯಾಪಕರು ಮತ್ತು ಸಾಹಿತ್ಯ ವಿಮರ್ಶಕಿ)

# ತಿಳುವಳಿಕೆ ನೀಡದ ಪೋಷಕರೇ ಹೆಚ್ಚು



ನಮ್ಮ ಜೀವವಿಕಸನ ಪ್ರಕ್ರಿಯೆಯಲ್ಲಿ ಎಷ್ಟೋ ಶತಮಾನಗಳ ಕಾಲ ಹೆಣ್ಣು-ಗಂಡುಜೀವಿಗಳ ಪ್ರತ್ಯೇಕತೆಯಿಲ್ಲದೆ ಒಂದೇ ಜೀವಿಯಿಂದಲೇ ಸಂತಾನೋತ್ಪತ್ತಿ ಮತ್ತು ವಂಶಾಭಿವೃದ್ಧಿ ನಡೆಯುತ್ತಿತ್ತಂತೆ. ಆದರೆ ಆಗ ಒಂದೇ ಬಗೆಯ ವರ್ಣತಂತು[ಜೀನ್]ಗಳಿರುವ ಜೀವಿಗಳು ಉತ್ಪತ್ತಿಯಾಗಿ, ಅವುಗಳ ಆರೋಗ್ಯದ ಗುಣಮಟ್ಟ, ಬದುಕುವ ಸಾಮರ್ಥ್ಯ ಅಷ್ಟಾಗಿ ಇರಲಿಲ್ಲವಾದ ಕಾರಣವಾಗಿ ಎಷ್ಟೋ ಕಾಲದ ನಂತರ ಈ ಕೊರತೆಯನ್ನು ತುಂಬಲು ಜೀವ ವಿಕಸನದ ಹಾದಿಯ ಮಧ್ಯದಲ್ಲಿ ಹೆಣ್ಣು-ಗಂಡುಜೀವಿಗಳ ಸೃಷ್ಟಿಯಾಯ್ತು, ಲೈಂಗಿಕ ಕ್ರಿಯೆಯ ಮೂಲಕ ಹುಟ್ಟುವ ಜೀವಿಗಳ, ವೈವಿಧ್ಯತೆ ಮತ್ತು ಆಯಸ್ಸು ಹೆಚ್ಚಿತು. ಆದರೆ ಇಂದು ಅದರ ಜೊತೆಗೇ ಕಾಮವು ಜಟಿಲಗೊಳ್ಳುತ್ತಾ ಹೋಗಿ ವಿಕೃತ ರೂಪವನ್ನು ಪಡೆದು ಕ್ರೂರವಾಗಿ ನಮ್ಮ ಸುತ್ತ ಕುಣಿಯುತ್ತಿದೆ.

ನಮ್ಮ ಇಂದಿನ ಭಾರತದಲ್ಲಿಯಷ್ಟೇ ಅಲ್ಲ ವಿಶ್ವದ ಸಂದರ್ಭವನ್ನು ಗಮನದಲ್ಲಿಟ್ಟುಕೊಂಡು ನೋಡುವುದಾದರೂ ಲೈಂಗಿಕತೆಯ ವೈಪರೀತ್ಯದಿಂದ ಉಂಟಾಗುತ್ತಿರುವ ವಿಕೃತ ಪ್ರಕರಣಗಳು ಹೆಚ್ಚಾಗುತ್ತಿರುವುದು ಮೇಲ್ನೋಟಕ್ಕೇ ಗೋಚರಿಸುತ್ತದೆ. ಇವು ಹಿಂದೆಯೂ ಇತ್ತು ಈಗ ಕಾನೂನಿನ ಅರಿವು ಹೆಚ್ಚಾಗಿ, ದಾಖಲಾಗುವ ಪ್ರಮಾಣ ಜಾಸ್ತಿಯಾಗಿದೆಯಷ್ಟೇ ಎಂಬುದೊಂದು ಮಾತೂ, 'ಇವೆಲ್ಲ ಇಲ್ಲಿ ಅತ್ಯಂತ ಸಹಜ' ಎಂಬ ದನಿಯಲ್ಲಿ ಕೇಳಿಬರುತ್ತಿರುತ್ತದೆ. ಹಿಂದೆಯೂ ಲೈಂಗಿಕ ದೌರ್ಜನ್ಯಗಳು ನಡೆಯುತ್ತಿದ್ದುದು ನಿಜ. ಹಾಗೇ ಇಂದು ಅವುಗಳು ದಾಖಲಾಗುತ್ತಿರುವ ಪ್ರಮಾಣ ಹೆಚ್ಚಾಗಿರುವುದರ ಜೊತೆಗೆ ಅವು ಘಟಿಸುತ್ತಿರುವ ಪ್ರಮಾಣ ಹೆಚ್ಚಾಗಿರುವುದೂ ಅಷ್ಟೇ ನಿಜ.

ಜಾಗತೀಕರಣವೆಂಬ ಮಾರುಕಟ್ಟೆ ಕೇಂದ್ರಿತ ಅಭಿವೃದ್ಧಿ ಹೆಸರಿನ ಬಿರುಗಾಳಿ ಹೆಣ್ಣಿನ ದೇಹವನ್ನು ಸರಕಾಗಿ ವಿಜೃಂಭಿಸುವ ಜೊತೆಗೆ ಲೈಂಗಿಕತೆಯನ್ನು ವಿಕೃತವಾಗಿ ಪ್ರಚೋದಿಸಲಾರಂಭಿಸಿದ ಈ ಎರಡು-ಮೂರು ದಶಕಗಳಿಂದ ಸಭ್ಯತೆಯ ಹೆಸರಿನೊಳಗೆ ಸಾಮಾಜಿಕ ಚೌಕಟ್ಟಿನಲ್ಲಿದ್ದ ಲೈಂಗಿಕತೆ ಲಂಗುಲಗಾಮಿಲ್ಲದಂತಾಗಿದೆ. ಅದರಲ್ಲೂ ದೃಶ್ಯ ಮಾಧ್ಯಮದ ಕೆಲ ವಾಹಿನಿಗಳು, ಅಶ್ಲೀಲ ವೆಬ್‌ಸೈಟ್‌ಗಳು, ಸಿನಿಮಾ, ಲೈವ್ ಶೋಗಳು, ಯಾರು ಯಾವಾಗ ಬೇಕಾದರೂ ಎಲ್ಲೆಂದರಲ್ಲಿ ಇವುಗಳನ್ನು ನೋಡಬಲ್ಲ ಸಾಧ್ಯತೆಗಳಿರುವ ಮೊಬೈಲ್‌ಗಳು ಕೀಳು ಅಭಿರುಚಿಯನ್ನು ನಿರ್ಮಾಣ ಮಾಡುತ್ತಾ ವೇಗದ ವಿಕೃತ ಸಾಮಾಜಿಕ ಬೆಳವಣಿಗೆಯಾಗಿ ನಮ್ಮನ್ನು ಅಪ್ಪಳಿಸುತ್ತಿದೆ.

ಇದಕ್ಕೆ ಕಾನೂನನ್ನು ಬಲಗೊಳಿಸುವುದು, ಶಿಕ್ಷೆಯ ಪ್ರಮಾಣವನ್ನು ಹೆಚ್ಚಿಸುವುದು, ಹೆಣ್ಣುಮಕ್ಕಳ ಚಲನಶೀಲತೆಯನ್ನು ನಿರ್ಬಂಧಿಸುವುದು, ಅವರಿಗೆ ಕರಾಟೆ ಕಲಿಸುವುದು, ವಸ್ತ್ರಸಂಹಿತೆ ಅಳವಡಿಸುವುದು, ಸಾರ್ವಜನಿಕ ಸ್ಥಳಗಳಲ್ಲಿ ಸಿಸಿ ಕ್ಯಾಮೆರ ಅಳವಡಿಸುವುದು, ಎಲ್ಲರನ್ನೂ ಅನುಮಾನದಿಂದ ನೋಡುವಂತೆ ತರಬೇತಿ ನೀಡುವುದು, ಹೆಣ್ಣುಮಕ್ಕಳ ರಕ್ಷಣೆಗಾಗಿ ಹಳ್ಳಿಹಳ್ಳಿಗಳಲ್ಲಿ ಕಾವಲುಪಡೆಗಳನ್ನು ನಿರ್ಮಿಸುವುದು.... ಇವೆಲ್ಲವೂ ಹೊರ ರೂಪದ ತಕ್ಷಣದ ರಕ್ಷಣಾ ಸಿದ್ಧತೆಗಳಷ್ಟೇ. ಇದರಿಂದ ಸಮಸ್ಯೆಗೆ ಮೂಲರೂಪದ ಪರಿಹಾರ ಕಂಡುಕೊಳ್ಳುವುದು ಸಾಧ್ಯವಿಲ್ಲವೆನಿಸುತ್ತದೆ.

ನಿದ್ರೆ, ಹಸಿವು, ಮೈಥುನಗಳು ಮನುಷ್ಯನ ಮೂಲಭೂತವಾದ ಸಹಜ ಪ್ರವೃತ್ತಿಗಳು. ಆದರೆ ಇವುಗಳನ್ನು ಆರೋಗ್ಯಕರವಾದ, ಬಲಾತ್ಕಾರವಿಲ್ಲದ ಸಾಮಾಜೀಕರಣಕ್ಕೆ ಹಂತ ಹಂತವಾಗಿ ಪಳಗಿಸುತ್ತಾ ಹೋಗಬೇಕಾಗಿದೆ. ನಿದ್ದೆ, ಹಸಿವುಗಳೆರಡೂ ವ್ಯಕ್ತಿಯ ವೈಯಕ್ತಿಕ ನೆಲೆಯ ಪೂರೈಕೆಗಳಾದ್ದರಿಂದ ಅದರಿಂದ ಅಪರಾಧಗಳಾಗುವಂಥಹ ತೀವ್ರ ತೆರನಾದ ತೊಂದರೆಯೇನೂ ಸಮಾಜಕ್ಕಿಲ್ಲ. ಆದರೆ ಕಾಮದ ತೃಪಿಗೆ ಇನ್ನೊಂದು ವ್ಯಕ್ತಿಯ ಅವಶ್ಯಕತೆ ಇರುವುದರಿಂದ ಇಲ್ಲಿ ಆ ವ್ಯಕ್ತಿಯ ಇಷ್ಟ-ಒಪ್ಪಿಗೆಯ ಜೊತೆಗೆ, ಸಮಾಜದ ಆಯಾ ಕಾಲದ ನೈತಿಕತೆಯ ಮಿತಿಗಳಿಗೆ ಹಾಗೂ ಕಾನೂನಿನ ಕಟ್ಟುಪಾಡುಗಳಿಗೆ ಒಳಪಡುವುದು ಅನಿವಾರ್ಯವಾಗಿರುತ್ತದೆ. ಆದ್ದರಿಂದ ಇದನ್ನು ಅತ್ಯಂತ ಸಂವೇದನಾಶೀಲವಾಗಿ ನಿರ್ವಹಿಸುವ ಕಲೆಗಾರಿಕೆಯನ್ನೂ ಭಾವನಾತ್ಮಕ ನೆಲೆಯಲ್ಲಿ ಅರಿತುಕೊಳ್ಳುವುದು ಅಥವಾ ರೂಢಿಸಿಕೊಳ್ಳುವುದೂ ಅವಶ್ಯಕ.

ಆದರೆ ಲೈಂಗಿಕತೆ ಹಾಗೂ ಪ್ರೀತಿಯ ಕುರಿತಾದ ನಮ್ಮ ಸಮಾಜದ ಮಡಿವಂತಿಕೆಯ ದೃಷ್ಟಿಕೋನದಿಂದಾಗಿ ಅದನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸುವ ಕಲಿಕೆಯನ್ನು ಅಥವಾ ಅದನ್ನು ಪಳಗಿಸಲು ಬೇಕಾದ ತಿಳಿವಳಿಕೆ ನೀಡುವ ಕೆಲಸಗಳು ನಮ್ಮಲ್ಲಿ ಆಗುತ್ತಿರುವುದು ಅತ್ಯಂತ ಕಡಿಮೆ. ಈ ಕುರಿತು ನಮ್ಮ ಸಮಾಜದಲ್ಲಿ ಮುಕ್ತವಾಗಿ ಮಾತನಾಡುವುದೇ ಅಪರಾಧವೆನ್ನುವಂತೆ ಪರಿಗಣಿಸಲ್ಪಟ್ಟಿರುವಾಗ, ಮಗುವಿನ ಜನನದೊಂದಿಗೇ ಹುಟ್ಟುವ ಲೈಂಗಿಕತೆಯನ್ನು ಅದೊಂದು ಚರ್ಚಿಸಬಾರದ ಅಸಹ್ಯ ವಿಷಯವೆಂದು ಭಾವಿಸಿ ಮಕ್ಕಳಿಗೆ ಆ ಕುರಿತು ಏನನ್ನೂ ತಿಳುವಳಿಕೆ ನೀಡದ ಪೋಷಕರೇ ಹೆಚ್ಚು. ಅದರಲ್ಲೂ ಹದಿಹರೆಯದಲ್ಲಿ ಲೈಂಗಿಕ ಆಕರ್ಷಣೆಗಳು ಅತ್ಯಂತ ಸಹಜವಾದುದೆಂಬುದನ್ನು ತಿಳಿಹೇಳುತ್ತಲೇ ಅದನ್ನು ಆರೋಗ್ಯಕರವಾಗಿ ನಿರ್ವಹಿಸುವ ಕುರಿತೂ ಇಂದು ಕಡ್ಡಾಯವಾಗಿ ಅರಿವು ಮೂಡಿಸುತ್ತಲೇ ಮಕ್ಕಳನ್ನು ಬೆಳೆಸುವ ಅನಿವಾರ್ಯತೆ ಇದೆ.

ಲೈಂಗಿಕ ಅಪರಾಧಗಳಲ್ಲಿ ತೊಡಗುತ್ತಿರುವ ಅಪ್ರಾಪ್ತರ ಸಂಖ್ಯೆ ಇಂದು ದಿಗಿಲು ಹುಟ್ಟಿಸುವಷ್ಟು ಏರಿದೆ. ಅವರ ಶಿಕ್ಷೆಗೆ ವಯಸ್ಸನ್ನು ೧೮ರಿಂದ ೧೬ಕ್ಕೆ ಇಳಿಸುವ ಕುರಿತೂ ಗಂಭೀರ ಚರ್ಚೆಗಳಾಗುತ್ತಿವೆ. ಆದರೆ ಅತ್ಯಾಚಾರವೆಸಗಿದ ಪ್ರಕರಣದಲ್ಲಿ ಅಪರಾಧಿಗಳಾಗಿ ಬಂಧಿಗಳಾಗಿರುವ ಹಲವು ಅಪ್ರಾಪ್ತರೊಡನೆ ನಾನು ಆಪ್ತಸಮಾಲೋಚನೆ ನಡೆಸುವ ಸಂದರ್ಭದಲ್ಲಿ ಹೆಚ್ಚಿನವರು ಅಶ್ಲೀಲ ನೀಲಿ ಚಿತ್ರಗಳನ್ನು ನೋಡಿ ಪ್ರಚೋದನೆ ಪಡೆದಿದ್ದನ್ನು ಹೇಳಿಕೊಳ್ಳುತ್ತಾರೆ. ಮತ್ತೆ ಕೆಲವರು ಹಿರಿಯ ಗೆಳೆಯರ ಕುಮ್ಮಕ್ಕಿನಿಂದ, ಸಂದರ್ಭದ ಅನುಕೂಲ ಪಡೆದು ಅತ್ಯಾಚಾರದಲ್ಲಿ ಭಾಗಿಗಳಾಗಿರುವುದು ಕಂಡುಬರುತ್ತದೆ. ಮೂಲತಃ ಪ್ರಾಣಿವರ್ಗಕ್ಕೆ ಸೇರಿದ ಮನುಷ್ಯ ತನ್ನ ಲೈಂಗಿಕ ಕಾಮನೆಗಳನ್ನು ಸಾಮಾಜಿಕ ಶಿಸ್ತಿಗಾಗಿ ಹತ್ತಿಕ್ಕಿದ್ದರೂ ಸುಪ್ತಪ್ರಜ್ಞೆಯ ಆಳದಲ್ಲಿ ಎಲ್ಲೋ ಅಡಗಿರುವ ಅದು, ಅನುಕೂಲಕರ ಸಮಯ, ಸಂದರ್ಭ, ಪರಿಸರಗಳು, ಎಲ್ಲಕ್ಕಿಂತ ಮುಖ್ಯವಾಗಿ ಪ್ರಚೋದನೆ ಸಿಕ್ಕರೆ ದಾಳಿ ಮಾಡಲು ಕಾಯುತ್ತಿರುತ್ತದೆ. ಹೀಗಾಗಿ ಇಂತಹ ಸಂದರ್ಭಗಳನ್ನು ನಿರ್ಲಕ್ಷಿಸುವ ಅಥವಾ ಮುಚ್ಚಿಡುವ ಬದಲಿಗೆ ಅದನ್ನು ನಿರ್ವಹಿಸುವ, ನಿಗ್ರಹಿಸುವ ಬಗೆಯನ್ನು ಪೋಷಕರು ಮತ್ತು ಶಿಕ್ಷಣ ವ್ಯವಸ್ಥೆ ಹೇಳಿಕೊಡದಿದ್ದರೆ ಇಂತಹ ಅಪರಾಧಗಳಿಂದ ಸಾಮಾಜಿಕ ಅಸಮತೋಲನ ಮತ್ತಷ್ಟು ಹೆಚ್ಚಾಗುವ ಸಾಧ್ಯತೆಯಿರುತ್ತದೆ.

ಮನುಷ್ಯ ಸಹಜ ಪ್ರವೃತ್ತಿಯನ್ನು ಅತ್ಯಂತ ಸಹಜ ರೀತಿಯಲ್ಲಿ ನಿರ್ವಹಿಸಲು ಎರಡು ಬಗೆಯ ಕಾರ್ಯವಿಧಾನಗಳು ಮುಖ್ಯವೆನಿಸುತ್ತವೆ. ವ್ಯಕ್ತಿಯನ್ನು ಸಾಮಾಜೀಕರಣಗೊಳಿಸಲು ಬಾಲ್ಯದಿಂದಲೇ ಅಂದರೆ ವಿದ್ಯಾಭ್ಯಾಸದ ಭಾಗವಾಗಿ ಲೈಂಗಿಕ ಶಿಕ್ಷಣವನ್ನು, ಪರಸ್ಪರ ಗಂಡು-ಹೆಣ್ಣು ಸಮಾನತೆಯ ನೆಲೆಯಲ್ಲಿ ಪ್ರೀತಿಸುವಂತೆ ಮತ್ತು ಗೌರವಿಸಿಕೊಳ್ಳುವಂತೆ ಮನಸು-ಬುದ್ಧಿಗಳನ್ನು ಹದಗೊಳಿಸುವ ಆರೋಗ್ಯಕರ ಶಿಕ್ಷಣವನ್ನು ನೀಡುವುದು ಒಂದು ವಿಧಾನವಾದರೆ, ಮಾಧ್ಯಮದ ಮೂಲಕ ಲೈಂಗಿಕತೆಯನ್ನು ಅಶ್ಲೀಲವಾದ ರೀತಿಯಲ್ಲಿ ಪ್ರಚೋದನೆ ನೀಡಿ ಕೆರಳಿಸುತ್ತಿರುವುದನ್ನು ನಿರ್ಬಂಧಿಸುವುದು ಮತ್ತೊಂದು ವಿಧಾನ. ಈ ದಿಕ್ಕಲ್ಲಿ ಮನಃಶಾಸ್ತ್ರಜ್ಞರು, ಶಿಕ್ಷಣ ತಜ್ಞರು, ಸಮಾಜ ವಿಜ್ಞಾನಿಗಳು ಮತ್ತಷ್ಟು ದಾರಿಗಳನ್ನು ಹುಡುಕ ಬೇಕಾಗಿದೆ.



**-ರೂಪ ಹಾಸನ** (ಲೇಖಕಿ ಮತ್ತು ಸಾಮಾಜಿಕ ಕಾರ್ಯಕರ್ತೆ)

# ಇಡೀ ಸಮಾಜ ಇಂದು ಪ್ರೀತಿ ವಂಚಿತವಾಗಿದೆ



**ಮೊ**ನ್ನೆ ಒಂದು ಸಾಹಿತ್ಯ ಕುರಿತ ಉಪನ್ಯಾಸಕ್ಕೆ ಹೋಗಿದ್ದೆ. ನನ್ನ ಪಕ್ಕದಲ್ಲಿ ಮುವ್ವತ್ತು ಮುವ್ವತ್ತೈದರ ವಯಸ್ಸಿನ ತಾಯಿ ಮತ್ತು ಸುಮಾರು ಎಂಟು ವರ್ಷದ ಮಗಳು ಕುಳಿತಿದ್ದರು. ಗಂಭೀರವಾದ ಭಾಷಣ ಮಗಳಿಗೆ ಬೇಸರ ತಂದಿತ್ತು. ಅಮ್ಮನನ್ನು ಹೊರಗೆ ನಡೆಯುತ್ತಿರುವ ಚಿತ್ರ ಪ್ರದರ್ಶನ ನೋಡಲು ಪೀಡಿಸುತ್ತಿದ್ದಳು. ಅವಳೊಬ್ಬಳೇ ಹೊರಗೆ ಹೋಗಿ ನೋಡಬಹುದಾದ ವಯಸ್ಸಾದರೂ ಹೀಗೇಕೆ ಅಂತ ನಾನು 'ನೀನೊಬ್ಬಳೇ ಹೋಗು. ಅಮ್ಮ ಇಲ್ಲಿ ಇರ್ತಾರೆ' ಅಂದೆ. ಅವಳ ಮುಖದಲ್ಲಿ ಭಯ, ಗಾಬರಿ, ಅವ್ಯಕ್ತ ಕಳವಳ ತುಂಬಿತ್ತು. ಅವಳನ್ನು ಸಮರ್ಥಿಸುತ್ತಾ ಅವಳಮ್ಮ 'ಈಗೆಲ್ಲ ಹೆಣ್ಣು ಮಕ್ಕಳ ಮೇಲೆ ಏನೇನೋ ನಡಿತಾ ಇದೆಯಲ್ಲ, ಅದೆಲ್ಲ ತಿಳಿಸಿ ಹೇಳಿದ್ದರಿಂದ ಅವಳು ನನ್ನ ಬಿಟ್ಟು ಎಲ್ಲೂ ಹೋಗೋಲ್ಲ. ಸ್ವಲ್ಪ ಜಾಸ್ತಿನೇ ಹೆದರ್ತಾಳೆ' ಎಂದರು. ವಿಪರೀತ ಹೆದರುವ ಆ ಮಗುವನ್ನು ನೋಡಿ ಹೇಗಾಯ್ತಲ್ಲ ಎಂದು ಚಿಂತಿಸುವಂತಾಯ್ತು

ಮೊನ್ನೆ ಬೆಂಗಳೂರಿಗೆ ಹೋಗಿದ್ದೆ. ಬಿಟಿಎಸ್‌ನಲ್ಲಿ ಅದೆಷ್ಟೋ ಹುಡುಗಿಯರು, ಎಲ್ಲರೂ ಹೆಚ್ಚೂ ಕಡಿಮೆ ಒಂದೇ ಥರ. ಬಿಗಿ ಜೀನ್ಸ್ ಬಿಗಿಯಾದ ಟಾಪ್, ಕಿವಿಗೆ ಇಯರ್ ಫೋನ್. ತಗುಲಿಸಿಕೊಂಡು ನಿರಂತರ ಮಾತಾಡುತ್ತಾ, ಬಸ್‌ನಲ್ಲಿ ತೂರಾಡುತ್ತಾ ಎಲ್ಲಾದರೂ ಸೀಟ್ ಸಿಕ್ಕಿದರೆ ಕುಕ್ಕರಿಸಿ, ಮೊಬೈಲ್‌ನ ಮೆಸೇಜುಗಳಲ್ಲಿ ಮುಳುಗುತ್ತ ಹೊರಗಿನ ಇರವಿನ ಪರಿವೆ ಇಲ್ಲದವರ ಹಾಗೆ ಇರುವ ಡಜನ್‌ಗಟ್ಟಲೆ ಹುಡುಗಿಯರನ್ನು ಹತ್ತಿರದಿಂದ ಗಮನಿಸಿದೆ. ಗಾಬರಿಯೂ ಆದೆ.

ನಮ್ಮ ಕಾಲೇಜಿಗೆ ಬರುವ ಬಹಳಷ್ಟು ಹುಡುಗಿಯರು ಗ್ರಾಮೀಣ ಪ್ರದೇಶದ, ನಗರದ ಬಡ ಕೂಲಿ ಕಾರ್ಮಿಕರ ಹೆಣ್ಣು ಮಕ್ಕಳು. ಅವರುಗಳನ್ನು ದಾರಿಯಲ್ಲಿ ಹುಡುಗರು, ಗಂಡಸರು, ಮುದುಕರು ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಕಾಡುತ್ತಾರಂತೆ. ಜನ ಸಂದಣಿಯಲ್ಲಿ ಹೋಗಿ ಬರುತ್ತಿರುವಾಗ ಕಿವಿಯಲ್ಲಿ ಅಶ್ಲೀಲವಾದ ಪದಗಳನ್ನು ಉಚ್ಚರಿಸಿ ಕಣ್ಮರೆಯಾಗುತ್ತಾರಂತೆ. ಬಡ ಮುಸ್ಲಿಂ ಹುಡುಗಿಯೊಬ್ಬಳು ಮಂಗಳೂರಿಗೆ ಹೋಗಿ ವಿದ್ಯಾಭ್ಯಾಸ ಮುಗಿಸಿ ದುಡಿಯುವಂತಾಗಿ ತನ್ನ ಕುಟುಂಬವನ್ನು ಪೋಷಿಸುವ ಆಸೆ ಇಟ್ಟುಕೊಂಡಿದ್ದವಳು ಈಗ ಇಂದಿನ ವಿದ್ಯಮಾನಗಳನ್ನು ಗಮನಿಸಿ, 'ಎಲ್ಲೂ ಹೋಗಲ್ಲ ಮೇಡಂ, ಹೊರಗೆ ಹೋಗಲು ಭಯ ಆಗುತ್ತೆ' ಅಂತ ಮೊನ್ನೆ ಹೇಳಿದಳು. ಈ ಎಲ್ಲಾ ಸಂಗತಿಗಳನ್ನು ಗಮನಿಸಿದರೆ ಯಾಕೆ ಹೀಗೆಲ್ಲ ಆಗಿದೆ? ಎಲ್ಲಿ ತಪ್ಪಿದೆ? ಸರಿಪಡಿಸಲಾಗದಷ್ಟು ಪರಿಸ್ಥಿತಿ ದೂರ ಹೋಗಿದೆಯಾ? ಎಂದೆಲ್ಲ ಚಿಂತೆ ಕಾಡುತ್ತದೆ.

ಯಾವುದೇ ಸ್ಕೂಲು, ಕಾಲೇಜುಗಳಲ್ಲಿ ಹೆಣ್ಣು ಮಕ್ಕಳ ಸುರಕ್ಷಿತತೆಯ ಬಗ್ಗೆ ವಿಶೇಷ ಉಪನ್ಯಾಸಗಳು, ಪ್ರಾತ್ಯಕ್ಷಿಕೆಗಳು, ಕರಾಟೆ ತರಬೇತಿಗಳು ನಡೆಯುತ್ತಿವೆ. ಚರ್ಚಾ ಸ್ಪರ್ಧೆ, ಪ್ರಬಂಧ ಸ್ಪರ್ಧೆಯಲ್ಲೂ ಈ ವಿಷಯಗಳದ್ದೇ ಕಾರುಬಾರು. ಗಂಡು ಮಕ್ಕಳಿಗೆ ಈ ಕುರಿತು ಏನಾದರೂ ಅರಿವು ಮೂಡಿಸುವ ಕೆಲಸ ನಡೆಯುತ್ತಿರುವುದು ಕೇಳಿಬರುತ್ತಿಲ್ಲ. ಗಂಡು ಮಕ್ಕಳು ಹೇಗೆ ಬೆಳೆಯುತ್ತಿದ್ದಾರೆ? ಅವರನ್ನು ಬೆಳೆಸುತ್ತಿರುವ ತಾಯಿ, ಶಿಕ್ಷಕಿ, ಅಕ್ಕ ತಂಗಿಯರು, ಅಜ್ಜಿ ಎಲ್ಲ ಅವನ ಸುತ್ತ ಇರುವಾಗಲೂ ಅವನು ಯಾಕೆ ಹೀಗೆ ಬೆಳೆದ? ತಾಯಿಯೊಬ್ಬಳಿಗೆ ತನ್ನ ಮಗನೊಬ್ಬ 'ರೇಪಿಸ್ಟ್' ಎಂದಾಗ ಆಗುವ ಸಂಕಟಗಳು ಹೇಗಿರಬಹುದು?

ಹಸಿವು, ನಿದ್ರೆ, ಕಾಮ ಇವು ಮನುಷ್ಯನ ಮೂಲಭೂತ ಬಯಕೆಗಳು. ಆದಿ ಮಾನವ ನಾಗರೀಕನಾಗುತ್ತಾ ಬಂದಂತೆ ಈ ಎಲ್ಲಾ ಬಯಕೆಗಳನ್ನು ನಿಯಂತ್ರಿಸಲು ಅನೇಕ ಕಟ್ಟುಪಾಡುಗಳನ್ನು ಹಾಕಿಕೊಂಡ. ಸಂಯಮವನ್ನು ಬೆಳೆಸಿಕೊಂಡ. ಸಮಾಜ ಅದನ್ನು ಒಪ್ಪಿ ಗೌರವಿಸುತ್ತಿತ್ತು. ಎರಿಕ್ ಫ್ರಾಮ್ ಎಂಬ ಮನಶ್ಶಾಸ್ತ್ರಜ್ಞನ ಪ್ರಕಾರ ಪ್ರೀತಿ ವಿಶ್ವಾಸದ ಕೊರತೆಯೇ ಮನುಷ್ಯ ಎಸಗುವ ಎಲ್ಲ ಅಪರಾಧಗಳಿಗೂ ಕಾರಣ. ಅವನ ಪ್ರಕಾರ ಇಡೀ ಸಮಾಜ ಇಂದು ಪ್ರೀತಿಯಿಂದ ವಂಚಿತವಾಗಿದೆ. ಮಗುವೊಂದು ಚಿಕ್ಕ ವಯಸ್ಸಿನಿಂದಲೇ ತನ್ನ ಸುತ್ತಲಿನ ಪರಿಸರವನ್ನು ಪ್ರೀತಿಸತೊಡಗಿದರೆ, ಅಂದರೆ ಸೂರ್ಯಾಸ್ತ, ಸೂರ್ಯೋದಯ, ಹಕ್ಕಿ ಹಾಡು, ಹೂವು, ಗಿಡ, ಮರ, ನದಿ, ಬೆಟ್ಟ, ಇವುಗಳನ್ನು ನೋಡಿ ಆನಂದಿಸುವ ಸೌಂದರ್ಯವನ್ನು ಸವಿಯುವ ಮನಸ್ಥಿತಿಯನ್ನು ಬೆಳೆಸಿಕೊಂಡಲ್ಲಿ ಅವುಗಳನ್ನು ಅವನು ಹಾಳುಗೆಡವಲಾರ ಎನ್ನುತ್ತಾನೆ. ಇಂದಿನ ಯಾಂತ್ರಿಕ ಬದುಕಿನಲ್ಲಿ ಮಗು ಈ ರೀತಿ ಬೆಳೆಯುತ್ತಿಲ್ಲ. ನಿಜವಾದ ಆನಂದ, ಸುಖ ಯಾವುದೆಂದು ಈ ಪೀಳಿಗೆಗೆ ಗೊತ್ತಾಗುತ್ತಿಲ್ಲ, ಮುಖ್ಯವಾಗಿ ಯುವ ಜನಾಂಗ ಸಾಹಿತ್ಯ, ಸಂಗೀತ, ಸಂಸ್ಕೃತಿಯಿಂದ ದೂರ ಉಳಿದಿರುವುದು.

ಸಾಹಿತ್ಯ ಕೃತಿಯೊಂದು ತನಗರಿವಿಲ್ಲದಂತೆ ಏನನ್ನೋ ಬೋಧಿಸುತ್ತಿರುತ್ತದೆ. ಅದರ ಸಂಸರ್ಗದಿಂದ ವ್ಯಕ್ತಿಯೊಬ್ಬ ತನಗೇ ತಿಳಿಯದಂತೆ ಪರಿವರ್ತಿತನಾಗುತ್ತಿರುತ್ತಾನೆ. ಸಂಗತಿಯೊಂದನ್ನು ಮತ್ತೊಂದು ಆಯಾಮದಿಂದ ನೋಡುವ ಮಾರ್ಗದರ್ಶನ ಸಿಗುತ್ತದೆ.

ಮಕ್ಕಳು ಇಂದು ಬೆಳೆಯುತ್ತಿರುವ ವಾತಾವರಣವೇ ಹಿಂದಿನದಕ್ಕಿಂತ ಭಿನ್ನವಾಗಿದೆ. ಚಿಕ್ಕ ವಯಸ್ಸಿನಲ್ಲೇ ಅಂತರ್ಜಾಲ ಮೊಬೈಲ್‌ಗಳ ಬಳಕೆ ಮಾಡುತ್ತಿರುವುದು. ಅನೇಕ ವಿಡಿಯೋ ಗೇಮ್‌ಗಳು ವಿಕೃತಿಯಿಂದ ಕೂಡಿದೆಯಂತೆ. ಯಾರನ್ನೋ ಅಟ್ಟಿಸಿಕೊಂಡು ಹೋಗಿ ಹುಡುಕಿ ನೋಡಿ ಕೊಲ್ಲುವ ಅಸಹಾಯಕತೆಯಿಂದ ಕಿರುಚುವುದನ್ನು ಕೇಳಿ ಆನಂದಿಸುವ ಆಟಗಳೆಲ್ಲ 'ಅಲ್ಲಿವೆ'ಯಂತೆ. ಇವುಗಳ ಮಧ್ಯೆ ಬೆಳೆಯುವ ಮಗುವಿನ ಮನಸ್ಸೊಂದು ಹೇಗೆ ರೂಪುಗೊಳ್ಳಬಹುದು? ಅಮೆರಿಕಾದಲ್ಲಿ ಹದಿಮೂರು ವರ್ಷ ತುಂಬುವ ಹೊತ್ತಿಗೆ ಮಗು ಒಂದೂವರೆ ಲಕ್ಷಕ್ಕೂ ಹೆಚ್ಚು ಅತ್ಯಾಚಾರ, ಕೊಲೆ ಇತರ ಹಿಂಸಾ ದೃಶ್ಯಗಳನ್ನು ನೋಡಿರುತ್ತದಂತೆ! ಭಾರತದಲ್ಲೂ ಈಗ ಈ ಪರಿಸ್ಥಿತಿ ಬಂದಿದೆ. ಇದೆಲ್ಲ ಗಮನಿಸಿದರೆ ಸಮಾಜದ ರಚನೆಯಲ್ಲಿ ಆಗುತ್ತಿರುವ ಪಲ್ಲಟವೇ ಕಾರಣವಿರಬಹುದು ಎಂದೂ ಅನಿಸುತ್ತದೆ.

ಇನ್ನು ಇತ್ತೀಚೆಗೆ ನಡೆದ ಬಹಳಷ್ಟು ಅತ್ಯಾಚಾರದ ಪ್ರಸಂಗಗಳಲ್ಲಿ ಅತ್ಯಾಚಾರಿಗಳು ಮದ್ಯಪಾನಿಗಳಾಗಿರುವುದು, ನಂತರ ಅವರು ಪಶ್ಚಾತ್ತಾಪಕ್ಕೊಳಗಾದ ಉದಾಹರಣೆಯೂ ಇದೆ. ಮದ್ಯಪಾನಿಯೊಬ್ಬ ವಿವೇಚನೆಯನ್ನು ಕಳೆದುಕೊಂಡು ಅಪರಾಧಿಯಾಗಿ ಮಾರ್ಪಡುತ್ತಾನೆ. ಮದ್ಯಪಾನದ ನಿಯಂತ್ರಣ ಅತಿ ಅಗತ್ಯಗಳಲ್ಲಿ ಒಂದಾಗಿದೆ.

ಇನ್ನು ಶೈಕ್ಷಣಿಕ ಸಂಸ್ಥೆಗಳು ಶಿಕ್ಷಣದ, ಪಠ್ಯಕ್ರಮದ ವಿಷಯಕ್ಕೆ ಬಂದರೆ ಅನೇಕ ಖಾಸಗೀ ಸ್ಕೂಲುಗಳು ಮಕ್ಕಳಿಗೆ ಈಜು, ಕರಾಟೆ, ಜಿಮ್, ಕುದುರೆ ಸವಾರಿಯಂತಹ ತರಬೇತಿಯನ್ನು ಕೊಡುತ್ತೇವೆಂದು ಪೋಷಕರಿಂದ ಭಾರೀ ಫೀ ವಸೂಲಿ ಮಾಡಿರುತ್ತವೆ. ಅದಕ್ಕೆ ತರಬೇತುದಾರರನ್ನು ಆಯ್ಕೆ ಮಾಡುವಾಗ ಅವರ ಹಿನ್ನೆಲೆ ನೋಡದೆ ಕೇವಲ ಅವರ ವೃತ್ತಿ ಕೌಶಲವನ್ನೇ ಪರಿಗಣಿಸುತ್ತಾರೆ ಮತ್ತು ಶಾಲಾ ಸಮಯದ ನಂತರ ಅಥವಾ ಮೊದಲು ಮಕ್ಕಳಿಗೆ ಅತಿ ಸಮೀಪದಲ್ಲಿ ಬಹಳ ಹೊತ್ತು ಕಾಲ ಕಳೆಯುವ ಇವರು ಈ ರೀತಿಯ ಅಪರಾಧವನ್ನೆಸಗುವುದು ಸರ್ವೆ ಸಮಾನ್ಯ. ಜೊತೆಗೆ ಆತ ಮದ್ಯವ್ಯಸನಿಯೂ ವಿಕೃತ ಮನಸ್ಥಿತಿಯವನೂ ಆಗಿದ್ದರಂತೂ 'ವಿಬ್ಗಯಾರ್' ಶಾಲೆಯಲ್ಲಿ ನಡೆದ ಸಂಗತಿಯಂತೆ ಹೇಳುವುದೇ ಬೇಡ. ಒಟ್ಟಿನಲ್ಲಿ ಈ ಮೇಲಿನ ಎಲ್ಲ ಸಂಗತಿಗಳನ್ನು ಗಮನಿಸಿದರೆ ಒಂದು ಕಡೆ ವಿಪರೀತ ಹೆದರಿ ಭಯಬೀಳುತ್ತಿರುವ ಪೀಳಿಗೆಯಿಂದ ಏನನ್ನು ನಿರೀಕ್ಷಿಸಬಹುದು? ಇನ್ನೊಂದು ಕಡೆ ನಿರ್ಭಯವಾಗಿ ಯಾವುದನ್ನೂ ಗಮನಿಸದ ಒಂದು ಪೀಳಿಗೆಯೂ ಇದೆ. ಏನೂ ಅರಿಯದ ಮುಗ್ಧ ಹೆಣ್ಣು ಮಕ್ಕಳು ಮನೆಯಲ್ಲಿ, ಶಾಲೆಯಲ್ಲಿ ಮತ್ತು ಹೊರಗಡೆ ನೋವು ತಿನ್ನುತ್ತಾ ಒಳಗೇ ನುಂಗಿಕೊಂಡವರೂ ಇದ್ದಾರೆ.



ಈ ಕುರಿತು ಸಮಾಜಶಾಸ್ತ್ರಜ್ಞರೂ, ಮನಶ್ಶಾಸ್ತ್ರಜ್ಞರೂ, ಶಿಕ್ಷಣ ತಜ್ಞರೂ, ರಾಜಕೀಯ ಧುರೀಣರೂ, ಪೋಷಕರೂ ಯೋಚಿಸಿ ಕಾರ್ಯರೂಪಕ್ಕೆ ತರುವ ಅನೇಕ ಸವಾಲುಗಳಷ್ಟೇ ನಮ್ಮ ಮುಂದೆ ಇದೆ ಎಂದಷ್ಟೇ ಹೇಳಬಹುದು.

**– ಮಂಜುಳಾ ರಾಜು** (ಅಧ್ಯಾಪಕಿ ಮತ್ತು ಲೇಖಕಿ

# ತಿರುಗಿ ನಿಂತವು ಕೇಳಿದ್ದ ಪ್ರಶ್ನೆಗಳು...




**ಪ್ರ**ತಿ ಶಕ್ಷಣಿಕ ವರ್ಷದ ಮೊದಲಲ್ಲಿ ಪಿಯುಸಿ ತರಗತಿಗಳು ಆರಂಭವಾಗುವ ದಿನಗಳಲ್ಲಿ ನಮ್ಮ ವಿದ್ಯಾರ್ಥಿಗಳನ್ನು ನೋಡುವುದೇ ಒಂದು ಸಂಭ್ರಮ. ಶಾಲೆಯ 'ಸುರಕ್ಷಿತ' ವಾತಾರವಣದಿಂದ ಹೊರಬಂದವರಂತೆ, ಕಾಲೇಜು 'ಮೆಟ್ಟಿಲೇರಿದ್ದೇವೆ'ಂಬ ಸಡಗರದಲ್ಲಿರುವ ಆ ಹದಿವಯಸ್ಸಿನವರ ಅದರಲ್ಲೂ ನಮ್ಮ ಹಳ್ಳಿಗಳ ಹೆಣ್ಣುಮಕ್ಕಳ ಮುಖದಲ್ಲಿ ಬೆಳಕು ಮೂಡಿರುತ್ತದೆ. ಆದರೂ, ಇಂದಿಗೂ ನಮ್ಮ ಹಳ್ಳಿಗಳಲ್ಲಿ ಹೆಣ್ಣು ಮಕ್ಕಳ ವಿದ್ಯಾಭ್ಯಾಸ ಸದಾ ತೂಗುಯ್ಯಾಲೆಯಲ್ಲಿಯೇ ಸಾಗುತ್ತಿರುತ್ತದೆ ಎನ್ನುವುದು ವಿಪರ್ಯಾಸ !

ಎಸ್‌ಎಸ್‌ಎಲ್‌ಸಿ ಮುಗಿಸಿ ಪಿಯುಸಿ ಸೇರುವ ಕನಸು ಬಹಳಷ್ಟು ಹೆಣ್ಣುಮಕ್ಕಳ ಪಾಲಿಗೆ ನನಸಾಗುತ್ತಲೇ ಇಲ್ಲ. ಹಲವು ಸಂದರ್ಭಗಳಲ್ಲಿ ದಾಖಲಾಗುವ ವಿದ್ಯಾರ್ಥಿಗಳಿಗಿಂತ ಹೆಚ್ಚು ಆಸಕ್ತರು, ಜಾಣರು, ಪ್ರತಿಭಾವಂತ ಹೆಣ್ಣುಮಕ್ಕಳು ಅದಾಗಲೇ ಗಂಡು ಹೆತ್ತವರ ಮನೆಯ 'ಮುದ್ದಿನ' ಸೊಸೆಯಾಗಿ, ಅಡುಗೆ ಕೋಣೆಯ ಉರಿವ ಒಲೆಯ ಮುಂದೆ ಬೆಂದು, ಅರಳುವ ಮುನ್ನವೇ ಬಾಡಿ ಹೋಗಿರುತ್ತಾರೆ. ಇತ್ತ, ದಾಖಲಾದವರದ್ದೇನೂ ಮಹಾಭಿನ್ನವಾದ ಕತೆಯೇನಲ್ಲ. ಅವರಲ್ಲೂ ಹೆಚ್ಚು ಮಂದಿಯದ್ದು ಕೇವಲ ಎರಡು ವರ್ಷಗಳ ಬೋನಸ್ ಅಷ್ಟೇ. ಪಿಯುಸಿ ನಂತರದ ವಿದ್ಯಾಭ್ಯಾಸ ಮತ್ತೆ ಗಗನ ಕುಸುಮವೇ. ಇತ್ತೀಚೆಗೆ ಕೆಲವು ನಗರ ವಾಸಿಗಳು, ವಿದ್ಯಾವಂತ ಪೋಷಕರೂ ತಮ್ಮ ಹೆಣ್ಣು ಮಕ್ಕಳನ್ನು 'ಆದಷ್ಟು ಬೇಗ' ಗಂಡನ ಮನೆಗೆ ಕಳುಹಿಸುವ ಜವಾಬ್ದಾರಿಯನ್ನು ನಿಭಾಯಿಸತೊಡಗಿದ್ದಾರೆ. ಯಾಕಿಷ್ಟು ಬೇಗ? ಎಂಬ ಪ್ರಶ್ನೆಗೆ ಉತ್ತರಗಳು ಸಿದ್ಧವಾಗಿಯೇ ಇರುತ್ತವೆ. ಮೊದಲನೆಯ ಮತ್ತು ಸುಲಭವಾದ ಉತ್ತರ "ಇದೇನು ಬಾಲ್ಯ ವಿವಾಹವಲ್ಲ. ಹದಿನೆಂಟು ತುಂಬಿ ವಾರದ ಮೇಲಾಯ್ತು" ಎನ್ನುವುದು ಸಿದ್ಧ ಉತ್ತರ. ಎರಡನೆಯದ್ದು, "ನಮಗೆ ಮೂರೂ ಹೆಣ್ಣು. ಎಷ್ಟು ದಿನ ಅಂತ ಕಾಯೋದು" ಎಂಬುದೋ ಅಥವಾ "ಈಗೀಗ ಕಾಲ ಸರಿಯಿಲ್ಲ. ಕುತ್ತಿಗೆಗೆ ತಾಳಿ ಬಿದ್ದರೆ ಹೆಣ್ಣಿಗೆ ಬೇಲಿ ಇದ್ದಂತೆ"ಎಂದೊ ಸಲೀಸಾಗಿ ಸಿನಿಮಾ ಮಾದರಿಯಲ್ಲಿ ಹೇಳುವುದು. ಹದಿನೆಂಟು ತುಂಬುವ ಗಳಿಗೆಯನ್ನೇ 'ಸುಮುಹೂರ್ತ'ವಾಗಿಸಿಕೊಂಡು; ಆಕೆಯ ಅಭಿಪ್ರಾಯಕ್ಕೂ ಕಾಯದೆ ಲಗ್ನ ಕಟ್ಟಿಸ ಹೊರಡುವ ಮನಸ್ಸುಗಳಲ್ಲಿ ನಿತ್ಯವೂ ಅತ್ಯಾಚಾರಿಗಳು ಗೋಚರಿಸುತ್ತಿರುತ್ತಾರೆ.

ಈ ಮದುವೆಗಳು ಬಾಲ್ಯವಿವಾಹದಡಿಯಲ್ಲೂ ಸೇರುವುದಿಲ್ಲ; ಮಾನವ ಹಕ್ಕುಗಳ ಅಡಿಯಲ್ಲೂ ಸೇರುವುದಿಲ್ಲವಾದ್ದರಿಂದ 'ಕೆಲಸ' ಅತ್ಯಂತ ಸುಲಭವಾಗಿ, ಆದಷ್ಟು ಬೇಗವೇ ಆಗಿ ಹೋಗುತ್ತದೆ. ಹುಡುಗಿಯೊಬ್ಬಳಿಂದ ಹಾಳಾಗುತ್ತಿರುವ ತನ್ನ ಮಗನನ್ನು ರಕ್ಷಿಸುವ ಸಲುವಾಗಿ ತಂದೆಯೊಬ್ಬರು ತಮ್ಮ ೨೧ ತುಂಬಿದ ಮಗನಿಗೆ ವಾರದ ಹಿಂದಷ್ಟೆ ೧೮ ತುಂಬಿದ ಹುಡುಗಿಯನ್ನು ಸೊಸೆಯಾಗಿ 'ತರುತ್ತಾರೆ'.

ಕುಟುಂಬದಲ್ಲೇ ಮೊದಲನೆಯವಳಾಗಿ ಅಕ್ಷರ ಕಲಿಯ ಬರುವ ಹೆಣ್ಣು ಮಗಳಿಗೆ ತರಗತಿಗಳಲ್ಲಿ ಪಠ್ಯಕ್ಕೆ ಪೂರಕವಾಗಿ ಹೇಳುವ ಅದೆಷ್ಟೊ ವಿಚಾರಗಳು ಅಚ್ಚರಿಯನ್ನೂ-ಗೊಂದಲವನ್ನೂ ಒಟ್ಟಿಗೇ ತಂದು ನಿಲ್ಲಿಸುತ್ತದೆ. ಯಾವುದೇ ಕ್ಷಣದಲ್ಲೂ ತಮ್ಮ ವಿದ್ಯಾಭ್ಯಾಸ ಮೊಟಕುಗೊಳ್ಳುವ ಆತಂಕದಲ್ಲಿರುವ ಆಕೆ ತರಗತಿಯ ಸೀಮಿತ ಆಗು ಹೋಗುಗಳನ್ನೇ ಬೆರಗುಗಣ್ಣಾಗಿ ಅನುಭವಿಸುತ್ತಿರುತ್ತಾಳೆ. ಹೀಗಿರುವಾಗ ಜಗತ್ತಿನ ಆಗುಹೋಗುಗಳು-ಸ್ಥಿತ್ಯಂತರಗಳು-ಬದಲಾವಣೆಗಳು ಅವಳನ್ನು ತಲುಪಲು ಜಟ್ ಯುಗದಲ್ಲಿಯೂ ಶತಮಾನಗಳೇ ಹಿಡಿದೀತು!

ದಿನಬೆಳಗಾದರೆ ಅತ್ಯಾಚಾರ-ಆತ್ಮಹತ್ಯೆಗಳು ಧಾರಾವಾಹಿಗಳೆಂಬಂತೆ ಸುದ್ದಿ ಮಾಧ್ಯಮಗಳ ತುಂಬೆಲ್ಲ ಮನರಂಜನಾ ಕಾರ್ಯಕ್ರಮಗಳಂತೆ ಬಿಂಬಿತವಾಗುತ್ತಿರುವ ಈ ಹೊತ್ತಿನಲ್ಲಿ, ನಿಲ್ಲಿಸಿ ಪ್ರಶ್ನೆ ಕೇಳಿದರೂ ಸಾಕು ನಾಚಿ ನೀರಾಗುವ ಈ ಹೆಣ್ಣು ಮಕ್ಕಳಲ್ಲಿ ಅದೆಂತಹ ಸವಾಲುಗಳನ್ನು ಒಡ್ಡುತ್ತಿರಬಹುದೆಂದು ಕೆಲವೊಮ್ಮೆ ಊಹಿಸಲೂ ಸಾಧ್ಯವಾಗುವುದಿಲ್ಲ.

ವಿದ್ಯಾಭ್ಯಾಸದಿಂದ ಬರಬಹುದಾದ ಸಾಮಾನ್ಯ ಜ್ಞಾನ- ತಿಳುವಳಿಕೆ-ಸ್ವಾಭಿಮಾನ ಮತ್ತು ಸ್ವಾವಲಂಬನೆಯ ಬದಲಾಗಿ ಹಲವು ಬಾರಿ ನಮ್ಮ ಹೆಣ್ಣುಮಕ್ಕಳು ಟಿವಿ ಧಾರಾವಾಹಿಯ ಸೇಡು ತೀರಿಸಿಕೊಳ್ಳಲು ಮನೆ ಮುರಿಯುವ ಕಥಾನಾಯಕಿಯನ್ನೋ ಅಥವಾ ಚಲುವಿನ ಚಿತ್ತಾರ ಸಿನಿಮಾ ನಾಯಕಿಯಂತೆಯೋ ಆಲೋಚಿಸತೊಡಗುತ್ತಾರೆ. ಹಟ್ಟಿ ಬಿಟ್ಟು ಆಚೆ ಹೆಜ್ಜೆ ಇಡುವುದೂ ಸವಾಲಾಗಿರುವ ಇವರಿಗೆ ಕ್ಷಣ ಕ್ಷಣಕ್ಕೂ ಪ್ರಶ್ನೆಗಳು ಎದುರಾಗುತ್ತವೆ.

ಪ್ರತಿ ವರ್ಷ ಪರೀಕ್ಷೆಗಳ ಸಮಯಕ್ಕೆ ಸರಿಯಾಗಿ ಒಬ್ಬಿಬ್ಬರಾದರೂ ಪೋಷಕರು 'ಮುಹೂರ್ತ' ನಿಗದಿ ಮಾಡಲು ಪರೀಕ್ಷಾ ದಿನಾಂಕ ಖಾತರಿ ಮಾಡಿಕೊಳ್ಳಲು ಕಾಲೇಜಿಗೆ ಎಡತಾಕುವುದು ನಮಗೂ ಈಗೀಗ ವಾಡಿಕೆಯಂತಾಗಿದೆ! ಪೋಷಕರ ಸಭೆಯಲ್ಲಿ ಅವಿರತವಾಗಿ ನಾವು ಮಾಡುವ ಯಾವುದೇ ಮನವಿಗಳು ಈ ವಿಷಯದಲ್ಲಿ ಪುರಸ್ಕೃತವಾಗುವುದಿಲ್ಲ. ಬದಲಾಗಿ "ಹುಡುಗನೋ-ಹುಡುಗನ ಮನೆಯವರೋ ಬೇಕಾದರೆ ಮುಂದಕ್ಕೆ ಓದಿಸಿಕೊಳ್ಳುತ್ತಾರೆ" ಎಂದು ನಿರಾಯಾಸವಾಗಿ ಹೇಳಿ ನಮ್ಮ ಬಾಯಿ ಮುಚ್ಚಿಸುತ್ತಾರೆ. ಹಾಗಾಗಿ ವಿತರಣೆಯಾಗಬೇಕಾದ ಎಷ್ಟೋ ಹೆಣ್ಣುಮಕ್ಕಳ ಅಂಕಪಟ್ಟಿಗಳು ಕಾಲೇಜಿನ ಕಪಾಟುಗಳಲ್ಲೇ ಭದ್ರವಾಗಿ ಬಂದಿಯಾಗಿರುತ್ತವೆ. ಮುಂದಿನ ಪರೀಕ್ಷೆಯೊಳಗೆ ಬಾಣಂತಿ ಚೀಟಿಗೆ ಅಟೆಸ್ಟೇಷನ್ ಮಾಡಿಸಿಕೊಳ್ಳಲಷ್ಟೇ ಅವರು ಕಾಲೇಜಿಗೆ ಬರುವುದು.

ಜಗತ್ತೇನೋ ನಾಗಾಲೋಟದಲ್ಲಿ ಓಡುತ್ತಿದೆ. ಪ್ರಪಂಚವೇ ಒಂದು ಹಳ್ಳಿಯಂತಾಗಿಯೂ ಅದೆಷ್ಟೋ ವರ್ಷಗಳಾಗಿದ್ದಿರಬೇಕು. ಆದರೆ, ಹೆದ್ದಾರಿಗಳಿಂದಿಳಿದು ಒಳ ಹಾದಿಗಳ ಜಾಡು ಹಿಡಿದು ಹೊರಟಾಗ ಹಳ್ಳಿಗಳ ವಿರಾಟ್‌ರೂಪ ದರ್ಶನವಾಗುತ್ತದೆ. ಜಾಗತೀಕರಣ, ಉದಾರೀಕರಣ ಎಂಬೆಲ್ಲ ವ್ಯಾಖ್ಯಾನಗಳು ಹೊಸ ಅಧ್ಯಾಯಗಳಾಗಿ ತೆರೆದುಕೊಳ್ಳುತ್ತಿರುವಾಗ ವಾಸ್ತವದ ನೆಲೆಗಟ್ಟಿನಲ್ಲಿ ನಿಂತು ನೋಡಿದಾಗ ಮಾತ್ರ ಅಲ್ಲಿ ಪ್ರತಿಯೊಂದೂ ಗೋಜಲಾದ ದಾರದುಂಡೆಯಂತೆ ಬಿಡಿಸಲಾಗದ ಕಗ್ಗಂಟಾಗಿಯೇ ಉಳಿದಿರುವುದು ಕಾಣತೊಡಗುತ್ತದೆ.

ದೆಹಲಿಯ ನಿರ್ಭಯ ಪ್ರಕರಣದ ನಂತರ ನಮ್ಮ ಸುತ್ತಲೂ ಕತ್ತಲಾವರಿಸಿದಂತೆ ಭಾಸವಾಗುತ್ತಿದೆ. ಹೆಣ್ಣುಮಕ್ಕಳು ಇನ್ನಷ್ಟು ಹೆಚ್ಚು 'ಮಾರ್ಯಾದೆ' ಕಾಯ್ದುಕೊಳ್ಳುವಂತೆಯೂ ಇದು ಬೆರಳು ಮಾಡುತ್ತಿರಬಹುದೇ?

ತಾಯಿಯಾಗಿ, ಹೆಂಡತಿಯಾಗಿ ಬೇಕಾಗುವವಳು ಮನೆಯ ಮಗಳಾಗಿಯೂ ಬೇಕಾಗುವಂತಾದಾಗ ಬದಲಾವಣೆಯ ಗಾಳಿ ಬೀಸುತ್ತದೆ. ಊರು ದಾಟಿ ಬರುವಾಗ ದಾರಿಯಲ್ಲಿ ಪುಂಡು ಹುಡುಗರು ಗೇಲಿ ಮಾಡುವುದು, ಮನೆಯಲ್ಲಿ ತಿಳಿದರೆ ಅಂದೇ ವಿದ್ಯಾಭ್ಯಾಸಕ್ಕೆ ಕೊಡಲಿಯ ಏಟು ಎಂದು ಕಣ್ಣೀರಾಗುವ ಹೆಣ್ಣುಮಕ್ಕಳನ್ನು ಸಂತೈಸುವುದು ಸುಲಭವಾದೀತು.

ಹೀಗೆಲ್ಲ ಬರೆಯುತ್ತಿದ್ದಾಗ ವಿಜಯಾ ದಬ್ಬೆಯವರ ಸೀತೆಯನ್ನು ಕುರಿತ 'ತಿರುಗಿ ನಿಂತ ಪ್ರಶ್ನೆ' ಎಂಬ ಪದ್ಯದ ಕೊನೆಯ ಸಾಲುಗಳು ನೆನಪಾದವು.

"ನನ್ನ ಪ್ರಶ್ನೆಗಳಿಗೆಲ್ಲ
ಅವಳ ಭೂಮಿ ತೂಕದ ಮೌನ.
ಕತ್ತೆತ್ತಿ ನೋಡಿದರೂ
ಅವಳ ಕಣ್ಣ ಭಾವಗಳು
ಶಬ್ದವಾಗದೆ ನನ್ನ ಕಣ್ಣಿಗಿಳಿದು
ತಿರುಗಿ ನಿಂತವು ಕೇಳಿದ್ದ ಪ್ರಶ್ನೆಗಳು'.



**-ಎನ್. ಆರ್. ಸ್ನೇಹಾ**(ಅಧ್ಯಾಪಕಿ ಮತ್ತು ಭರತನಾಟ್ಯ ಕಲಾವಿದೆ)

# ‘ಅವರು’ ನಮ್ಮೊಳಗಡೆಯೂ, ಇದ್ದಾರೆ..




ಅತ್ಯಾಚಾರ ಹೆಚ್ಚಿರುವುದು ನಿಜ. ಮಾಧ್ಯಮ ಸೃಷ್ಟಿ ಎಂಬುದೂ ನಿಜ. ಆದರೆ ಈ ನಿಜಗಳ ನಡುವೆಯೂ ತುಂಬಾ ಸಂಕೀರ್ಣತೆಯಿದೆ. ಯಾವುದು ಅತ್ಯಾಚಾರ’, ಯಾವುದು ಅಲ್ಲ ಎಂಬುದರ ಬಗ್ಗೆ ನಿಖರವಾದ ವ್ಯಾಖ್ಯೆಯೇ ಕಷ್ಟ. ನಮ್ಮ ಗ್ರಾಮಗಳ ಕಡೆ ಜಮೀನ್ದಾರರು, ಗೌಡರು ಬಯಸಿದಾಗ ಹೆಣ್ಣಾಳುಗಳು ‘ಲೈಂಗಿಕ ಸೇವೆ’ ಯನ್ನು ಒದಗಿಸಬೇಕಾಗುತ್ತಲೇ ಇತ್ತು. ಇದು ‘ಗೌಡಿಕೆ’ಯ ಒಂದು ಭಾಗವಾಗಿತ್ತು. ಹೆಂಡತಿಯರು ಹೆರಿಗೆಗೆ ಹೋದಾಗ ಬಾಣಂತನದ ಸಮಯದಲ್ಲಿ ಮನೆಗೆಲಸದವರಿಗೇ ಬಡ್ತಿ ಸಿಗುತ್ತಿತ್ತು. ಇದು ಕೂಡ ಅತ್ಯಾಚಾರವೇ ಎಂದು ನನಗೆ ತುಂಬಾ ತಡವಾಗಿ. ಗಂಡಸರ ಲೈಂಗಿಕ ಬಯಕೆ ವರ್ತನೆಗಳಲ್ಲೇ ಸಹಜವಾಗಿಯೇ ಒಂದು ರೀತಿಯ arbitrariness ಇದೆ. ಇದೊಂದು ಸಹಜವಾದ ವಿದ್ಯಮಾನ ಎಂದು ಗಂಡಸರು ಹೆಂಗಸರು ಇಬ್ಬರೂ ಒಪ್ಪಿಕೊಂಡಿರುವುದರಿಂದ, ಈ ರೀತಿಯ ವ್ಯಾಖ್ಯಾನದಿಂದ ನಮ್ಮಗಳ ಮನಸ್ಸು ಹೊರಬರುವ ತನಕ ಅತ್ಯಾಚಾರದ ಪ್ರಮಾಣ ಮತ್ತು ವ್ಯಾಪ್ತಿ ನನಗೆ ಸರಿಯಾಗಿ ಗೊತ್ತಾಗುವುದಿಲ್ಲ. ಬಾಲಿವುಡ್‌ನಲ್ಲಿ ಯಶಸ್ವಿಯಾಗುವ ಒಬ್ಬ ಕರೀನಾ ಕಪೂರ್, ಒಬ್ಬ ಪ್ರಿಯಾಂಕಾಗೆ ಪೂರಕವಾಗಿಯೋ ಎಂಬಂತೆ ಸಾವಿರಾರು ಹೆಣ್ಣು ಮಕ್ಕಳು ಲೈಂಗಿಕವಾಗಿ ದಬ್ಬಾಳಿಕೆಗೆ ಒಳಗಾಗುವುದರ ಜೊತೆಗೆ, ತಾವು ಕಷ್ಟಪಟ್ಟು ಸಂಪಾದಿಸಿದ ಹಣ, ಸಂಪತ್ತನ್ನು ಕೂಡ ಕಳೆದುಕೊಳ್ಳುತ್ತಾರೆ. ಇದರಿಂದ ‘ರಕ್ಷಣೆ’ ಪಡೆಯಲೆಂದೇ ವಯಸ್ಸಾದ ಗಂಡಸರಿಗೆ ಉಪಪತ್ನಿಯರೋ, ಎರಡನೇ ಪತ್ನಿಯೋ ಆಗುತ್ತಾರೆ. ಈ ವಿದ್ಯಮಾನದ ಸುತ್ತ ರೋಚಕತೆ ಹಬ್ಬಿಸಿ ಪ್ರಚಾರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವ ಪತ್ರಿಕೆಗಳೂ ಇವೆ. ಇನ್ನು ಮುಸುಕಿನೊಳಗಿನ ಗುದ್ದಿನಂತೆ ಪ್ರತಿ ಕಾರ್ಖಾನೆ, ಆಫೀಸುಗಳಲ್ಲಿ ದಿನನಿತ್ಯವೂ ನಡೆಯುವ ಸೂಕ್ಷ್ಮವಾದ, ಒರಟಾದ ಲೈಂಗಿಕ ಒತ್ತುವರಿಗಳ ಬಗ್ಗೆ ಕೂಡ ನಾವು ಮಾತನಾಡುವುದಿಲ್ಲ.

ಅರ್ಥಮಾಡಿಕೊಳ್ಳಲು ತುಂಬಾ ಕಷ್ಟವಾಗುವುದು ‘ವಿಕೃತಿ’ಯ ಕೇಸುಗಳನ್ನು. ಮೂರು ವರ್ಷ ನಾಲ್ಕು ವರ್ಷದ ಹಸುಳೆಗಳ ದೇಹದಿಂದ ಯಾವ ರೀತಿಯ ತೃಪ್ತಿ ಮತ್ತು ಸಂತೋಷವನ್ನು ಪಡೆಯಬಹುದು? ಪ್ರಾಣಿ ಪ್ರಪಂಚದಲ್ಲಾದರೂ ಈ ರೀತಿಯ ‘ವಿಕೃತಿ’ ಇದೆಯೇ? ಬಲಾತ್ಕಾರದ ವಿವರಗಳು ಪ್ರಾಣಿ ಪ್ರಪಂಚದಲ್ಲಿರುವುದಕ್ಕೆ ದಾಖಲೆಗಳಿವೆ. ಮಾಧ್ಯಮಗಳು ಅತ್ಯಾಚಾರವನ್ನು ಪ್ರಚುರಪಡಿಸುವುದರಲ್ಲಿ ಒಂದು ರೀತಿಯ ರೋಚಕತೆಯಿದೆ. ಸ್ಪರ್ಧಾತ್ಮಕ ಮಾಧ್ಯಮ ಜಗತ್ತಿನಲ್ಲಿ ಇದು ಅನಿವಾರ್ಯವೇನೋ. ವಿದ್ಯಮಾನಕ್ಕೆ ‘ರೋಚಕ’ ಆಯಾಮ ಕಡಿಮೆಯಾದ ತಕ್ಷಣವೇ ಮಾಧ್ಯಮಗಳು ಆಸಕ್ತಿ ಕಳೆದುಕೊಳ್ಳುತ್ತವೆ. ಮಾಧ್ಯಮಗಳಿಂದ ಇಂತಹ ವಿದ್ಯಮಾನಗಳಿಗೆ ಆಗುವ ತೊಂದರೆಯೆಂದರೆ, ಕೊನೆಯ ಹಂತದ ತನಕ ಕೇಸುಗಳನ್ನು ಅನುಸರಿಸಲು, ತರ್ಕ ತಲುಪಿಸಲು ಯಾವ ರೀತಿಯ ಒತ್ತಾಸೆಯೂ ದೊರಕದಿರುವುದು. ಬೆಂಗಳೂರಿನಲ್ಲೇ ಈಚೆಗೆ ನಡೆದ ವಿಬ್‌ಗ್ಯಾರ್ ಸ್ಕೂಲಿನ ಪ್ರಕರಣದಲ್ಲಿ ಪೋಲೀಸರು ಮೊದಲು ಬಂಧಿಸಿದ್ದು ಮುಸ್ತಾಫನನ್ನು. ನಂತರ ಪೋಲೀಸರೆ ಆತ ಅಪರಾಧಿಯಲ್ಲವೆಂದರು. ಈ ನಡುವೆ ಮುಸ್ತಾಫನನ್ನು ಯಾವ ರೀತಿ ನಡೆಸಿಕೊಳ್ಳಲಾಯಿತು? ನಾನು ಕೆಲವು ಪ್ರಗತಿಪರ ಮಿತ್ರರ ಹತ್ತಿರವೂ ಚರ್ಚಿಸಿದೆ. ಇದು ಅತ್ಯಾಚಾರದ ಕೇಸಾಗಿದ್ದರಿಂದ ಮುಸ್ತಾಫನ ಪರ ವಾದಿಸುವುದು, ಆತ ಅಲ್ಪಸಂಖ್ಯಾತನೇ ಆಗಿದ್ದರೂ ರಾಜಕೀಯವಾಗಿ ಸಮರ್ಪಕವಾಗುವುದಿಲ್ಲವೆಂದರು.

ಕೆಲವು ಕ್ಷೇತ್ರಗಳಲ್ಲಿ ಉದಾಹರಣೆಗೆ, ಕಟ್ಟಡ–ರಸ್ತೆ ನಿರ್ಮಾಣದ ವಲಯದಲ್ಲಿ, ಸಾಗಣೆ ಕ್ಷೇತ್ರದಲ್ಲಿ ಅತ್ಯಾಚಾರ ಮತ್ತು ದಬ್ಬಾಳಿಕೆ institutionalise ಆಗಿದೆ. ಎಷ್ಟರ ಮಟ್ಟಿಗೆಂದರೆ ಅದು ಅತ್ಯಾಚಾರವೆಂಬುದೇ ಗೋಚರಿಸದ ಹಾಗೆ. ನಗರ ಪ್ರದೇಶಗಳಿಗೆ ಬಹಳ ಸಲ ಗುಂಪು ಗುಂಪಾಗಿ ಗುಳೆ ಬರುವವರು ಕೂಡ ಈ ಬಲೆಗೆ ಸಿಕ್ಕಿ ಹಾಕಿಕೊಳ್ಳುತ್ತಾರೆ. ಆದರೆ ಉದ್ಯೋಗದ ಭದ್ರತೆಯ ಆಸೆಯಿಂದ ಇದನ್ನು ಸಹಿಸಿಕೊಳ್ಳುತ್ತಾರೆ. ಆಫೀಸುಗಳಲ್ಲೂ ಕೂಡ ಕೆಲಸ ಖಾಯಂ ಆಗುವ ತನಕ ಹೆಂಗಸರು ಒಂದು ರೀತಿಯ ಭಯ, ನಿರೀಕ್ಷೆಯಲ್ಲಿ ಲೈಂಗಿಕ ಸೇವೆಗಳನ್ನು ಒದಗಿಸಲೇ ಬೇಕಾಗುತ್ತದೆ. ಈ ರೀತಿಯ ಒಳಸುಳಿಗಳಲ್ಲಿ ಹೆಂಗಸರು ಭಾಗವಹಿಸಬಾರದು ಎಂದು ಹೇಳುವುದು ಸುಲಭ. ಆದರೆ ಭಾಗವಹಿಸಲೇಬೇಕಾದ ಅನಿವಾರ್ಯತೆ, ಜೀವನ ಸಂದರ್ಭಗಳಿಂದಲೇ ಮೂಡಿಬಂದರೆ? ಇದೆಲ್ಲ ಯಾವತ್ತೂ ಮಾಧ್ಯಮಗಳಲ್ಲೂ ಬರುವುದಿಲ್ಲ. ಸಾಹಿತ್ಯ ಕೃತಿಗಳಲ್ಲೂ ಬರುವುದಿಲ್ಲ.

ಕಾನೂನು, ಹೊಸ ಎಚ್ಚರ, ಮಾಧ್ಯಮಗಳು ಇವೆಲ್ಲ ಅತ್ಯಾಚಾರವನ್ನು ನಿಯಂತ್ರಿಸಲು ಒಂದು ಹಂತದ ತನಕ ಸಹಾಯಕಾರಿ ಮತ್ತು ಅವಶ್ಯಕ. ಆದರೆ ಧರ್ಮ ಮತ್ತು ನೀತಿಶಾಸ್ತ್ರ ಕೂಡ ಈ ವಿದ್ಯಮಾನವನ್ನು ಬಹುಕಾಲದಿಂದ ವಿರೋಧಿಸಿವೆ. ಗುರುಮನೆ, ಅರಮನೆಗಳಲ್ಲೂ ಕೂಡ ವಿಕೃತ ಲೈಂಗಿಕತೆ ಮತ್ತು ಅತ್ಯಾಚಾರ ಲಾಗಾಯ್ತಿನಿಂದ ಇರುವಂತದೇ. ಯಾರೂ ಮಾತನಾಡುವುದಿಲ್ಲ.

ಕಳೆದ ನಾಲ್ಕಾರು ದಶಕಗಳಲ್ಲಿ ಹೆಂಗಸಿನ ದೇಹ, ಮನಸ್ಸಿನ ಸ್ವರೂಪ ಮತ್ತು ನುಡಿಕಟ್ಟು ತೀವ್ರವಾಗಿ ಬದಲಾಯಿಸಿದೆ. ಅದನ್ನು ಹೇಗೆ ಸ್ವೀಕರಿಸಬೇಕು, ಒಪ್ಪಬೇಕು ಎಂದು ನಮಗೆ ಪ್ರತಿಯೊಬ್ಬರಿಗೂ ಇನ್ನೂ ಸರಿಯಾಗಿ ತಿಳುವಳಿಕೆ ಬಂದಿಲ್ಲ. ಇನ್ನೊಂದು ಸ್ತರದಲ್ಲಿ ನಮಗೆ ಬದಲಾದ ಹೆಂಗಸಿನ ಬಗ್ಗೆ ಭಯವೂ ಇದೆ. ಈ ಭಯ ಮಾಧ್ಯಮಗಳಲ್ಲಿ ಬೆಳಕಿಗೆ ಬರುವ ಪ್ರಕರಣಗಳ ಮೂಲಕ, ಆದರೆ ಬೆಳಕಿಗೆ ಬಾರದ ಪ್ರತಿ ಮನೆಗಳಲ್ಲಿ ನಡೆಯುವ ವಿದ್ಯಮಾನಗಳ ಮೂಲಕ ವ್ಯಕ್ತವಾಗುತ್ತದೆ. ಈಗಿರುವಂತೆ ಲೈಂಗಿಕ ವಿಕೃತಿ ಮತ್ತು ಅತ್ಯಾಚಾರವನ್ನು ಒಂದು ಸಾರ್ವಜನಿಕ ಸಮಸ್ಯೆಯಂತೆ ಅಥವಾ ಮನೆ ಹೊರಗಿನ ಸಮಸ್ಯೆಯಂತೆ ನೋಡಲಾಗುತ್ತಿದೆ. ಇದಕ್ಕೆಲ್ಲ ಕಾರಣ ‘ಅವರು’ ಎಂದು ತೋರಿಸಲಾಗುತ್ತಿದೆ. ಈ ‘ಅವರು’ ನಮ್ಮ ಮನಸ್ಸಿನೊಳಗಡೆಯೂ, ಮನೆಯೊಳಗಡೆಯೂ ಇದ್ದಾರೆ– ಎಂದು ಒಪ್ಪಿಕೊಳ್ಳಲು ಕಷ್ಟವಾದರೂ ಆ ದಿಕ್ಕಿನಲ್ಲಿ ಯೋಚಿಸಬೇಕಾಗುತ್ತದೆ. ನಮ್ಮ ಕೌಟುಂಬಿಕ ಬಂಧು ಮಿತ್ರರ ವಲಯಗಳಲ್ಲೇ ಕಂಡೂ ಕಾಣದ ಹಾಗೆ ನಡೆಯುತ್ತಿರುವ ಲೈಂಗಿಕ ವಿಕೃತಿ, ದುಸ್ಸಾಹಸಗಳನ್ನು ನಾವು ಒಂದು ರೀತಿಯಲ್ಲಿ ಒಪ್ಪಿರುವುದರಿಂದಲೇ, ಇಲ್ಲ ಅದರ ಬಗ್ಗೆ ಮೌನವಾಗಿರುವುದರಿಂದಲೇ ಹೊರಗಡೆ ನಡೆಯುತ್ತಿರುವ ವಿದ್ಯಮಾನಗಳ ಬಗ್ಗೆಯೂ ನಾವು ರೂಕ್ಷವಾಗಿರಬಹುದು. ಕಾನೂನು, ಸರ್ಕಾರ, ಪೋಲೀಸು ಇವೆಲ್ಲ ಸೇರಿ ಈ ಸಮಸ್ಯೆಯನ್ನು ಬಗೆಹರಿಸುತ್ತದೆಂದು ನಮ್ಮನ್ನು ನಾವೇ ಭ್ರಮಣೆಗೆ ಒಳಪಡಿಸಿಕೊಳ್ಳುತ್ತಿರಬಹುದು.



**–ಕೆ. ಸತ್ಯನಾರಾಯಣ** (ನಿವೃತ್ತ ವರಮಾನ ತೆರಿಗೆ ಆಯುಕ್ತರು ಮತ್ತು ಹಿರಿಯ ಲೇಖಕರು)

**ಪ್ರಿಯ ಓದುಗರೇ,**

**ಹೊಸ ಮನುಷ್ಯ’ ಪತ್ರಿಕೆಗೆ ಚಂದಾದಾರರಾಗ ಬಯಸುವವರು *ಸಂಪಾದಕರು, ಹೊಸ ಮನುಷ್ಯ*–ಈ ಹೆಸರಿನಲ್ಲಿ ಶಿವಮೊಗ್ಗದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನ(IFSC Code: SBMY 0040444) ವಿನೋಬನಗರ ಶಾಖೆಯಲ್ಲಿ ತೆರೆದಿರುವ ಕರೆಂಟ್ ಅಕೌಂಟ್ ಸಂಖ್ಯೆ: 64110358330 ಇಲ್ಲಿಗೆ ಚಂದಾ ಮೊತ್ತವನ್ನು ವರ್ಗಾಯಿಸಿ ಪತ್ರ ಮುಖೇನ ಅಥವಾ ದೂರವಾಣಿ ಸಂದೇಶದ ಮೂಲಕ ತಮ್ಮ ವಿಳಾಸವನ್ನು ತಪ್ಪದೆ ಸಂಪಾದಕರಿಗೆ ತಿಳಿಸಬೇಕು.**

**ಚಂದಾ ವಿವರ, ದೂರವಾಣಿ ಸಂಖ್ಯೆಗಳು, ಈ ಮೇಲ್ ವಿಳಾಸ ಹಾಗೂ ಅಂಚೆ ವಿಳಾಸ ಪತ್ರಿಕೆಯ ಮುಖಪುಟದಲ್ಲಿದೆ.**

**ಪತ್ರಿಕೆಯಲ್ಲಿನ ಲೇಖನಗಳ ಬಗ್ಗೆ ಅಭಿಪ್ರಾಯ/ಪ್ರತಿಕ್ರಿಯೆಗಳನ್ನು ಬರೆಯ ಬಯಸುವವರು, ಅವನ್ನು ಸಂಕ್ಷಿಪ್ತವಾಗಿ ಬರೆದು ಆಯಾ ತಿಂಗಳ ೨೦ರೊಳಗೆ ನಮಗೆ ತಲುಪುವಂತೆ ಕಳಿಸಬೇಕು. ಈ ಮೇಲ್ ಮಾಡುವುದಾದರೆ ಅದು ನುಡಿ/ಬರಹದಲ್ಲಿ ಇರಬೇಕು.–ಸಂ.**

# ಸಾಹಿತ್ಯ-ಸಂಗೀತ-ಸಂಸ್ಕೃತಿ ಇತ್ಯಾದಿ

## ಮೂರು ಚಿಡಿ ಟಿಪ್ಪಣಿಗಳು

### ಸಂಕ್ರಮಣಕ್ಕೆ ೫೦ ವರ್ಷ



ಮುಖ್ಯವಾದದ್ದು ಮೊದಲು. ಚಂದ್ರಶೇಖರ ಪಾಟೀಲರ ಸಂಪಾದಕತ್ವದ 'ಸಂಕ್ರಮಣ' ಸಾಹಿತ್ಯ ದ್ವೈಮಾಸಿಕಕ್ಕೆ ಈಗ ೫೦ ವರ್ಷ. ಮೊಟ್ಟಮೊದಲಿಗೆ ಚಂಪಾ ಅವರಿಗೆ ಈ ಸಾಹಸಕ್ಕೆ ಮತ್ತು ನಿರ್ದಿಷ್ಟವಾಗಿ ಅವರ ಸಾಹಿತ್ಯ ಪ್ರೀತಿಗೆ ನಮ್ಮ ತುಂಬು ಹೃದಯದ ಅಭಿನಂದನೆಗಳು. ಪತ್ರಿಕೆಯ ಇತ್ತೀಚಿನ ಸಂಚಿಕೆಯಲ್ಲಿ ಪತ್ರಿಕೆಯನ್ನು ೧೯೬೪ರಲ್ಲಿ ಒಟ್ಟಿಗೆ ಆರಂಭಿಸಿದ ಚಂಪಾ, ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ಗಿರಡ್ಡಿ ಗೋವಿಂದರಾಜ ಅವರು ಈ ಕುರಿತ ತಮ್ಮ ನೆನಪುಗಳನ್ನು ಬರೆದಿದ್ದಾರೆ. ಒಂದು ಅರ್ಥದಲ್ಲಿ ಅವು ಅವರ ನೆನಪುಗಳಾಗಿ ಮಾತ್ರವಲ್ಲ, ಪತ್ರಿಕೆಯನ್ನು ಬಹಳ ವರ್ಷಗಳಿಂದ ಓದುತ್ತಾ ಬಂದಿರುವ ನಮ್ಮೆಲ್ಲರ ನೆನಪುಗಳೂ ಆಗಿವೆ. ಸಾಹಿತ್ಯವನ್ನು ಸಾವು-ಬದುಕುಗಳ ಪ್ರಶ್ನೆಯೆಂಬಂತೆ ಸ್ವೀಕರಿಸಿದ್ದ ಅರವತ್ತು-ಎಪ್ಪತ್ತರ ದಶಕಗಳ ಆ ಸಾಹಿತ್ಯೋತ್ಸಾಹ ಮತ್ತು ಸಂಭ್ರಮಗಳ ಕಾವು ಮತ್ತೆ ನಮ್ಮನ್ನು ತಾಗಿದಂತಾಗಿ ಅದೆಂತಹ ಕಾಲ ಎಂಬ ರೋಮಾಂಚನವನ್ನುಂಟು ಮಾಡುತ್ತದೆ.

ವೈಯುಕ್ತಿಕವಾಗಿ ಹೇಳುವುದಾದರೆ, ನನ್ನ ಮೊದಲ ಕವನ ಪ್ರಕಟವಾಗಿದ್ದು ಸಂಕ್ರಮಣದಲ್ಲೇ. ಹಾಗಾಗಿ ನಾನೊಬ್ಬ ಲೇಖಕ ಎಂಬ ಆತ್ಮವಿಶ್ವಾಸ ಮೂಡಿದ್ದು ಸಂಕ್ರಮಣದ ಮೂಲಕವೇ. ಅದು ೧೯೭೧. ಆನಂತರ ಪ್ರಜಾವಾಣಿ ನಾಟಕ ಸ್ಪರ್ಧೆಯಲ್ಲಿ ತೀರ್ಪುಗಾರರ ಉಲ್ಲೇಖಕ್ಕೆ ಪಾತ್ರವಾಗಿದ್ದ ನನ್ನ ಏಕೈಕ ನಾಟಕ ಪ್ರಕಟವಾಗಿದ್ದೂ ಸಂಕ್ರಮಣದಲ್ಲೇ. ಅದಾದ ನಂತರ ನಾನು ದೆಹಲಿಯಲ್ಲಿದ್ದಾಗ ಚಂಪಾ ನನ್ನಿಂದ ಕೆಲ ಪುಸ್ತಕ ವಿಮರ್ಶೆಗಳನ್ನು ಬರೆಸಿದ ನೆನಪು. ಎಲ್ಲಕ್ಕಿಂತ ಮುಖ್ಯವಾಗಿ ಸಂಕ್ರಮಣದೊಂದಿಗೆ ನನ್ನ ಸಂಬಂಧ ಬಲಗೊಂಡದ್ದು ಅದರ ಲೋಹಿಯಾ ವಿಶೇಷಾಂಕದ(೧೯೮೦) ಸಂಪಾದಕನಾಗಿ. ಆಗಿನಿಂದ ಈಗಿನವರೆಗೆ ಈ ಪತ್ರಿಕೆಯನ್ನು ನಾನು ಓದುತ್ತಲೋ/ಗಮನಿಸತ್ತಲೋ ಬಂದಿರುವೆ. ಬಹುಶಃ ಈ ಪತ್ರಿಕೆಯಲ್ಲಿ ಬರೆಯದೆ ಈ ೫೦ ವರ್ಷಗಳಲ್ಲಿ ಕನ್ನಡದಲ್ಲಿ ಲೇಖಕ ಅನ್ನಿಸಿಕೊಂಡವರೇ ಇಲ್ಲವೇನೋ! ಇದ್ದರೂ ಅವರ ಸಂಖ್ಯೆ ಬಹು ವಿರಳ. ಆ ಮಟ್ಟಿಗೆ 'ಸಂಕ್ರಮಣ'ಕ್ಕೆ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ಚಿರಸ್ಥಾಯಿಯಾದ ಸ್ಥಾನವಿದ್ದೇ ಇದೆ. ಪತ್ರಿಕೆ ತನ್ನ ಸುವರ್ಣ ಸಂಭ್ರಮವನ್ನು ತಾನು ಹುಟ್ಟಿದ ಊರಾದ ಧಾರವಾಡದಲ್ಲಿ ಆಚರಿಸಿಕೊಂಡಿದೆ.



ಗಿರಡ್ಡಿ ಮತ್ತು ಪಟ್ಟಣಶೆಟ್ಟಿ ಸುಮಾರು ೪೦ ವರ್ಷಗಳ ಹಿಂದೆಯೇ ಪತ್ರಿಕೆಯಿಂದ ದೂರ ಸರಿದ ಮೇಲೆ ಚಂಪಾ ಎತ್ತಿದ ಹಲವಾರು ಅವತಾರಗಳನ್ನು ಅನುಸರಿಸಿ ಪತ್ರಿಕೆ ಗುಣಮಟ್ಟದಲ್ಲಿ ಹಲವಾರು ಏರಿಳಿತಗಳನ್ನು ಕಂಡು ಉಳಿದುಕೊಂಡು ಬಂದಿರುವುದೇ ಒಂದು ಆಶ್ಚರ್ಯ ಮತ್ತು ಅದರ ಪೂರ್ಣ ಕೀರ್ತಿ ಚಂಪಾ ಅವರಿಗೆ, ಅವರ ಜಿಗುಟುತನಕ್ಕೇ ಸಲ್ಲಬೇಕು.

### ಸಾಹಿತ್ಯವೂ ಸಾಮಾಜಿಕ ನ್ಯಾಯವೂ

ಇತ್ತೀಚೆಗೆ ಇನ್ನೊಂದು (ಮಾಜಿ) ಸಾಹಿತ್ಯ ನಗರಿಯಲ್ಲಿ ಇನ್ನೊಂದು ಸುವರ್ಣ ಸಂಭ್ರಮ ನಡೆಯಿತು. ಅದು ನಮ್ಮ ಶಿವಮೊಗ್ಗದಲ್ಲಿ, ರಾಜ್ಯ ಸಾಹಿತ್ಯ ಅಕಾಡೆಮಿಯದ್ದು. ಎಷ್ಟೋ ವರ್ಷಗಳ ಹಿಂದೆ ನಡೆಯಬೇಕಾಗಿದ್ದ ಈ ಸಂಭ್ರಮ ನಮ್ಮ ಸರ್ಕಾರಗಳ ಸಂಸ್ಕೃತಿವಿಹೀನ ನಡವಳಿಕೆಗಳಿಂದಾಗಿ ಈಗ ಎಂತಹ ಸಂಭ್ರಮದಿಂದ ನಡೆಯಿತೆಂದರೆ, ಅಕಾಡೆಮಿಯ ಅಧ್ಯಕ್ಷೆ ಮಾಲತಿ ಪಟ್ಟಣಶೆಟ್ಟಿಯವರು, ಖಾಲಿ ಹೊಡೆಯುತ್ತಿದ್ದ ಸಭಾ ಭವನವನ್ನು ನೋಡಿ ಗಾಬರಿಯಾಗಿ, ಸಭಾ ಭವನ ತುಂಬುವ ಸಾಧ್ಯತೆ ಇಲ್ಲದ ಹೊರತು ಅಕಾಡೆಮಿ ಶಿವಮೊಗ್ಗಕ್ಕೆ ಇನ್ನೊಮ್ಮೆ ಕಾಲಿಡುವುದಿಲ್ಲ ಎಂದು ಘೋಷಿಸಬೇಕಾಯಿತು! ಇದೇ ಸಂಭ್ರಮದಲ್ಲಿ ಸಂಭ್ರಮಾಚರಣೆಯ ಸಮಿತಿಯ ನೇತೃತ್ವ ವಹಿಸಿರುವ ಮಿತ್ರ ಕೆ. ವೈ. ನಾರಾಯಣಸ್ವಾಮಿಯವರು ಮಾತನಾಡಿ ಯಾಕೋ, ಯಾರಿಗೋ ಎಚ್ಚರಿಕೆ ಕೊಡುವಂತೆ ಸಾಮಾಜಿಕ ನ್ಯಾಯ ಅಕಾಡೆಮಿಯ ಒಂದು ಮುಖ್ಯ ಬದ್ಧತೆಯಾಗಿದ್ದು, ತಳವರ್ಗಗಳ ಲೇಖಕರ ಹಿತಾಸಕ್ತಿ ಅಕಾಡೆಮಿಯ ಹೊಣೆಯೆಂದು ಘೋಷಿಸಿದಾಗ ನೆರೆದಿದ್ದ ಕೆಲವೇ ಸಭಿಕರಲ್ಲಾದರೂ(ಅಕಾಡೆಮಿಯ ದಂಡಿನ ಹೊರತಾಗಿ) ಅಕಾಡೆಮಿಯೇನಾದರೂ ಸಮಾಜ ಕಲ್ಯಾಣ ಇಲಾಖೆಗೆ ವರ್ಗಾವಣೆಯಾಗಿದೆಯೇ ಎಂದು ಆಶ್ಚರ್ಯಪಡುವಂತಾಯಿತು. ಅಥವಾ ಇದು ಇನ್ನು ಮುಂದೆ ಸಭಾ ಭವನಗಳನ್ನು ತುಂಬಲು ಅಕಾಡೆಮಿಯು ಹಮ್ಮಿಕೊಂಡಿರುವ ಯೋಜನೆಯ ಒಂದು ಭಾಗವೇ ಎಂದು ಸಂದೇಹ ಪಡುವಂತೆಯೂ ಆಯಿತು. ನಾರಾಯಣ ಸ್ವಾಮಿ ವೇದಿಕೆಯಿಂದ ಕೆಳಗಿಳಿದು ಬಂದಮೇಲೆ ಅವರಿಗೆ ಹೀಗೆ ಹೇಳಿದೆ: "ಸಾಹಿತಿಯಾಗುವುದಕ್ಕೂ ಸರ್ಕಾರಿ ನೌಕರನಾಗುವುದಕ್ಕೂ ವ್ಯತ್ಯಾಸವಿದೆ. ಅವುಗಳಿಗೆ ಬೇಕಾದ ಪ್ರೋತ್ಸಾಹದ ರೀತಿ ನೀತಿಗಳಲ್ಲೂ ವ್ಯತ್ಯಾಸವಿದೆ. ಕನಿಷ್ಟ ಗುಣಮಟ್ಟವಿಲ್ಲದ ಲೇಖಕರಿಗೆ ಮಾತ್ರ ಸಾಮಾಜಿಕ ನ್ಯಾಯದ ಆಸರೆ ಬೇಕಾಗುತ್ತದೆ. ಅದು ಈಗಾಗಲೇ ಕನ್ನಡ ಸಾಹಿತ್ಯದಲ್ಲಿ ಸಾಬೀತಾಗಿ ಅನಾಹುತಗಳನ್ನೇ ಸೃಷ್ಟಿಸಿದೆ. ಹಲವಾರು ಬೆದರು ಬೊಂಬೆಗಳು ನಮ್ಮ ಕಣ್ಮುಂದೆಯೇ ಭಯಂಕರವಾಗಿ ಕುಣಿಯುತ್ತಿವೆ" ಕೆ.ವೈ. ಏನೂ ಮಾತಾಡಲಿಲ್ಲ. ಆನಂತರ ಅವರ ಗುರು ಕೆ.ವಿ. ನಾರಾಯಣ ಹೇಳಿದರು, ನಾರಾಯಣ ಸ್ವಾಮಿ ಹಿಂದಿನೆರಡು ದಿನಗಳ ಮೈಸೂರು ಸಾಹಿತ್ಯ ಸಮಾರಂಭವೊಂದರ ಹ್ಯಾಂಗೋವರಿನಲ್ಲಿ ಹಾಗೆ ಮಾತನಾಡಿರಬಹುದೆಂದು. ಆದರೆ ಯಾವುದೇ ಇಂತಹ ಹ್ಯಾಂಗೋವರುಗಳು ಇಂತಹ ಮೂಲತಃ ಸಾಹಿತ್ಯ ವಿರೋಧಿ ಮಾತುಗಳನ್ನಾಡಿಸಬಾರದು!

### ರಾಗಮಾಲಾ ಪುಸ್ತಕ ಮಾಲಿಕೆ

ಮೈಸೂರಿನ ಮಿತ್ರರಾದ ಟಿ.ಎಸ್.ವೇಣುಗೋಪಾಲ್ ಮತ್ತು ಅವರ ಪತ್ನಿ ಶೈಲಜಾ ಕಳೆದೊಂದೆರಡು ವರ್ಷಗಳಿಂದ ಕನ್ನಡ ಪುಸ್ತಕ ಪ್ರಕಾಶನ ಕ್ಷೇತ್ರದಲ್ಲಿ ವಿಶಿಷ್ಟ ಪ್ರಯತ್ನವೊಂದನ್ನು ಮಾಡುತ್ತಿದ್ದಾರೆ. ಸಂಗೀತ ಮತ್ತು ಸಂಗೀತಗಾರರನ್ನು ವಿಮರ್ಶಾತ್ಮಕವಾಗಿ ಪರಿಚಯಿಸುವ ಪುಸ್ತಕಗಳನ್ನು ಅವರು ಪ್ರಕಟಿಸುವ ಸಾಹಸಕ್ಕೆ ಕೈಹಾಕಿದ್ದಾರೆ. ನನಗೆ ತಿಳಿದಂತೆ ಕೆಲ ವಾಗ್ಗೇಯಕಾರರ ಚರಿತ್ರಾ ರೂಪದ ಪರಿಚಯದ ಅಥವಾ ಪ್ರಸಿದ್ಧ ಸಂಗೀತ ಕೃತಿಗಳ ಸ್ವರ ಪ್ರಸ್ತಾರದ ಪಠ್ಯ ಪುಸ್ತಕಗಳ ಹೊರತಾಗಿ ಸಂಗೀತ ರಸಾಸ್ವಾದನೆಗೆ ಪೂರಕವಾದ ಪ್ರಕಟಣೆಗಳು ಅಪರೂಪವೆಂದೇ ಹೇಳಬೇಕು. ಈಗ ಇಂತಹ ಪ್ರಯತ್ನದ ಭಾಗವಾಗಿ ಈ ದಂಪತಿ 'ರಾಗಮಾಲಾ ಪುಸ್ತಕ ಮಾಲಿಕೆ' ಹೆಸರಿನಲ್ಲಿ ಈಗಾಗಲೇ ನಾಲ್ಕು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ ಇತ್ತೀಚಿನ ಪುಸ್ತಕ, ಕರ್ನಾಟಕ ಸಂಗೀತದ ಧ್ರುವತಾರೆಗಳಲ್ಲಿ ಒಬ್ಬರೆನಿಸಿದ ಸುಬ್ಬುಲಕ್ಷ್ಮಿಯವರನ್ನು ಕುರಿತ 'ಭುವನದ ಭಾಗ್ಯ ಎಂ.ಎಸ್.' ಎಂಬುದು. ಅತ್ಯಂತ ಆಕರ್ಷಕವಾಗಿ ಬಣ್ಣದ ಹಾಳೆಗಳಲ್ಲಿ ಮತ್ತು ಸುಬ್ಬುಲಕ್ಷ್ಮಿ ಅವರ ಸಂಗೀತ ಬದುಕಿನ(ಅದರಲ್ಲಿ ಸಂಗೀತ ಬಿಟ್ಟು ಇನ್ನೇನಿದೆ!) ವಿವಿಧ ಘಟ್ಟಗಳ ಬಹು ಅಪರೂಪದ ಮತ್ತು ಮನಮೋಹಕ ಕಪ್ಪುಬಿಳುಪು ಚಿತ್ರಗಳನ್ನು ಆಯ್ದು ಬಹುಸುಂದರವಾಗಿ ವಿನ್ಯಾಸಮಾಡಿ ಪ್ರಕಟಿಸಿದ್ದಾರೆ. ಸುಬ್ಬುಲಕ್ಷ್ಮಿ ಅವರ ಸಂಗೀತ ಬದುಕಿನ ಒಂದು ಪೂರ್ಣ ಮತ್ತು ಸ್ವಲ್ಪಮಟ್ಟಿಗೆ ವಿಮರ್ಶಾತ್ಮಕವೂ ಎನ್ನಬಹುದಾದ ಚಿತ್ರ ಕಟ್ಟಿಕೊಡುವ ಲೇಖನಗಳನ್ನು ಒಳಗೊಂಡ ಈ ಪುಸ್ತಕ ಸಂಗೀತಪ್ರಿಯರೆಲ್ಲರ ಪುಸ್ತಕ ಕಪಾಟಿನಲ್ಲಿರಲೇಬೇಕಾದ ಪುಸ್ತಕ. ಈ ಪುಸ್ತಕ ಓದಿದಾಗ ನನ್ನನ್ನು ಕಾಡಿದ ಎರಡು ವಿಷಾದದ ಸಂಗತಿಗಳೆಂದರೆ, ಒಂದು ಈ ಪುಸ್ತಕದ ಹೊರಗಿನದ್ದು: ಸುಬ್ಬುಲಕ್ಷ್ಮಿಯವರಂತಹ ಮಹಾನ್ ಕಲಾವಿದೆ ಕುರಿತು ಈ ಪುಸ್ತಕದಲ್ಲಿ ಬಹುಪಾಲು ಅನುವಾದ ಲೇಖನಗಳನ್ನೇ ತುಂಬುವ ಹಾಗೆ ಕನ್ನಡದಲ್ಲೇಕೆ ಲೇಖನಗಳು ಬಂದಿಲ್ಲ ಎಂಬುದು. ಇನ್ನೊಂದು ಪುಸ್ತಕದ ಒಳಗಿನದ್ದು: ಇದರೊಳಗಿನ ಎರಡು ಲೇಖನಗಳೇ ಹೇಳುವಂತೆ,ದೇವದಾಸಿ ಕುಟುಂಬದ



ಹಿನ್ನೆಲೆಯಿಂದ ಬಂದ ಈ ಕಲಾವಿದೆ ಅಂತಿಮವಾಗಿ ಬ್ರಾಹ್ಮಣ ಕುಟುಂಬದ ಭಕ್ತಿ ಸಂಗೀತದ ಪರಂಪರೆಗೆ ಸೇರಿಹೋದದ್ದರ ಮರ್ಮವಾದರೂ ಏನು ಎಂಬುದನ್ನು ಈ ಪುಸ್ತಕ ಚರ್ಚಿಸದೇ ಹೋಗಿರುವುದು.

೧೫೨ ಪುಟಗಳ ಈ ಪುಸ್ತಕದ ಬೆಲೆ: ರೂ. ೧೨೫/- ಪ್ರಕಾಶನದ ವಿಳಾಸ: ಸಿ.ಹೆಚ್-೭೩, ೭ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಮೈಸೂರು-೫೭೦ ೦೦೯ ದೂ: ೯೦೦೦೮೨೭೭೩

ಇದೇ ಪ್ರಕಾಶನದ ಇತರ ಮೂರು ಪುಸ್ತಕಗಳಲ್ಲಿ ಒಂದು ಪಂಡಿತ್ ರವಿಶಂಕರರ ಬದುಕು ಮತ್ತು ಸಂಗೀತವನ್ನು ಕುರಿತ ಪುಸ್ತಕವಾದರೆ ಇನ್ನೊಂದು ಸಂಗೀತವನ್ನು ಆಲಿಸುವ ಬಗೆ ಮತ್ತೆ ಅದಕ್ಕೆ ಬೇಕಾದ ತಯಾರಿಯನ್ನು ಕುರಿತ ಪುಸ್ತಕ: 'ಕೇಳು ಜನಮೇಜಯ'. ಮೂರನೆಯದು ಹೊಸ ತಲೆಮಾರಿನ ಕರ್ನಾಟಕ ಸಂಗೀತ ಗಾಯಕರೂ ಮತ್ತು ಹೊಸ ಬಗೆಯ ಚಿಂತಕರೂ(ಇವರು ಇತ್ತೀಚೆಗೆ ಔಟ್‌ಲುಕ್ ಪತ್ರಿಕೆಯಲ್ಲಿ ಮೋದಿ ಬಗ್ಗೆ ಬರೆದ ಲೇಖನ ದಿಟ್ಟವೂ ಕುತೂಹಲಕಾರಿಯೂ ಆಗಿತ್ತು) ಆದ ವಿದ್ವಾನ್ ಟಿ.ಎಂ. ಕೃಷ್ಣ ಅವರ ಸಂಗೀತ ಕುರಿತ ಚಿಂತನೆಗಳ ಸಂಗ್ರಹ. ಹಿರಿಯ ಸಂಗೀತಗಾರರು ಮತ್ತು ಸಂಗೀತ ಸಂಪ್ರದಾಯಗಳನ್ನು ಕುರಿತ ಸೃಜನಶೀಲ ಮತ್ತು ಸಂಶೋಧನಾತ್ಮಕ ಲೇಖನಗಳನ್ನೊಳಗೊಂಡ ಈ ಪುಸ್ತಕ ಕನ್ನಡಕ್ಕೇ ಹೊಸದೆನ್ನಿಸುವಂತಹದ್ದು.

ವೇಣುಗೋಪಾಲ್-ಶೈಲಜಾ ಅವರಿಗೆ ಅಭಿನಂದನೆಗಳು.

**-ಡಿ.ಎಸ್. ನಾಗಭೂಷಣ**

# ಅನಂತಮೂರ್ತಿಯವರಿಗೆ ನಮ್ಮ ವಿದಾಯ



'**ಹೊ**ಸ ಮನುಷ್ಯ'-೨೦೧೪ರ ವಾರ್ಷಿಕ ಸಂಚಿಕೆಗೆ ಅನಂತಮೂರ್ತಿ ನೀಡಿದ ಸಂದರ್ಶನವೇ ಬಹುಷಃ ಅವರ ಬದುಕಿನ ಕೊಟ್ಟ ಕೊನೆಯ ಸಂದರ್ಶನ. ಅದು ನಮಗೆ ಅನಂತಮೂರ್ತಿಯವರ ವೈವಿಧ್ಯಮಯ ಕಾಳಜಿ ಮತ್ತು ಆಸಕ್ತಿಗಳ ಒಂದು ಇಣುಕು ನೋಟವನ್ನು ಒದಗಿಸುತ್ತದೆ. ಸಾಹಿತ್ಯ, ಸಾಹಿತ್ಯ ವಿಮರ್ಶೆ, ರಾಜಕೀಯದ ಸಿದ್ಧಾಂತ ಹಾಗೂ ದಿನನಿತ್ಯದ ಅಧಿಕಾರ ರಾಜಕೀಯಗಳನ್ನು ಅನಂತಮೂರ್ತಿ ತನ್ನ ವಿದ್ಯಾರ್ಥಿದೆಸೆಯಿಂದಲೂ ಗಂಭೀರವಾಗಿ ಪರಿಗಣಿಸಿದವರು. ತನ್ನ ಆತ್ಮಚರಿತ್ರೆಯನ್ನೂ ಒಳಗೊಂಡಂತೆ, ಅವರ ಯಾವತ್ತೂ ಬರವಣಿಗೆ, ಅವರ ವ್ಯಕ್ತಿತ್ವವನ್ನು ತೆರೆದು ತೋರುವಷ್ಟು ಪಾರದರ್ಶಕವಾಗಿದೆ. ಆದರೆ ಅವರ ಪ್ರಸ್ತುತ ಸಂದರ್ಶನದಲ್ಲಿ ಪತ್ರಿಕೆಯ ಸಂಪಾದಕರು, ಹಲವೆಡೆ, ಮುಲಾಜಿಲ್ಲದೆ ಅನಂತಮೂರ್ತಿಯವರನ್ನು ಪ್ರಶ್ನಿಸಿದ್ದಾರೆ; ಒಂದು ಸಂದರ್ಭದಲ್ಲಂತೂ-ಗುಜರಾತ್ ೨೦೦೨ರ ವಿದ್ಯಮಾನಕ್ಕೆ ಸಂಬಂಧಿಸಿದ ಹಾಗೆ - ಸಂಪಾದಕರು ಅನಂತಮೂರ್ತಿಯವರನ್ನು ನೇರವಾಗಿ 'ವಿಚಾರಿಸಿಕೊಂಡ' ಹಾಗೆ ನಮಗೆ ಅನ್ನಿಸುತ್ತದೆ. ಆ ಪ್ರಶ್ನೆ ಕೇಳಿದ ನಂತರವೂ ಅನಂತಮೂರ್ತಿಯವರ ಸ್ನೇಹ, ಗೌರವಗಳನ್ನು ಉಳಿಸಿಕೊಳ್ಳಬಲ್ಲೆ ಎಂಬ ಸಂದರ್ಶಕರ ವಿಶ್ವಾಸವೇ ಅವರನ್ನು ಹಾಗೆ ಪ್ರಶ್ನಿಸುವಂತೆ ಮಾಡಿರಬಹುದು.

ಅದು ಹೇಗೂ ಇರಲಿ, ಅನಂತಮೂರ್ತಿ ತನ್ನ ಸಂಪರ್ಕಕ್ಕೆ ಬಂದವರಲ್ಲಿ ಅಂತಹ ವಿಶ್ವಾಸವನ್ನು ಮೂಡಿಸುತ್ತಿದ್ದರು ಎಂಬುದು ನನ್ನ ಅನುಭವ. ಅದು ತೀರ ಖಾಸಗಿಯಾಗಿರದಿದ್ದರೆ, ತನ್ನ ಬಗೆಗಿನ ಎಂತಹ ಕಟು ಟೀಕೆಯನ್ನೂ ಅನಂತಮೂರ್ತಿ ಸಾವಧಾನದಿಂದ ಕೇಳಿಸಿಕೊಂಡು ಅದಕ್ಕೆ ಸೂಕ್ತ ಉತ್ತರ ನೀಡುವ ಮನೋಧರ್ಮವನ್ನು ಕೊನೆಯ ತನಕವೂ ಉಳಿಸಿಕೊಂಡಿದ್ದರು. ಲೇಖಕರಿಗಿಂತ ಮುಖ್ಯವಾಗಿ ದೇಶವನ್ನು ಆಳುವವರು, ತಮ್ಮ ಎದುರಾಳಿಗಳ ಮಾತನ್ನು ಕೇಳುವ ಸಹನೆ ತೋರದಿದ್ದರೆ ಈ ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯುವುದಿಲ್ಲ ಎಂಬುದು ಅವರಿಗೆ ಮನವರಿಕೆಯಾಗಿತ್ತು. ರಾಜಕೀಯ ಅಭಿಪ್ರಾಯ ಮಾತ್ರವಲ್ಲ, ಭಾಷೆ, ಧರ್ಮ, ಆಚಾರ-ವಿಚಾರ, ಉಡುಪು-ತೊಡುಪುಗಳಲ್ಲಿ ಕೂಡ ಅವರು ಬಹುತ್ವವನ್ನು ಪ್ರತಿಪಾದಿಸುತ್ತ ಬಂದವರು. ಮೋದಿ ಸರಕಾರವನ್ನು ಅವರು ವಿರೋಧಿಸಿದ್ದು ಈ ದೇಶದ ಬಹುರೂಪ ಮತ್ತು ಬಹುವಚನಿ ಸಂಸ್ಕೃತಿಗೆ ಅದು ಕಂಟಕಪ್ರಾಯವಾಗಬಹುದು ಎಂಬ ಕಾರಣಕ್ಕೆ. ದೇಶವನ್ನು ಈವರೆಗೆ ಆಳಿರುವುದು ಭ್ರಷ್ಟ ಹಾಗೂ ಅದಕ್ಷ ಸರಕಾರಗಳೇ ಎನ್ನುವುದು ಅವರಿಗೆ ಚೆನ್ನಾಗಿ ಗೊತ್ತಿತ್ತು. ಆದರೆ ಪ್ರಾಮಾಣಿಕ ಸರಕಾರಗಳು ಅಸಹನೆ ಮತ್ತು ದಬ್ಬಾಳಿಕೆಗಳನ್ನು ಮೈಗೂಡಿಸಿಕೊಳ್ಳುವ ಸಾಧ್ಯತೆಯನ್ನು ಅವರು ಅರಿತಿದ್ದರು. ನರೇಂದ್ರ ಮೋದಿ ವ್ಯಕ್ತಿತ್ವದಲ್ಲಿ ಅನಂತಮೂರ್ತಿ ದಕ್ಷತೆ ಮತ್ತು ಪ್ರಾಮಾಣಿಕತೆಯ ಜೊತೆ ಈ ಅವಗುಣವನ್ನೂ ಗುರುತಿಸಿದ್ದರು.

ತೀರ ಎಳವೆಯಿಂದಲೇ ಅನಂತಮೂರ್ತಿ ತನ್ನನ್ನು ಸಮಾಜವಾದಿ ಎಂದು ಗುರುತಿಸಿಕೊಂಡವರು. ಅವರು ಲೋಹಿಯಾರ ಚಿಂತನೆ ಮತ್ತು ಸ್ವಲ್ಪ ಅರಾಜಕ ಎನ್ನಬಹುದಾದ ಅವರ ವ್ಯಕ್ತಿತ್ವದಿಂದ ಆಕರ್ಷಿತರಾಗಿದ್ದರು. ಕರ್ನಾಟಕದಲ್ಲಿ ಲೋಹಿಯಾವಾದ ಪಡೆದುಕೊಂಡಿರುವ ಜನಮನ್ನಣೆಗೆ ಕಾರಣರಾದವರಲ್ಲಿ ಅನಂತಮೂರ್ತಿ ಕೂಡ ಒಬ್ಬರು. ಈ ನಿಟ್ಟಿನಲ್ಲಿ ತೇಜಸ್ವಿ, ಲಂಕೇಶ್, ಕೆ.ವಿ ಸುಬ್ಬಣ್ಣ ಮತ್ತು ನಂಜುಂಡಸ್ವಾಮಿಯವರ ಸಹಭಾಗಿತ್ವವನ್ನೂ ನಾವು ಮರೆಯುವಂತಿಲ್ಲ. ಇವರೆಲ್ಲರೂ ಸಮಕಾಲೀನರು ಹಾಗೂ ತಮ್ಮ ರಾಜಕೀಯದ ಆಸಕ್ತಿಯನ್ನು ಓದುಬರಹಗಳಿಗಷ್ಟೇ ಮಿತಿಗೊಳಿಸದೆ ಸಮಾಜವಾದೀ ಚಳುವಳಿಯ ಜೊತೆಗೂ ಕೈಜೋಡಿಸಿದವರು. ಅನಂತಮೂರ್ತಿ, ಲೋಹಿಯಾವಾದದ ಜೊತೆಗೆ ಮಾರ್ಕ್ಸ್ ಮತ್ತು ಗಾಂಧೀಜಿಯವರ ವಿಚಾರಗಳಿಂದಲೂ ಪ್ರಭಾವಿತರಾಗಿದ್ದರು. ಅವರು ಮಾರ್ಕ್ಸ್‌ನನ್ನು ಋಷಿ ಸದೃಶ ಜ್ಞಾನಿ ಎಂದು ಗೌರವಿಸುತ್ತಿದ್ದರೂ, ಕಮ್ಯುನಿಸ್ಟ್ ಸರಕಾರಗಳ ದಬ್ಬಾಳಿಕೆಯನ್ನು ಮಾತ್ರ ಏರುದನಿಯಲ್ಲಿ ಖಂಡಿಸುತ್ತಿದ್ದರು. ಅವರ ಓರಗೆಯ ಹಲವು ಎಡಪಂಥೀಯ ಬುದ್ಧಿಜೀವಿಗಳಂತೆ ಅವರು ಸೋವಿಯತ್ ರಷ್ಯಾ ಮತ್ತು ಚೀನಾ ಸರಕಾರಗಳ ಸೆನ್ಸಾರ್‌ಶಿಪ್ ಧೋರಣೆ ಮತ್ತು ದುರಾಡಳಿತಗಳನ್ನು ಅವಗಣಿಸಿರಲಿಲ್ಲ. ರಷ್ಯಾದಲ್ಲಿ ಸ್ಟಾಲಿನ್, ಚೀನಾದಲ್ಲಿ ಮಾವೋ ಮತ್ತು ಕಾಂಬೋಡಿಯಾದಲ್ಲಿ ಪೋಲ್ ಪಾಟ್ ಅವರುಗಳ ನೇತೃತ್ವದ ಕಮ್ಯುನಿಸ್ಟ್ ಸರಕಾರಗಳು ನಡೆಸಿದ ನರಮೇಧಗಳನ್ನು ಪಕ್ಷದ ಸದಸ್ಯರು ಮಾಡುವಂತೆ, 'ಆಂತರಿಕ ಆಡಳಿತದ ಕೆಲವು ದುರದೃಷ್ಟಕರ ಪ್ರಮಾದಗಳು' ಎಂದು ಮುಂತಾಗಿ ತಳ್ಳಿಹಾಕಲು ಅನಂತಮೂರ್ತಿ ನಿರಾಕರಿಸಿದರು.

೧೯೮೯ರ ಜೂನ್ ೪ ರಂದು ಚೀನಾದ ರಾಜಧಾನಿ ಬೀಜಿಂಗ್‌ನ ಟಿಯನಾನ್ಮೆನ್ ಚೌಕದಲ್ಲಿ ಸರಕಾರ ನಡೆಸಿದ ಹತ್ಯಾಕಾಂಡವನ್ನು ಅನಂತಮೂರ್ತಿ ಪ್ರತ್ಯಕ್ಷ ಕಂಡಿದ್ದರು. ಆನಂತರ ಅವರು ಅದನ್ನು ಯಥಾವತ್ತಾಗಿ ದಾಖಲಿಸಿದರು ಕೂಡ. ಚೀನಾದಲ್ಲಿ ಕಮ್ಯುನಿಸ್ಟರಿಂದ ಆಗಿದೆ ಎಂದು ಹೇಳಲಾಗುವ ಅಭಿವೃದ್ಧಿ ಮತ್ತು ನರೇಂದ್ರ ಮೋದಿ ಈಗ ಜನರಿಗೆ ಆಶ್ವಾಸನೆ ಕೊಡುತ್ತಿರುವ 'ಅಭಿವೃದ್ಧಿ' ಒಂದೇ ಬಗೆಯ ಅಸಹನೆ ಮತ್ತು ಕೊಳ್ಳುಬಾಕ ಸಂಸ್ಕೃತಿಯ ಪ್ರಾಡಕ್ಟ್ಸ್ ಎಂದು ಅವರು ಭಾವಿಸಿದ್ದರು.

ರಾಜಕೀಯದಲ್ಲಿ ಯಾವ ಬಣಕ್ಕೂ ಪೂರ್ತ ಒಪ್ಪಿಗೆಯಾಗುವಂತೆ, ಅವರ ಯಾವ ಅಭಿಪ್ರಾಯವೂ ಇರಲಿಲ್ಲ. ಕಟ್ಟರ್ ಬಲಪಂಥೀಯರು ಅನಂತಮೂರ್ತಿಯನ್ನು ಹಲ್ಲುಕಚ್ಚಿ ದ್ವೇಷಿಸಿದರೆ ಪಕ್ಷನಿಷ್ಠ ಮಾರ್ಕ್ಸ್‌ವಾದಿಗಳು ಅವರ ಬಗ್ಗೆ ಸದಾ ಸಂದೇಹಿಗಳಾಗಿದ್ದರು. ಅನಂತಮೂರ್ತಿಯವರ ಸ್ನೇಹಶೀಲ ವರ್ತನೆ ಮತ್ತು ಒಲಿಸಿಕೊಳ್ಳುವ ಮಾತುಗಾರಿಕೆ ಎಲ್ಲರಿಗೂ ಗೊತ್ತಿರುವಂತಹದ್ದೆ. ಒಮ್ಮೊಮ್ಮೆ ಅವರು, ಜನ ಕೇಳಬಯಸುವುದನ್ನೇ ಹೇಳುತ್ತಾರಲ್ಲವೆ ಎಂಬ ಸಂದೇಹವೂ ಬರುತ್ತದೆ. ಆದರೆ ತನ್ನ ಮಾತು ಮತ್ತು ನಿಲುವುಗಳಿಂದ ಅನಂತಮೂರ್ತಿ ನಾಡಿನಲ್ಲಿ ಸೃಷ್ಟಿಸಿಕೊಂಡ ವೈರಿಗಳನ್ನು ನೋಡಿದರೆ ಅವರ ಬಗ್ಗೆ ಗೌರವ ಇಮ್ಮಡಿಯಾಗುತ್ತದೆ.

ಅನಂತಮೂರ್ತಿಯವರ ನಿರ್ಗಮನದಿಂದ ಕನ್ನಡದಲ್ಲಿ ಬಹು ದೊಡ್ಡ ಶೂನ್ಯ ಉಂಟಾಗಿದೆ. ಪ್ರಭುತ್ವದ ದಬ್ಬಾಳಿಕೆ ಮಾತ್ರವಲ್ಲ, ತನ್ನ ಜನವಿರೋಧಿ ನೀತಿಗಳಿಗೆ ಜನರಿಂದಲೇ ಸಮ್ಮತಿ ಪಡೆಯುವ ಅದರ ಜನಮರುಳು ತಂತ್ರಗಳ ಬಗ್ಗೆಯೂ ಅನಂತಮೂರ್ತಿ ಜನರನ್ನು ಎಚ್ಚರಿಸುತ್ತಿದ್ದರು. ಕಳೆದ ಕೆಲವು ವರ್ಷಗಳಿಂದ ಅವರು ಬಹುಸಂಖ್ಯಾತ ಮತೀಯವಾದವನ್ನೂ ತೀವ್ರವಾಗಿ ಪ್ರತಿಭಟಿಸಿದ್ದರು. ತನ್ನ ತೀವ್ರ ಅನಾರೋಗ್ಯದ ನಡುವೆಯೂ ಅನಂತಮೂರ್ತಿ ತನ್ನ ನಿಲುವುಗಳನ್ನು ಕೆಚ್ಚಿನಿಂದ ಸಮರ್ಥಿಸಿಕೊಳ್ಳುತ್ತಿದ್ದರು. ಅವರ ನಿಧನದಿಂದಾಗಿ ನಾಡಿನಲ್ಲಿ ಸ್ವಾತಂತ್ರ್ಯ, ಸಮಾನತೆ ಮತ್ತು ಅಭಯಗಳಿಗಾಗಿ ಸದಾ ತುಡಿಯುತ್ತಿದ್ದ ಜೀವವೊಂದು ಈಗ ಮೌನಕ್ಕೆ ಸಂದಿದೆ.

**-ಜಿ.ರಾಜಶೇಖರ**

## ಪುಸ್ತಕಾವಲೋಕನ

**ಪು: ಹುದುಗಲಾರದ ದುಃಖ ಮೂಲ: ವಸಂತ ಕಣ್ಣಬಿರನ್** ಅನುವಾದ ಸಂಯೋಜಕರು : **ಎಂ.ಎಸ್. ಆಶಾದೇವಿ** ಪ್ರ: **ಅಹಿರ್ನಿಶಿ, ಶಿವಮೊಗ್ಗ** ಪು: **೩೭೬ ಬೆಲೆ: ರೂ. ೩೧೦/-**

# ದಾಂಪತ್ಯದ ವಿವಿಧ ನೋಟಗಳು ಮತ್ತು ಪಾಠಗಳು




**ಆ**ಧುನಿಕ ಸಂದರ್ಭದಲ್ಲಿ ಹೆಣ್ಣಿನ ಅಸ್ಮಿತೆಯ ಶೋಧ ವಿಭಿನ್ನ ವಿನ್ಯಾಸಗಳಲ್ಲಿ ಪ್ರಕಟಗೊಳ್ಳ ತೊಡಗಿದೆ. ಈ ಹಿನ್ನೆಲೆಯಲ್ಲಿ ಅತ್ಯಂತ ಸಮರ್ಥವಾದ ಒಂದು ಪ್ರಯತ್ನ ವಸಂತ ಕಣ್ಣಬೀರನ್‌ರವರ 'A Grief to bury'. ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರ ಸಂದರ್ಶನಗಳನ್ನು ಒಳಗೊಂಡ ಈ ಕೃತಿಯ ಕನ್ನಡ ಅನುವಾದ 'ಹುದುಗಲಾರದ ದುಃಖ'. ನೀರಾ ದೇಸಾಯಿ, ಶಾರದಾ ಮೋನಿ, ರಾಮೇಶ್ವರಿ ವರ್ಮಾ, ಕ್ಯಾಥಿ ಶ್ರೀಧರ್, ಕೊಯ್ಲಿ ರಾಯ್, ಇಳಾ ಭಟ್, ಶಾಂತಾ ರಾಮೇಶ್ವರಿ ರಾವ್, ಮೀನಾಕ್ಷಿ ಮುಖರ್ಜಿ ಮುಂತಾದ ಹನ್ನೆರಡು ಜನ ಸಾಧಕಿಯರ ದಾಂಪತ್ಯ ಮತ್ತು ವೈಧವ್ಯದ ಅನುಭವಗಳನ್ನು ಕುರಿತಂತೆ ನಡೆಸಿರುವ ಸಂದರ್ಶನಗಳ ಸಂಕಲನವಾದರೂ, ಅವು ಆ ಎಲ್ಲೆಗಳನ್ನು ಮೀರಿ ಆಪ್ತ ಸಮಾಲೋಚನೆಯಾಗಿ, ಇಬ್ಬರು ಗೆಳತಿಯರು ತಮ್ಮೊಳಗನ್ನು ತೆರೆದಿಡುವ ಆತ್ಮೀಯ ಹರಟೆಯಾಗಿ ರೂಪುಗೊಂಡಿರುವುದು ಈ ಕೃತಿಯ ವಿಶೇಷ.

ಈ ಕೃತಿಯಲ್ಲಿ ತಮ್ಮ ಅನುಭವಗಳನ್ನು ಬಿಚ್ಚಿಟ್ಟಿರುವ ಎಲ್ಲರೂ ಸ್ವಾತಂತ್ರ್ಯ ಪೂರ್ವದಲ್ಲಿ ಅಂದರೆ ೧೯೨೦ರಿಂದ ೫೦ರ ದಶಕದ ಆಸುಪಾಸಿನಲ್ಲಿ ಜನಿಸಿದವರು. ಈ ಕಾರಣದಿಂದಾಗಿ ಇವರ ಅನುಭವ ಕಥನಗಳು ಆ ಕಾಲಘಟ್ಟದ ಸಾಮಾಜಿಕ, ರಾಜಕೀಯ ಆಯಾಮಗಳನ್ನು ಕುರಿತಂತೆಯೂ ಬೆಳಕನ್ನು ಚೆಲ್ಲುತ್ತವೆ. ಇದರ ಪರಿಣಾಮವಾಗಿ ಅವರ ವೈಯಕ್ತಿಕ ಹಾಗೂ ದಾಂಪತ್ಯ ಬದುಕಿನಲ್ಲಾದ ಏಳು ಬೀಳುಗಳೂ ಇಲ್ಲಿ ಸ್ಥಾನ ಪಡೆದಿವೆ. ಉದಾಹರಣೆಗೆ, ನೀರಾ ದೇಸಾಯಿಯವರು ತನ್ನ ಗಂಡನ ಮನೆಯಲ್ಲಿ ತನ್ನನ್ನು ನಡೆಸಿಕೊಂಡ ಬಗೆಯನ್ನು ಕುರಿತಂತೆ ಹೇಳುವ ಮಾತುಗಳು ಅತ್ಯಂತ ಗಮನಾರ್ಹವಾದವುಗಳು. ಏಕೆಂದರೆ ಗಂಡ ಅಕ್ಷಯರ ತಂದೆ ಪ್ರಮುಖ ಸಾಹಿತಿಯಾಗಿ, ಲಿಂಗ ತಾರತಮ್ಯದ ವಿರುದ್ಧ ಧ್ವನಿ ಎತ್ತುವ '**ಯುಗ ಪ್ರವರ್ತಕ**'ರಾಗಿ ಗುರುತಿಸಿಕೊಂಡಿದ್ದರೂ ಅವರು ನೀರಾರೊಂದಿಗೆ ವ್ಯವಹರಿಸುತ್ತಿದ್ದ ಬಗೆ ಮಾತ್ರ ಸಂಪ್ರದಾಯನಿಷ್ಠ ಮಾದರಿಯದ್ದು. ಅದೇ ರೀತಿ ಕನ್ನಡದ ಹೆಸರಾಂತ ಲೇಖಕ ಪಂಜೆ ಮಂಗೇಶರಾಯರೂ ಸ್ತ್ರೀ ಶಿಕ್ಷಣ, ಸಮಾನತೆಯ ಬಗ್ಗೆ ಕಾಳಜಿ ಹೊಂದಿದವರಾಗಿದ್ದರೂ ಕೂಡ ತಮ್ಮ ಮಗಳ ಮದುವೆಯ ವಿಷಯದಲ್ಲಿ ಇದೇ ರೀತಿಯ ನಿಲುವಿಗೆ ಬದ್ಧರಾಗಿರುವುದನ್ನು ಶಾಂತ ರಾಮೇಶ್ವರಿ ರಾವ್‌ರವರ ಬದುಕಿನ ವಿವರಗಳು ತೆರೆದಿಡುತ್ತವೆ. ಅಲ್ಲದೆ ಈ ಕೃತಿಯಲ್ಲಿನ ಪ್ರತಿಯೊಬ್ಬ ಮಹಿಳೆಯ ಬದುಕಿನ ವಿವರಗಳೂ ಅಂದಿನ ಭಿನ್ನ ಸಾಮಾಜಿಕ ಪರಿಸರದ ನಡುವೆಯೂ ಹೆಣ್ಣು ಹೇಗೆ ಬೇರೆ ಬೇರೆ ರೀತಿಯಲ್ಲಿ ಶೋಷಣೆಯ ವಸ್ತುವಾಗುತ್ತಾಳೆ ಎಂಬುದನ್ನು ತೆರೆದಿಡುವುದರೊಂದಿಗೆ ಅಂದಿನ ಸಾಮಾಜಿಕ ಒತ್ತಡ ಹಾಗೂ ಸನ್ನಿವೇಶಗಳನ್ನು ಮುಕ್ತವಾದ ಚರ್ಚೆಗೆ ಒಳಪಡಿಸುತ್ತದೆ.

ಈ ಕಾಲದ ರಾಜಕೀಯ ಸ್ಥಿತ್ಯಂತರಗಳು ಮಹಿಳೆಯರ ಬದುಕನ್ನು ಆವರಿಸಿರುವ ಹಾಗೂ ಪ್ರಭಾವಿಸಿರುವ ಬಗೆಯನ್ನೂ ಕೂಡ ಇಲ್ಲಿನ ವಿವರಗಳಿಂದ ತಿಳಿಯಲು ಸಾಧ್ಯವಿದೆ. ಸ್ವಾತಂತ್ರ್ಯ ಚಳುವಳಿಯ ಪ್ರೇರಣೆ ಹಾಗೂ ಆ ಸಂದರ್ಭದಲ್ಲಿನ ನಿಜಾಮಶಾಹಿಯ ಮಾನವೀಯ ಮುಖವೊಂದನ್ನು ಶಾಂತ ರಾಮೇಶ್ವರಿ ರಾವ್‌ರ ಕಥನ ಕಟ್ಟಿಕೊಡುತ್ತದೆ. ರಾಮೇಶ್ವರ್‌ಗೆ ನಿಜಾಮ ಪ್ರಭುವಾದರೂ, ಒಬ್ಬ ಸಮಾಜವಾದಿ ಪ್ರಭುವಾಗಿ, ಅದ್ವೈತವಾದಿಯಾಗಿ, ಎಲ್ಲಕ್ಕಿಂತ ಮಿಗಿಲಾಗಿ ತನ್ನನ್ನು ನಂಬಿದವರನ್ನು ಸ್ವಾವಲಂಬಿಯನ್ನಾಗಿಸುವ ಉತ್ತಮ ಸ್ನೇಹಿತನಾಗಿ ಕಡೆಯವರೆಗೂ ಇದ್ದ ಬಗೆಯನ್ನು ತಿಳಿಸುತ್ತದೆ. ಹಾಗೆಯೇ ಶಾರದಾ ಮೋನಿಯವರ ಪತಿ ಗೋಪಿನಾಥನ್ ನಾಯರ್ ರಾಜಕೀಯ ಕಾರ್ಯಕರ್ತರಾಗಿ, ಪತ್ರಕರ್ತರಾಗಿ ದುಡಿಯುವ ಸಂದರ್ಭದಲ್ಲಿ, ಶಾರದ ಗೃಹಿಣಿಯ ಹೊಣೆಗಾರಿಕೆಯನ್ನು ನಿಭಾಯಿಸುವ ಸಂದರ್ಭದ ವಿವರಗಳು ಸಾಮಾಜಿಕ ಹಾಗೂ ರಾಜಕೀಯ ಸನ್ನಿವೇಶಗಳು ಗಂಡು ಮತ್ತು ಹೆಣ್ಣಿಗೆ ಹೇಗೆ ಭಿನ್ನವಾಗಿರುತ್ತವೆ ಹಾಗೂ ಸನ್ನಿವೇಶಗಳನ್ನು ಕಲ್ಪಿಸಿಕೊಡುತ್ತವೆ ಎಂಬುದನ್ನು ತಿಳಿಸುತ್ತವೆ.

ಎಲ್ಲಕ್ಕಿಂತ ಮುಖ್ಯವಾಗಿ ಈ ಕೃತಿ ದಾಂಪತ್ಯ ಹಾಗು ಕುಟುಂಬ ಜೀವನದ ಪರಿಧಿಯಲ್ಲಿ ವಿಸ್ತೃತವಾಗಿ ಹರಡಿಕೊಂಡಿದೆ. ಲಿಂಗ ಶ್ರೇಣೀಕರಣದಲ್ಲಿ ಕುಟುಂಬ ಮತ್ತು ದಾಂಪತ್ಯಗಳು ಹೆಣ್ಣಿಗೆ ಒಂದು ಬಗೆಯಲ್ಲಿ ಬಂಧನದ ಕೇಂದ್ರಗಳೇ ಆದರೂ ಹೆಣ್ಣು ಗಂಡು ಇಬ್ಬರಿಗೂ ಕೂಡ ಇದು ಹೇಗೆ ಅನಿವಾರ್ಯ, ಹಾಗೂ ಪರಸ್ಪರ ಪೂರಕ ಎಂಬುದನ್ನು ಈ ಎಲ್ಲಾ ಕಥಾನಕಗಳೂ ಬಿಚ್ಚಿಡುತ್ತವೆ. ಇಲ್ಲಿನ ಬಹುತೇಕ ಸ್ತ್ರೀಯರು ಗಂಡನ ಆಶಯಕ್ಕೆ ತಕ್ಕಂತೆ ತಮ್ಮ ಬದುಕನ್ನು ರೂಪಿಸಿಕೊಳ್ಳುವ ನಿರಂತರವಾದ ಪ್ರಯತ್ನದಲ್ಲಿ ತೊಡಗಿರುವಂತೆ ಕಂಡುಬಂದರೂ ಯಾವುದೋ ಒಂದು ಸನ್ನಿವೇಶದಲ್ಲಿ ತನ್ನ ಇರುವಿಕೆಯನ್ನು ಗುರುತಿಸಿಕೊಳ್ಳುವ, ತನ್ನ ಆಯ್ಕೆ ಅಭಿರುಚಿಗಳನ್ನು ಸಾಕಾರಗೊಳಿಸಿಕೊಳ್ಳುವತ್ತ ಸಾಗುವುದನ್ನು ಕಾಣಬಹುದು. ರಾಮೇಶ್ವರಿ ವರ್ಮಾ, ಶಾಂತಾ ರಾಮೇಶ್ವರ್ ತಮ್ಮ ಮೊದಲ ಪತಿಯೊಂದಿಗೆ ಹೊಂದಿಕೊಳ್ಳುವ ಆಶಯ ಹುಡಿಗೊಳ್ಳುವ ಅರಿವಿನಿಂದಲೇ ತಮ್ಮ ಬದುಕಿನ ಪರ್ಯಾಯವನ್ನು ಕಟ್ಟಿಕೊಳ್ಳುವತ್ತ ಗಮನಹರಿಸುತ್ತಾರೆ. ಇಳಾ ಭಟ್, ಮೀನಾಕ್ಷಿ ಮುಖರ್ಜಿ, ಶಾರದಾ ಮೋನಿ ಮುಂತಾದವರು ಗಂಡನ ಸಂಪೂರ್ಣ ಸಹಕಾರ ಹಾಗೂ ಪ್ರೋತ್ಸಾಹದ ನಡುವೆಯೂ ತನ್ನ ಬಂಧನ ಹಾಗೂ ಬಿಡುಗಡೆಯ ನೆಲೆಗಳನ್ನು ಕಂಡುಕೊಳ್ಳುವುದು ವಿಶೇಷ. ಇದೆಲ್ಲದರ ನಡುವೆ ದಾಂಪತ್ಯ ಬದುಕಿನ ಸೌಖ್ಯವನ್ನು ಅದರ ಎಲ್ಲಾ ಮಿತಿಗಳ ನಡುವೆಯೂ ಕಾಯ್ದುಕೊಳ್ಳುವ, ಅದಕ್ಕಾಗಿ ಪರಸ್ಪರರ ಕೊಳು ಕೊಡುಗೆಗಳು ಎಷ್ಟು ಮುಖ್ಯ ಎಂಬುದನ್ನು ಗಂಡು ಹೆಣ್ಣು ಎಂಬ ಭಿನ್ನ ಭಾವವಿಲ್ಲದೆ ಸ್ವೀಕರಿಸಬೇಕಾದ ಮೌಲ್ಯ ಎಂಬುದು ಈ ಕೃತಿಯ ಪ್ರಧಾನ ಆಶಯಗಳಲ್ಲೊಂದಾಗಿ ಮೂಡುತ್ತದೆ. ಅದಕ್ಕಾಗಿ ಪರಸ್ಪರರು ತಮ್ಮ ಆಸಕ್ತಿ, ಅಭಿರುಚಿ, ಆಲೋಚನೆಗಳನ್ನು ಕಾಯ್ದುಕೊಳ್ಳುವ ಹಾಗೂ ಒಬ್ಬರಿಗೊಬ್ಬರು ಸಹಾಯ ಸಹಕಾರವನ್ನು ನೀಡುವ ವಿಧಾನ ಪ್ರತಿಯೊಬ್ಬರೂ ಕೂಡ ಅರಿತು ನಡೆಯಬೇಕಾದ ಮುಖ್ಯ ಸಂಗತಿ ಎಂಬುದು ಕೃತಿಯ ಅಧ್ಯಯನದಿಂದ ವ್ಯಕ್ತವಾಗುವ ಮುಖ್ಯ ಅಂಶಗಳಲ್ಲೊಂದು.

ಈ ಕೃತಿಯುಲ್ಲಿ ಇನ್ನೂ ಚರ್ಚಿಸಬೇಕಾದ ಅಂಶಗಳು ಸಾಕಷ್ಟಿವೆಯಾದರೂ ಅತ್ಯಂತ ಮುಖ್ಯವಾಗಿ ಗುರುತಿಸಲೇ ಬೇಕಾದ ಮತ್ತೊಂದು ಪ್ರಮುಖ ಅಂಶ ಈ ಮಹಿಳೆಯರು ಗಂಡನ ಮನೆಯವರೊಂದಿಗಿನ ವೈಮನಸ್ಯಗಳ ನಡುವೆಯೂ ಅವರೊಂದಿಗೆ ಸ್ನೇಹ, ಸೌಹಾರ್ದವನ್ನು ಕಾಯ್ದುಕೊಳ್ಳುವ ರಹದಾರಿಯೊಂದರ ಹುಡುಕಾಟ ತೊಡಗಿರುವ ಬಗೆಯನ್ನು ಕುರಿತದ್ದು. ಆದರೆ ಈ ಎಲ್ಲಾ ಮಹಿಳೆಯರೂ ಮೇಲ್ಮಧ್ಯಮ ವರ್ಗಕ್ಕೆ ಸೇರಿದವರು. ಆ ಕಾರಣದಿಂದಾಗಿ ಇವರ ಸಾಮಾಜಿಕ ಹಾಗೂ ಕೌಟುಂಬಿಕ ಬದುಕು ಹೆಚ್ಚಿನ ತವಕ ತಲ್ಲಣಗಳಿಲ್ಲದೆ ಸಾಗಲು ಸಹಕಾರಿಯಾಗಿದೆ. ಇದು ಒಂದು ವರ್ಗದ ಮಹಿಳೆಯರ ಜೀವನ ವಿಧಾನವನ್ನು ಮಾತ್ರ ಕಟ್ಟಿಕೊಡಲು ಪ್ರಯತ್ನಿಸುತ್ತದೆ. ಅಲ್ಲದೆ ಕೆಲವೆಡೆ ನಿರೂಪಣೆಯಲ್ಲಿನ ಅಸ್ಪಷ್ಟತೆಗಳು, ಪುನರಾವರ್ತನೆಗಳು ಓದುಗರನ್ನು ಗೊಂದಲಕ್ಕೆ ತಳ್ಳಿಬಿಡುತ್ತದೆ. ಇಂತಹ ಕೆಲ ಮಿತಿಗಳಿವೆಯಾದರೂ ಈ ಕೃತಿ ಕಟ್ಟಿಕೊಡುವ ಸಾಮಾಜಿಕ ತಾತ್ವಿಕತೆ ಅದೆಲ್ಲವನ್ನೂ ಮೆಟ್ಟಿ ಓದುಗರ ಮನ ಗೆಲ್ಲುವಲ್ಲಿ ಯಶಸ್ವಿಯಾಗಿದೆ. ದಾಂಪತ್ಯದಲ್ಲಿನ ಒಲುಮೆ, ಪ್ರೀತಿ, ಪ್ರೇಮ, ಸರಸ-ವಿರಸಗಳನ್ನು ಕುರಿತಂತೆ ಈ ಕೃತಿ ಕಟ್ಟಿಕೊಡುವ ವಿವರಗಳು ಪ್ರತಿಯೊಬ್ಬರೂ, ಲಿಂಗ, ವರ್ಗ, ವರ್ಣ, ವಯೋ ಭೇದವಿಲ್ಲದೆ ಓದಿ ತಿಳಿಯಬೇಕಾದ ಬಹು ಮುಖ್ಯವಾದ ಅಂಶಗಳು.

ಇಂತಹ ವಿಶಿಷ್ಟ ಪುಸ್ತಕದ ಈ ಕನ್ನಡ ಅವತರಣಿಕೆಯ ಅನುವಾದ ಸಂಯೋಜಕರಾದ ಡಾ. ಎಂ.ಎಸ್. ಆಶಾದೇವಿಯವರ ಪರಿಶ್ರಮ ಅಭಿನಂದನಾರ್ಹವಾದದ್ದು.

**-ಬಿ.ಎಸ್. ಸುಧಾ**

ಹೊಸ ಮನುಷ್ಯ ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು



**ಯುವರ್ ಚಾಯ್ಸ್**

**ಇಂಟೆಕ್ಸ್** ಮೊಬೈಲ್ ಪೋನುಗಳ
ಸಗಟು ಮಾರಾಟಗಾರರು

**ಲೈನ್ ಬಜ಼ಾರ್**
ಧಾರವಾಡ

'ಹೊಸ ಮನುಷ್ಯ' ಪತ್ರಿಕೆಗೆ
ಹಾರ್ದಿಕ ಶುಭಾಶಯಗಳು



– ಮೋಹನ ಡಿ. ಶಾಸ್ತ್ರಿ
ಮತ್ತು ಕುಟುಂಬ
ಶಿವಮೊಗ್ಗ

**ನಾಲ್ಕನೇ ವರ್ಷಕ್ಕೆ ಕಾಲಿಟ್ಟಿರುವ**
**'ಹೊಸ ಮನುಷ್ಯ'ನಿಗೆ**
**ಹಾರ್ದಿಕ ಶುಭಾಶಯಗಳು**



**–ಪ್ರೊ. ಕಮಲಾ ಹಂಪನಾ**
**ಮತ್ತು ಪ್ರೊ. ಹಂಪನಾ**
**ಬೆಂಗಳೂರು**

HOSA MANUSHYA, a kannada monthly solely owned, edited, published and printed by D. S. Nagabhushana, at HIG-5, Kallahally Extn., Vinoba Nagara, SHIVAMOGGA-577204. Printed at Ila Mudrana, Bengaluru-560 026 Ph.: 080-26757159

**ತಿಂಗಳ ಸಾಲುಗಳು...**



ಪ್ರತಿಯೊಂದು ಕೆಲಸದ ಸಾರ್ಥಕತೆ ಇರುವುದು ಪ್ರಾಪ್ತಿಯಲ್ಲಲ್ಲ, ಪ್ರಯತ್ನದಲ್ಲಿ.

–ವಿನೋಬಾ ಭಾವೆ

**ಪತ್ರಿಕೆಗೆ ಶುಭ ಕೋರುತ್ತಾ...**

**ಬಿ.ಸುರೇಶ**

**ಡಾ. ವಿಜಯಾ**

**Regd. News Paper** RNI No. KARKAN/2012/47568
Rgd No. KA/SK/SMG-1209/2013-15
ಇವರಿಗೆ \ To

If undeliv
Kallahalli